7. ನಿಯಮ 69ರ ಮೇರೆಗೆ

ವಿಷಯ : ಬೆಂಗಳೂರು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಭೂ ಸ್ವಾಧೀನ ಮಾಡುವುದರಲ್ಲಿ ನಡೆದಿದೆ ಎನ್ನಲಾದ ಹಗರಣದ ಬಗ್ಗೆ

†ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಈ ರಾಜ್ಯದ ಜನರ ಗಮನ ಸೆಳೆದಿರುವಂತಹ ಮತ್ತು ಕಳೆದ ನಾಲ್ಕೂವರೆ ವರ್ಷಗಳಲ್ಲಿ ಹಿಂದಿನ ಸರ್ಕಾರ ಯಾವ ಈ ಭೂ ಹಗರಣಗಳಲ್ಲಿ ಒಂದು ರೀತಿ ಕೊಲ್ಯೂಡ್ ಆಗಿತ್ತು, ಅವ್ಯವಹಾರ ನಡೆದಿದೆ ಎನ್ನತಕ್ಕಂತಹ ಭಾವನೆ ಜನರ ಮನಸ್ಸಿನಲ್ಲಿ ಇದೆ, ಈ ವಿಷಯದ ಬಗ್ಗೆ ಸನ್ಮಾನ್ಯ ಮಾಧುಸ್ವಾಮಿಯವರು, ಜಗದೀಶ್ ಶೆಟ್ಟರ್‌ರವರು, ಶ್ರೀರಾಮರೆಡ್ಡಿಯವರು, ಮತ್ತು ವಾಟಾಳ್ ನಾಗರಾಜ್‌ರವರು ಮತ್ತು ಇತರ ಎಲ್ಲಾ ಸದಸ್ಯರು ನಾವು ನಿಯಮ 69ರ ಮೇರೆಗೆ ಚರ್ಚೆ ಮಾಡುವುದಕ್ಕೆ ವಿನಂತಿ ಮಾಡಿದ್ದೇವೆ. ಈಗಾಗಲೇ ಸನ್ಮಾನ್ಯ ಮಾಧುಸ್ವಾಮಿಯವರು ಇದರ ಬಗ್ಗೆ ಪ್ರಸ್ತಾಪ ಪ್ರಾರಂಭ ಮಾಡಿ ಅನೇಕ ಪ್ರಮುಖವಾದ ವಿಷಯಗಳನ್ನು ಚರ್ಚೆಗೆ ತಂದಿದಾರೆ. ಈ ಹಿಂದೆ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಯಾವ ಭು ಹಗರಣ ನಡೆದಿದೆ, ಅದರ ಬಗ್ಗೆ ಮತ್ತು ಈ ಭ್ರಷ್ಟಾಚಾರ ನೆಲಗಳ್ಳರ ಬಗ್ಗೆ ವಿಶೇಷ ನ್ಯಾಯಾಲಯ ರಚಿಸಿ ಜೈಲಿಗೆ ಕಳುಹಿಸುತ್ತೇವೆಂದು ಜೆಡಿಎಸ್‌ನವರು ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರು. ನಾವು ಕಾತುರತೆಯಿಂದ ಕಾಯುತ್ತಿದ್ದೇವೆ, ಈ ಚರ್ಚೆ ಆದ ಮೇಲಾದರೂ ಸಹ, ಜೈಲಿಗೆ ಕಳುಹಿಸಬಹುದು ಎಂದು ನಾನು ಬೇರೆ ಯಾವುದೇ ತನಿಖೆ ಒತ್ತಾಯ ಮಾಡುವುದಿಲ್ಲ. ಈ ನಾಡಿನ ಐದು ಕಾಲು ಕೋಟಿ ಜನರ ಮುಂದೆ ಚುನಾವಣೆ ಸಂದರ್ಭದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಬಹಳ ಸ್ಪಷ್ಟವಾಗಿ ನಮ್ಮ ಜೆಡಿಎಸ್ ನಾಯಕರು ನಮಗೆ ಒಂದು ಸಾರಿ ನೀವು ಅವಕಾಶ ಮಾಡಿ ಕೊಟ್ಟರೆ, ಈ ರಾಜ್ಯದಲ್ಲಿ ಆಗಿರುವಂತಹ ಭು ಹಗರಣಗಳ ಬಗ್ಗೆ ನಾವು ಒಂದು ವಿಶೇಷ ನ್ಯಾಯಾಲಯ ರಚನೆ ಮಾಡಿ, ತನಿಖೆ ಮಾಡಿಸಿ, ಸಂಬಂಧಪಟ್ಟ ಅಧಿಕಾರಿಗಳನ್ನು ರಾಜಕಾರಿಣಿಗಳು ಯಾರು ಶಾಮೀಲಾಗಿದ್ದಾರೆ ಅವರನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಅವರನ್ನು ಜೈಲಿಗೆ ಕಳುಹಿಸುತ್ತೇವೆ ಎನ್ನುವಂತಹ ಭರವಸೆಯನ್ನು ತಾವು ಕೊಟ್ಟಿದ್ದೀರಿ. ಅದ್ದರಿಂದ ಈ ಚರ್ಚೆ ಆದ ಮೇಲೆ ನಾನು ಮುಖ್ಯ ಮಂತ್ರಿಗಳಿಂದ ಅಪೇಕ್ಷೆಪಡುವಂಥದ್ದು ಒಂದೇ ಒಂದು ಏನೆಂದರೆ, ಇದರ ಬಗ್ಗೆ ಸ್ಪೆಷಲ್ ಕೋರ್ಟನ್ನು ನೇಮಕ ಮಾಡಿ ತನಿಖೆ ನಡೆಸುತ್ತೇವೆಂಬ ಭರವಸೆಯನ್ನು ಕೊಟ್ಟು ತನಿಖೆಗೆ ಅಳವಡಿಸಬೇಕು. ನ್ಯಾಯ ಸಿಗಬೇಕು, ತಪ್ಪಿತಸ್ಥರು ಯಾರಿದ್ದಾರೆ ಅವರು ಎಷ್ಟೇ ದೊಡ್ಡವರಾಗಿದಲಿ ಅವರನ್ನು ಜೈಲಿಗೆ ಕಳುಹಿಸಬೇಕೆನ್ನುವುದು ನಮ್ಮ ಪಕ್ಷದ ಸ್ಪಷ್ಟವಾದ ನಿಲುವು. ಇದನ್ನು ಈಗಾಗಲೇ ಬಜೆಟ್ ಭಾಷಣದ ಸಮಯದಲ್ಲಿ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ಅವಕಾಶ ಸಿಕ್ಕಾಗ ನಾನು ಈ ಮಾತನ್ನು ಹೇಳಿದ್ದೇನೆ. ಒಂದು ರೀತಿ ಬಹಳ ಸ್ಪಷ್ಟವಾಗಿ ನಾನು ಹೇಳುತ್ತೇನೆ, ಕಳೆದ ನಾಲ್ಕೂವರೆ ವರ್ಷಗಳಲ್ಲಿ ಒಂದು ರೀತಿ ರಿಯಲ್ ಎಸ್ಟೇಟ್ ಏಜೆಂಟ್‌ರಂತೆ ಆವೊತ್ತಿನ ಆಡಳಿತ ನಡೆಸುವವರು ಮಾಡಿದರು ಎಂದು ನಾನು ನೇರವಾಗಿ ಆರೋಪ ಮಾಡುತ್ತೇನೆ. ಮನೆ ಮನೆಯಲ್ಲಿ ಇದು ಚರ್ಚೆಯಾಗುತ್ತಿರುವ ವಿಷಯ. ಇವತ್ತು ನಾನು ಅನೇಕ ದಾಖಲೆಗಳನ್ನು ಕೊಡುವುದಿಲ್ಲ. ವಿವರವನ್ನೂ ನಾನು ಕೊಡುವುದಿಲ್ಲ. ಯಾವ ರೀತಿಯ ತನಿಖೆ ಮಾಡಿಸುತ್ತೀರಿ ಎಂದು ಭರವಸೆ ಕೊಡುತ್ತೀರಿ ಅದರ ನಂತರ ನಾನು ಆ ವಿವರವನ್ನು ಕೊಡುತ್ತೇನೆ. ನನ್ನ ಪ್ರಕಾರ ಆವತ್ತು ಅಧಿಕಾರದಲ್ಲಿದ್ದಂತಹ ಮೂರು –ನಾಲ್ಕು ಸಚಿವರು ಕನಿಷ್ಟ ಒಂದೊಂದು ಸಾವಿರ ಕೋಟಿರೂಗೂ ಹಣವನ್ನು ಈ ಭೂ ಹಗರಣಗಳಲ್ಲಿ ಮಾಡಿಕೊಂಡಿದ್ದಾರೆ

ಎನ್ನುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಬೆಂಗಳೂರಿನ ಸುತ್ತಮುತ್ತ ಏನೂ ಬಿಡಲಿಲ್ಲ. ಎಲ್ಲ ಖಾಲಿ ಮಾಡಿದರು. ಸರ್ಕಾರದ ಸ್ವಾಮ್ಯತೆ ಇದ್ದಂತಹ ಎನ್‌ಜಿಇಎಫ್ ನಂತರ ದೊಡ್ಡ ದೊಡ್ಡ ಕೈಗಾರಿಕೆಗಳು ಸೇರಿಕೊಂಡು ಇವರ ಕೆಂಗಣ್ಣು ಅಲ್ಲಿಗೆ ಬಿತ್ತು. ಒಂದೊಂದು ಎಕರೆ ಇವತ್ತು ಐದಾರು ಕೋಟಿ ರೂಪಾಯಿಗೂ ಸಿಗುವುದಿಲ್ಲ. ಪ್ರಮುಖವಾದ ಪ್ರದೇಶಗಳಲ್ಲಿ ಇರುವುದು, ಅದನ್ನು ಮನಬಂದಂತೆ ಬೇಕು ಬೇಕಾದವರಿಗೆ ಮಾರಾಟ ಮಾಡಿಕೊಂಡರು. ಬಹುಶಃ ನನಗೆ ನೆನಪು ಇರುವ ಹಾಗೆ ರಾಜ್ಯದ ಇತಿಹಾಸದಲ್ಲಿ ಹಿಂದೆ ಅಧಿಕಾರ ನಡೆಸಿದಂತಹ ಯಾರೂ ಸಹ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಂಗಳೂರು ಸುತ್ತಮುತ್ತ, ಬೆಂಗಳೂರು ನಗರದಲ್ಲಿ ಭೂಮಿಯನ್ನು ಪರಭಾರೆ ಮಾಡುವಂತಹ ರಿಯಲ್ ಎಸ್ಟೇಟ್ ಕೆಲಸವನ್ನು ಸರ್ಕಾರವೇ ಮಾಡಿದ್ದು ನಾನು ಕಾಣಲಿಲ್ಲ. ಅದು ಆಗಿ ಹೋಯಿತು. ಐಟಿ ಪಾರ್ಕ್ ಮಾಡುತ್ತೇವೆಂದು ಹೇಳಿದರು, ರೈತರಿಗೆ ಬೆದರಿಸಿ ಜಮೀನು ಅಕ್ವೈರ್ ಮಾಡಿಕೊಂಡು, ಇಂಡಸ್ಟ್ರಿ ಡಿಪಾರ್ಟ್‌ಮೆಂಟ್ ನವರು ನಾವು ಇಂಡಸ್ಟ್ರಿ ಡೆವಲಪ್‌ಮೆಂಟ್ ಮಾಡುತ್ತೇವೆಂದು ಹೇಳಿ ಜಮೀನು ಅಕ್ವೈರ್ ಮಾಡಿಕೊಂಡರು, ನಂತರ ಅದನ್ನು ಡೀನೋಟಿಫೈ ಮಾಡಿದಿರಿ. 10,20,30,40 ಮತ್ತು 50 ಲಕ್ಷಕ್ಕೆ ಬೆಲೆ ಇಲ್ಲ. ಡಿನೋಟಿಫೈ ಮಾಡಿದ್ದಾರೆ. ಎಲ್ಲಾ ವ್ಯವಹಾರಗಳನ್ನು ಕುದುರಿಸಿರುವುದರಿಂದ ಸಾಮಾನ್ಯ ಜನ ಮಾತನಾಡುವ ಪರಿಸ್ಥಿತಿಗೆ ತಂದಿರಿ. ಈ ರೀತಿ ಹಗರಣಗಳು ಏನು ಬೆಂಗಳೂರು ಸುತ್ತಮುತ್ತ ನಡೆದಿವೆ, ಇದನ್ನು ಯಾವ ಕಾರಣಕ್ಕೂ ಸಹ ಕ್ಷಮಿಸುವುದಕ್ಕಾಗುವುದಿಲ್ಲ. ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಒಂದೊಂದು ಸಾರಿ ಭಯವಾಗುತ್ತದೆ. ಕೆಲವು ಸಂಘಸಂಸ್ಥೆಗಳು ಲೇಔಟ್ ಮಾಡಿಕೊಂಡಿದ್ದಾರೆ. ನಮ್ಮ ಬಿಡಿಎಗಿಂತ ಸಾವಿರ ಪಟ್ಟು ಹೆಚ್ಚು ಜನರಿಗೆ ಸೈಟುಗಳನ್ನು ಕೊಟ್ಟು ಮನೆ ಕಟ್ಟಿಕೊಂಡು ಅವರು ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾರೆ. ಅವರು ಈಗಲೂ ಸೈಟುಗಳನ್ನು ಮಾಡುತ್ತಿದ್ದಾರೆ ಆದರೆ ಇತ್ತೀಚಿನ ದಿವಸಗಳಲ್ಲಿ ರೈತನಿಗೆ ಮೋಸ ಮಾಡಿ ಸರ್ಕಾರದ ಮೂಲಕ ಜಮೀನು ಅಕ್ವೈರ್ ಮಾಡಿಕೊಂಡು ಡೀನೋಟಿಫೈ ಮಾಡಿಸುವುದು, ಲೂಟಿ ಮಾಡುವುದು, ಇಂತಹ ನೂರಾರು ಹಗರಣಗಳೂ ನಮ್ಮ ಕಣ್ಣ ಮುಂದೆ ಇವೆ. ಈಗ ದಾಖಲೆಗಳ ವಿವರಗಳನ್ನು ಒಂದೆರಡು ಕೊಡುತ್ತೇನೆ. ನೀವು ಏನು ಮಾಡಬಹುದು, ನನ್ನ ಅನುಭವಕ್ಕೆ ಬಂದಿರುವ ಪ್ರಕಾರ ಏನೇನು ಇಲ್ಲಿ ಪ್ರಸ್ತಾಪ ಮಾಡುತ್ತೇವೆ, ಅದಕ್ಕೆ ಪರಿಹಾರ ಸಿಗಲಿಲ್ಲ, ರಕ್ಷಣೆ ಸಿಕ್ಕಿತು. ಹೆಚ್ಚು ಲಾಭ ಮಾಡಿಕೊಳ್ಳುವಂತಹ ಪಿತೂರಿ ಒಳ ವ್ಯವಹಾರಗಳು ನಡೆದವು. very unfortunate ವಾಟಾಳ್ ನಾಗರಾಜ್‌ರವರು ಇದ್ದಾರೆ ಹೇಳಬೇಕೋ ಬೇಡವೋ, ನಾಗರಾಜ್, ಏನು ಯಡಿಯೂರಪ್ಪನವರೇ, ಏನು ಕಂಡಿದಿರಿ, ಚರ್ಚೆ ಮಾಡುತ್ತಲೇ ಇದ್ದೀರಿ, ಪರಿಹಾರ ಏನು ಕಂಡುಹಿಡಿದಿರಿ? ಕರೀಂ ಲಾಲಗೆ ಸಹಕಾರ ಕೊಟ್ಟ ಸಚಿವರ ಮೇಲೆ ಆರೋಪ ಮಾಡಿದಿರಿ, ಜೈಲಿಗೆ ಹೋದರೂ ಯಡಿಯೂರಪ್ಪನವರೇ ಎಂದು ಜನ ನಮಗೆ ಕೇಳುತ್ತಾರೆ. ಸಾಕ್ಷಿಗಳು ಸಿಕ್ಕಿತಾ ಎಂದು ಕೇಳುತ್ತಾರೆ, ನರಹಂತಕ ವೀರಪ್ಪನ್‌ಗೆ ಆಹಾರ ಕೊಟ್ಟನಲ್ಲಾ ಅವನು ಇವತ್ತು ಜೈಲಿನಲ್ಲಿ ಇದ್ದಾನೆ. ದುಡ್ಡು ಕೊಟ್ಟವನು ರಸ್ತೆಯಲ್ಲಿ ಮರೆಯುತ್ತಿದ್ದಾನೆ. ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಎಂ.ಎಲ್‌ಎಗಳಾಗಿರಬಹುದು, ಮಂತ್ರಿಗಳಾಗಿರಬಹುದು, ಮುಖ್ಯಮಂತ್ರಿಗಳೂ ಆಗಬಹುದು, ಸ್ಥಾನ ಮಾನ ಗಳಿಸಬಹುದು, ಯಾರು ಸಹಾಯ ಮಾಡುತ್ತಿದ ಎಂದು ನರಹಂತಕ ವೀರಪ್ಪನ್‌ಗೆ ಆಹಾರ ಸಾಮಗ್ರಿಗಳನ್ನು ಒದಗಿಸುತ್ತಿದ್ದನು ಅವನು ಜೈಲಿನೊಳಗಿದ್ದಾನೆ, ಅವರ ಹೆಸರಲ್ಲಿ ನೂರಾರು ಕೋಟಿ ರೂ ಸಂಗ್ರಹ ಮಾಡಿ 40 ಕೋಟಿ ರೂ ತಲುಪಿಸಿದವರು ರಾಜಾರೋಷವಾಗಿ ರಸ್ತೆಯಲ್ಲಿ ಓಡಾಡುತ್ತಿದ್ದಾರೆ ಯಡಿಯೂರಪ್ಪನವರೇ, ನಮಗೆ ಗೊತ್ತಿದೆ ಕೂತುಕೊಳ್ಳಿ ಮಾತನಾಡಬೇಡಿ ಎಂದು ಸಾಮಾನ್ಯ ನಮ್ಮನ್ನು ಬೀದಿಯಲ್ಲಿ ಕೇಳುತ್ತಾರೆ.

ಚುನಾಯಿತ ಪ್ರತಿನಿಧಿಗಳು ನಾವು ಹೇಗೆ ಕೆಲಸ ಮಾಡಬೇಕೆಂಬುದು ನನಗೆ ಅಂಥೂ ಅರ್ಥವಾಗುತ್ತಿಲ್ಲ. ಯಾವುದಿದೊ ಒಬ್ಬ ಅಕ್ಕಿ ಹಗರಣ ಪ್ರಸ್ತಾಪ ಮಾಡಿದೇವು ವ್ಯಕ್ತಿಯನ್ನು ಅಥವಾ ಸರ್ಕಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಮಾತನಾಡಲಿಲ್ಲ. ನಾನು ಮಂಗಳೂರಿಗೆ ಹೋಗಿದ್ದೆ. ಇಲ್ಲಿರುವ ಸದಸ್ಯರಿಗೆ ನಾನು ವಿನಂತಿ ಮಾಡುತ್ತೇನೆ, ನೀವು ಹೋಗಿ ಬನ್ನಿ ಸ್ವಾಮಿ. ನಾನು ಹೋಗಿದ್ದೆ, ಅಕ್ಕಿ ನೋಡಿಕೊಂಡು ಬಂದೆ. ಇದು 25 ದಿವಸಗಳ ಹಿಂದಿನ ಮಾತು. ಅಲ್ಲಿರುವ ಅಕ್ಕಿ ಚೀಲಗಳಲ್ಲಿ ಒಂದು ಚೀಲವಾಗಲಿ ಜನರ ಉಪಯೋಗಕ್ಕೆ ಅಥವಾ ಬ್ಲಾಕ್ ಮಾರ್ಕೆಟ್‌ನಲ್ಲಿ ಖರೀದಿ ಮಡಿದಂಥವನಿಗಾಗಲಿ ಉಪಯೋಗ ಆಗುತ್ತಿದೆಯೇ ಎಂದರೆ, ಇಲ್ಲ. ಹದಿನಾರು ಕೋಟಿ ರೂಪಾಯಿಗಳ ಅಕ್ಕಿ ಸಂಪೂರ್ಣವಾಗಿ ಬೂದಿಯಾಗಿ ಭಸ್ಮವಾಗಿದೆ. ನಿನ್ನೆಯಲ್ಲ, ಮೊನ್ನೆ ಆ ಸ್ಥಳಕ್ಕೆ ಮುಖ್ಯಮಂತ್ರಿಗಳು ಹೋಗಿದ್ದಾಗ ಅಲ್ಲಿಗೆ ಹೋಗಿಬರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಹೋಗಲಿಲ್ಲ, ವಿಸಿಟ್ ಮಾಡಲಿಲ್ಲ. ಅಂದರೆ ಈ ಸದನದಲ್ಲಿ ಈ ಕಡೆ ಕುಳಿತಂಥವರು ಯಾವ ಸತ್ಯಾಂಶಗಳನ್ನು ಸರ್ಕಾರದ ಗಮನಕ್ಕೆ ತರುವಂಥ ಪ್ರಯತ್ನವನ್ನು ಮಾಡುತ್ತೇವೆಯೋ ಅವೆಲ್ಲಕ್ಕೂ ರಕ್ಷಣೆ ಸಿಗುತ್ತಿದೆಯೇ ಹೊರತು ಶಿಕ್ಷೆ ಅಗಲಿಲ್ಲವೆಂದು ಸಾಮಾನ್ಯ ಜನರು ಮಾತನಾಡುವಂಥದ್ದು. ಆದುದರಿಂದ ಈ ಚರ್ಚೆಗಳ ಬಗ್ಗೆ ಪತ್ರಿಕೆಗಳಲ್ಲಿ ಬರುವುದರ ಬಗ್ಗೆ ಜನರು ಓದುತ್ತಾರೆ, ಮರೆಯುತ್ತಾರೆ, ಜನರಿಗೆ ವಿಶ್ವಾಸವೇ ಹೊರಟುಹೋಗುತ್ತಿದೆ. ಕಳೆದ ಹದಿನೆಂಟು, ಇಪ್ಪತ್ತು ವರ್ಷಗಳ ಕಾಲ ಈ ಕಡೆ ವಿರೋಧ ಪಕ್ಷದಲ್ಲಿ ಇದ್ದು ನಾವು ಕೂಗಿದಂಥದ್ದು, ನಾವು ಮಾತನಾಡಿದಂಥದ್ದು, ಇವುಗಳ ಮೇಲೆ ಎಲ್ಲಾದರೂ ಒಂದು ಕಡೆ ಯಾರೋ ಒಬ್ಬರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆಯಾಗಿ ಜೈಲಿಗೆ ಹಾಕುವ ಪನಿಷ್‌ಮೆಂಟ್ ಆಗಿರುವ ಒಂದು ಉದಾಹರಣೆ ನಮಗೆ ಸಿಕ್ಕಿದ್ದರೆ ನಮಗೆ ಸಮಾಧಾನವಾದರೂ ಆಗುತ್ತಿತ್ತು. ಇಲ್ಲಿಗೆ ಬಂದು ಚುನಾಯಿತ ಪ್ರತಿನಿಧಿಯಾಗಿ ಕೆಲಸ ಮಾಡಿದ್ದಕ್ಕೂ ಸಾರ್ಥಕವಾಯಿತು ಎಂದು ತಿಳಿದು ಕೊಳ್ಳಬಹುದಿತ್ತು. ಯಾರೋ ಸಣ್ಣ ಪುಟ್ಟ ಕೆಲಸಕ್ಕೆ ಬಾರದ ಅಧಿಕಾರಿಗಳು ಜೈಲಿಗೆ ಹೋಗಿರಬಹುದು. ಅಂಥವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನವನ್ನು ಮಾಡಿರಬಹುದೆಯೇ ಹೊರತು ಅವರನ್ನು ಉಪಯೋಗ ಮಾಡಿಕೊಂಡವರು ನಾವು. ಅವರನ್ನು ನಂಬಿ ಆ ಸರ್ಕಾರದಲ್ಲಿದ್ದವರು ಸಹಕಾರ ಕೊಟ್ಟರು. ಈಗ ಅವರು ಜೈಲಿನಲ್ಲಿದ್ದಾರೆ. ಆದರೆ ನಿಮ್ಮ ಹೆಂಡತಿ ಮಕ್ಕಳು ನೆಮ್ಮದಿಯಿಂದ ಮನೆಯಲ್ಲಿದ್ದಾರೆ. ಈ ರೀತಿ ಇವೊತ್ತಿನ ದಿವಸ ನಡೆಯುತ್ತಿರುವ ರೀತಿಯಾಗಿದೆ. ಅದಕ್ಕಾಗಿ ನಾನು ಸಿದ್ದರಾಮಯ್ಯನವರಲ್ಲಿ ವಿನಂತಿಸುವುದೇನೆಂದರೆ ತಮಗೆ ನೋವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ ಮತ್ತು ತಾವು ನಿರ್ಭೀತಿಯಿಂದ ಕೆಲಸ ಮಾಡಬೇಕೆಂದೇ ಆಡಳಿತಕ್ಕೆ ಬಂದಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ದಯಮಡಿ ತಾವೇನು ಜನರ ಮುಂದೆ ಒಂದು ಕಮಿಟ್‌ಮೆಂಟ್ ಮಾಡಿಕೊಂಡಿದ್ದೀರೋ ಸ್ಪೆಷಲ್ ಕೋರ್ಟ್ ಮಾಡಿ ತನಿಖೆ ಮಾಡಿಸುತ್ತೇವೆ ಎಂದು ಅದನ್ನು ಮಾಡಿ. ಎಲ್ಲರನ್ನೂ ಜೈಲಿಗೆ ಕಳುಹಿಸುವುದಕ್ಕಾಗುವುದಿಲ್ಲ, ನಾಳೆ ದಿವಸ ನಾವು ಆಡಳಿತಕ್ಕೆ ಬಂದರೂ ಆ ರೀತಿ ಮಾಡುವುದಕ್ಕಾಗುವುದಿಲ್ಲ. ತಪ್ಪು ಮಾಡಿದಂಥವರು ಎಷ್ಟೇ ದೊಡ್ಡವರಿರಲಿ, ಇಂಥವರನ್ನು ಸ್ಪೆಷಲ್ ಕೋರ್ಟ್ ಮೂಲಕ ಜೈಲಿಗೆ ಕಳುಹಿಸಿದಿರಿ ಎಂದರೆ ಆಗ ಸಿದ್ದರಾಮಯ್ಯನವರು ದೇವರ ದಯದಿಂದ ಇನ್ನೂ ಹೆಚ್ಚಿನ ಸ್ಥಾನಮಾನಗಳನ್ನು ಪಡೆಯಬಹುದು. ಆ ರೀತಿಯಾದರೆ ನಾನು ಸಂತೋಷಪಡುತ್ತೇನೆ. ಏಕೆಂದರೆ ಸಿದ್ಧರಾಮಯ್ಯನವರೆ, ಸ್ಥಾನಮಾನಗಳನ್ನು ಪಡೆಯಲು ಹಣೆಯಲ್ಲಿ ಬರೆದಿರಬೇಕು, ಎಂಥೆಂಥವರು ಸ್ವಾತಂತ್ರ್ಯ ಪೂರ್ವದಲ್ಲಿ ಈ ದೇಶಕ್ಕಾಗಿ ದುಡಿದಿದ್ದಾರೆ, ಅವರುಗಳೇನಾದರೂ

ಮಂತ್ರಿಗಳಾದರೆ? ಪ್ರಧಾನಿಗಳಾದರೆ? ಅವರು ಅದನ್ನು ಅಪೇಕ್ಷೆ ಕೂಡ ಪಡಲಿಲ್ಲ. ಇವೊತ್ತಿನ ವ್ಯವಸ್ಥೆಯಲ್ಲಿ ಈ ಗೊಂದಲದ ವಾತಾವರಣದ ಮಧ್ಯ ಯಾವುದೋ ಸ್ಥಾನಮಾನಗಳು ಕೆಲವರಿಗೆ ಸಿಕ್ಕಿದ್ದರೆ ಮತ್ತು ಆ ಕಡೆ ಅಂಥವರು ಕುಳಿತು ಒಳ್ಳೆಯ ಕೆಲಸವನ್ನು ಮಾಡಿದರೆ ನಾವು ಸಂತೋಷ ಪಡುತ್ತೇವೆ. ನೀವು ಮಾಡಿ ಆ ಕೆಲಸವನ್ನು. ಚರ್ಚೆಯಾದ ಮೇಲೆ ನೀವು ನನಗೆ ಯಡಿಯೂರಪ್ಪನವರೇ ನಮಗೆ ಕಮಿಟ್‌ಮೆಂಟ್ ಇದೆ, ಅದಕ್ಕಾಗಿಯೇ ನಾವು ಇಷ್ಟು ಸೀಟ್‌ಗಳನ್ನು ಚುನಾವಣೆಯಲ್ಲಿ ಗೆದ್ದಿದ್ದೇವೆ, ಸರಿಯೋ ತಪ್ಪೋ ನೀವು ಜಾತಿವಾದಿಗಳು ಬಿ.ಜೆ.ಪಿ.ಯವರು, ನೀವು ಕಮ್ಯೂನಲ್ ಇದ್ದೀರಿ, ನಿಮ್ಮ ಜೊತೆ ಇರುವುದು ಒಳ್ಳೆಯದು ಎಂಬುದು ನಮಗೆ ಗೊತ್ತು ಆದರೆ ನಮಗೆ ಅಲ್ಪಸಂಖ್ಯಾತರ ಓಟು ಸಿಗುವುದಿಲ್ಲ, ಕಿವಿಯಲ್ಲಿ ಬಂದು ಹೇಳುತ್ತಾರೆ, ಇಲ್ಲಾರೀ ನೀವು ಸರಿ ಇದ್ದೀರಿ ಎಂದು; ಆದರೆ ಆಮೇಲೆ ಹೊಂದಾಣಿಕೆ ಮಾತ್ರ ಬೇಡ ಎಂದು ಹೇಳುತ್ತಾರೆ. ಏಕೆಂದರೆ ಸರಿ ಇದೆಯೆಂದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಮ್ಮದೊಂದು ವಿಚಾರ. ಅಲ್ಪಸಂಖ್ಯಾತರನ್ನು, ಬೇರೆಯವರನ್ನು ತೃಪ್ತಿಪಡಿಸಿ ಇವೊತ್ತು ಅಧಿಕಾರಕ್ಕೆ ಬರಬೇಕು ಎಂಬುದು ನಿಮ್ಮ ಚಟ. ಆದರೆ ನಾವು ಸಾಯೋವರೆಗೂ ವಿರೋಧ ಪಕ್ಷದಲ್ಲಿದ್ದರೂ ಪರವಾಗಿಲ್ಲ ನಮ್ಮ ತತ್ವ, ನೀತಿ ಮತ್ತು ಸಿದ್ಧಾಂತವನ್ನು ಬಿಡಬಾರದು ಎನ್ನುವಂತ ಹುಚ್ಚು ಹಠ ನಮ್ಮದು. ನೀವು ಬೇಕಾದರೆ ನಮ್ಮನ್ನು ಹುಚ್ಚರು ಎಂದು ಬೇಕಾದರೂ ಕರೆಯಿರಿ. ಇನ್ನು ಈ ಸದನದಲ್ಲಿ ಎನ್.ಜಿ.ಇ.ಎಫ್. ಬಗ್ಗೆ ಚರ್ಚೆಯಾಯಿತು ವಾಟಾಳ್ ನಾಗರಾಜ್‌ರವರೇ ಈ ಕಾರ್ಖಾನೆ ದೇಶದಲ್ಲಿಯೇ ಅತ್ಯಂತ ಪ್ರಖ್ಯಾತವಾಗಿತ್ತು. ಇಡೀ ದೇಶಕ್ಕೇ ಬೇಕಾದಂಥ ಎಲ್ಲಾ ತರಹದ ಮೋಟಾರ್ಸ್‌ಗಳನ್ನು ಮತ್ತು ಬೇರೆ ಅನೇಕ ಸಾಮಾಗ್ರಿಗಳನ್ನು ತಯಾರಿಸುತ್ತಿತ್ತು. ನಮ್ಮ ದೆಹಲಿಯಲ್ಲಿ ಕಛೇರಿ ಇದೆ. ಎಲ್ಲಾ ಬೇಡಿಕೆ ಇದೆ. ಅದನ್ನು ಮುಚ್ಚು ಹಾಕಿದರು. ಸುತ್ತುಮುತ್ತಲು ಇದ್ದ ಜಮೀನನ್ನು ಹರಾಜು ಹಾಕಿದರು; ಮಾರಿಕೊಂಡರು. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಲಿಲ್ಲ, ಚರ್ಚೆಯನ್ನು ಮಾಡಿದೆವು, ಅದು ಏನಾಯಿತೋ, ಎಷ್ಟು ಕೋಟಿ ಬೆಲೆ ಬಾಳುತ್ತಿತ್ತೋ ನಮಗೆ ಗೊತ್ತಿಲ್ಲ. ಇನ್ನು ವಾಟಾಳ್‌ರವರೇ, ನಿಮ್ಮ ಹತ್ತಿರ ಕೂಡ ಅರ್ಕಾವತಿ ಲೇಔಟ್‌ಗೆ ಸಂಬಂಧಪಟ್ಟಂತೆ ವಿವರದ ಪ್ರತಿ ಇರಬಹುದು. ಈ ಬಿ.ಡಿ.ಎ.ದವರು ಜಮೀನುಗಳನ್ನು ಅರ್ಕಾವತಿ ಲೇಔಟ್‌ಗಾಗಿ ಅಕ್ವಿಜಿಶನ್ ಮಾಡಿದರು. B.D.A has issued 4(1) notification on 3-2-2003 for 3,339 acres 12 guntas ಇದನ್ನು ಮಾಡಿದಾಗ ಬಿ.ಡಿ.ಎ.ದವರು ಒಂದು ಮ್ಯಾಜಿಕ್ ಮಾಡಿದರು. ಇವರು ಲೆಕ್ಕದಲ್ಲಿ 3339 ಎಕರೆ 12 ಗುಂಟೆ ಎಂದು ಗೆಜೆಟ್ ನೋಟಿಫಿಕೇಶನ್‌ನಲ್ಲಿ ತೋರಿಸಿದರು. ಅಧ್ಯಕ್ಷರೆ, ನಿಮಗೂ ಈ ಪ್ರತಿಯನ್ನು ಕಳುಹಿಸಿಕೊಡುತ್ತೇನೆ, ನೋಡಿ. ಬೃಹಸ್ಪತಿಗಳು ಹೇಗಿದ್ದಾರೆ ನೋಡಿ, ಅವರ ಕೈ ಕತ್ತರಿಸಬೇಕು. ಇದರಲ್ಲಿ ಶಾಮೀಲಾದವರ ಹಾಗೂ ಅಧಿಕಾರಿಗಳ ಕೈ ಕತ್ತರಿಸಬೇಕು. ದೇಶಪಾಂಡೆಯವರೆ, ಅವರು ಕೊಟ್ಟಿರುವುದನ್ನು ಟೋಟಲ್ ಮಾಡಿದರೆ 3839 ಎಕರೆ 12 ಗುಂಟೆ. ಗೆಜೆಟ್ ನೋಟಿಫಿಕೇಶನ್‌ನಲ್ಲಿ ಹೇಳಿದ್ದು 3339 ಎಕರೆ 12 ಗುಂಟೆ. ಅಂದರೆ ಇವರು 500 ಎಕರೆಯನ್ನು ಟೋಟಲ್ ಮಾಡಬೇಕಾದರೆ ಕಡಿಮೆ ಮಾಡಿಬಿಟ್ಟಿದ್ದಾರೆ. ಕೂಡೋದು ಮತ್ತು ಕಳೆಯುವುದು ಬರುವುದಿಲ್ಲವೇ ಇವರಿಗೆ. ಲೆಕ್ಕ ಮಾಡುವುದಕ್ಕೆ ಬರುವುದಿಲ್ಲವೆ? ಈ 500 ಎಕರೆ ಎಲ್ಲಿದೆ, ಗೊತ್ತಿಲ್ಲ, ಹಗಲು ದರೋಡೆಯಾಗಿದೆ. ಆಮೇಲೆ ಆ ಸರ್ವೆ ನಂಬರ್‌ಗಳಲ್ಲಿ ನೀವು ಅಕ್ವೈರ್ ಮಾಡಿಕೊಂಡಿರುವುದರಲ್ಲಿ ವಾಸ್ತವದಲ್ಲಿ ಎಷ್ಟು

ಸರ್ವೆ ನಂಬರ್ ಇದೆಯೆಂದು ನೋಡುವುದಕ್ಕೆ ಹೋದರೆ ಅಲ್ಲಿ 4024 ಎಕರೆ 19 ಗುಂಟೆ. ಅಂದರೆ ಅದರಲ್ಲೂ ಕೂಡ 185 ಎಕರೆ 7 ಗುಂಟೆ ಕೈಬಿಟ್ಟಿದ್ದಾರೆ. ಈಗ ನಾನು ಕೇಳುವಂಥದ್ದು ಏನೆಂದರೆ ಈ 500 ಎಕರೆ ಅಥವಾ ವ್ಯತ್ಯಾಸ ಮಾಡಿದ್ದಾರಲ್ಲಾ ಆ ಜಮೀನು ಎಲ್ಲಿದೆ? ಯಾರಿಗೆ ಟೋಪಿ ಹಾಕುವುದಕ್ಕೆ ನೀವು ಹೊರಟಿದ್ದೀರಿ? ಇದರ ಉದ್ದೇಶ ಏನು? ಇದರಲ್ಲಿ ಎಷ್ಟು ವ್ಯವಹಾರ ಮಾಡಿಕೊಂಡಿರಿ? ಇದರ ಬಗ್ಗೆ ಉತ್ತರ ಕೊಡುವಂಥ ಸಂಧರ್ಬದಲ್ಲಿ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಅಂದರೆ ಬಿ.ಡಿ.ಎ. 500 ಎಕರೆಯನ್ನು ಲೆಕ್ಕದಲ್ಲಿ ವ್ಯತ್ಯಾಸ ಮಾಡುವುದು, ಟೋಟಲ್ ಎಕ್ಸ್‌ಟೆಂಟ್ 4024 ಎಕರೆ 19 ಗುಂಟೆ ಇದರಲ್ಲಿ ಬಿ.ಡಿ.ಎ.ದವರು ಡೀನೋಟಿಫೈ ಮಾಡಿರುವಂಥದ್ದು 1274 ಎಕರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಯಡಿಯೂರಪ್ಪನವರೇ, 500 ಎಕರೆ ಮಿಸ್ ಆಯಿತು ಎಂದಿರಿ, ಇದರಲ್ಲಿ ನಮಗೆ ಕನ್‌ಫೂಸ್ ಆಗಿದೆ, ಕ್ಲಿಯರ್ ಆಗಿ ನಮಗೆ ಗೊತ್ತಾಗಲಿಲ್ಲ. 4(1) ನೋಟಿಫಿಕೇಶನ್ ಇಶ್ಯೂ ಮಾಡಿದ ಮೇಲೆ ಅದು ಮಿಸ್ ಆಗಿದ್ದೇ ಅಥವಾ 6(1) ನೋಟಿಫಿಕೇಶನ್ ಮಾಡುವ ಹಂತದಲ್ಲಿ ಮಿಸ್ ಆಗಿದ್ದೆ? ಯಾವಾಗ ಮಿಸ್ ಆಯಿತು ಎಂಬ ಬಗ್ಗೆ ನಮಗೆ ಕ್ಲಿಯರ್ ಆಗಿ ಗೊತ್ತಾಗಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಇವರು ಏನು ಮಾಡಿದ್ದಾರೆಂದರೆ ದಾಸರಹಳ್ಳಿ, ಅಮೃತಹಳ್ಳಿ, ಶ್ರೀರಾಂಪುರ, ಕೆಂಪಾಪುರ, ಜಕ್ಕೂರು ವೆಂಕಟೇಶಪುರ, ಬೆಳ್ಳಕೆರೆ, ಈ ರೀತಿ ಹದಿನಾರು ಹಳ್ಳಿಗಳಲ್ಲಿ ಜಮೀನು ಅಕ್ವೈರ್ ಮಾಡಿದ್ದಾರೆ. ಅಕ್ವೈರ್ ಮಾಡಿದಾಗ ಟೋಟಲ್ ಎಕ್ಸ್‌ಟೆಂಟ್ ಗೆಜೆಟ್ ನೋಟಿಫಿಕೇಶನ್‌ನಲ್ಲಿ 4(1) ನೋಟಿಫಿಕೇಶನ್ ಮಾಡಿದಾಗ 3339 ಎಕರೆ 12 ಗುಂಟೆ ಎಂದು ತೋರಿಸಿಬಿಟ್ಟರು. ಆದರೆ ಈ ಫಿಗರ್‌ಗಳನ್ನೇ ಟೋಟಲ್ ಮಾಡಿದರೆ ಅದು 3839 ಎಕರೆ 12 ಗುಂಟೆ ಆಗುತ್ತದೆ. ಅಂದರೆ 500 ಎಕರೆಯನ್ನು ಗೆಜೆಟ್ ನೋಟಿಫಿಕೇಶನ್ ಮಾಡಬೇಕಾದರೆ ಕಡಿಮೆ ತೋರಿಸಿದ್ದಾರೆ ಎಂದು ನಾನು ಹೇಳಿದ್ದು. ಟೋಟಲ್ ಮಿಸ್ಟೇಕ್ ಮಾಡಿದರು ಬೇಕೆಂತಲೇ ಡೆಲಿಬರೇಟ್ಲಿ. 4(1) ಆದಮೇಲೆ. ಆಶ್ಚರ್ಯ ಇದು.ನಂಬುವುದಕ್ಕೇ ಆಗದೇ ಇರುವಂಥದ್ದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಈಗ 4(1) ನೋಟಿಫಿಕೇಸನ್‌ನಲ್ಲಿ ಆ ಎಕ್ಸ್‌ಟೆಂಟ್, ಸರ್ವೆ ನಂಬರ್ ತೋರಿಸದೇ ಹೋದರೆ ಫರ್ದರ್ ಪ್ರೋಸಿಡಿಂಗ್ಸ್ ಮಾಡುವುದಕ್ಕೆ ಬರುವುದಿಲ್ಲವಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಬೇಕಾದರೆ ನಿಮಗೆ ಅದರ ಪ್ರತಿಯನ್ನು ಕಳುಹಿಸಿಕೊಡುತ್ತೇನೆ. ನೋಡಿ

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಈಗ ತಾವು ಹೇಳುವುದನ್ನು ನಾನು ಒಪ್ಪುತ್ತಿದ್ದೇನೆ I am not trying to dispute......... 4(1)ನಲ್ಲಿ ಅವರು ಏನು ಎಕ್ಸಟೆಂಟ್, ಎಕರೆ, ಇಂಥ ಸರ್ವೆ ನಂಬರ್ ಎಂದು ಹೇಳೀ ಎಲ್ಲವನ್ನೂ ನಮೂದು ಮಾಡುತ್ತಾರೋ ಅದು ಮುಂದಿನ ಪ್ರೋಸೀಡಿಂಗ್ಸ್‌ಗೆ ಅಂದರೆ 6(1)ಗೆ ಹೋಗಬೇಕಾಗಿದ್ದರೆ ಅಷ್ಟೇ ಇರಬೇಕಾಗುತ್ತದೆ. ಯಾವ ಎಕ್ಸ್‌ಟೆಂಟ್, ಸರ್ವೆ ನಂಬರ್‌ನ್ನು ಅವರು 4(1) ತರುವುದಿಲ್ಲವೋ ಅದಕ್ಕೆ ಸಂಬಂಧಪಟ್ಟಂತೆ ಫರ್ದರ್ ಪ್ರೋಸೀಡಿಂಗ್ಸ್‌ಗೆ ಸಾಧ್ಯವೇ ಇಲ್ಲ ಅಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರು ರಾಜ್ಯದ ಜನರ ಮುಂದೆ 3339 ಎಕರೆ 12 ಗುಂಟೆ ಎಂದು ಏನು ಹೇಳಿದರೋ ಅಗಲೇ 500 ಎಕರೆಯನ್ನು ಇವರು ಹಾಗೆಯೇ ಗುಟ್ಟಾಗಿ ಒಂದು ಕಡೆ ಇಟ್ಟರು. ಆ ಬಗ್ಗೆ ಯಾರಿಗೂ ಹೇಳಲಿಲ್ಲ. ಈ 4(1) ನೋಟಿಫಿಕೇಶನ್ ಎಲ್ಲವನ್ನೂ

ಮಾಡಿಕೊಂಡು ಹಾಗೆಯೇ ಮುಚ್ಚಿಟ್ಟು ಅದನ್ನು ಬೇರೆ ಯವರಿಗೆ ವ್ಯವಹಾರ ಮಾಡಿಕೊಳ್ಳುವುದಕ್ಕೆ ಇಟ್ಟುಕೊಂಡರು. ಜನರಿಗೆ ಆ ಬಗ್ಗೆ ತಿಳಿಸಲಿಲ್ಲ ಎಂದು ಹೇಳಿದೆ. ಇನ್ನು ಈ ಲ್ಯಾಂಡ್ ಕಾಸ್ಟ್ ಏನಿದೆ ಮನಬಂದಂತೆ ಏರಿಸಿ ಮಾರ್ಕೆಟ್ ವ್ಯಾಲ್ಯುನಂತೆ ಇವೊತ್ತು ಅಲ್ಲಿ ಸೈಟು ಕೊಡುವವರಿಗೆ ಫಿಕ್ಸ್ ಮಾಡಿದ್ದಾರೆ. ಹೀಗೆ ಇವರು ಗೊಂದಲ ಮಾಡಿಕೊಂಡು ನೂರಾರು ಕೋಟಿ ರೂಗಳನ್ನು ಜನರಿಂದ ಸೈಟ್ ಕೊಡುತ್ತೇವೆ ಎಂದು ಹೇಳಿ ಹಣ ಸಂಗ್ರಹಣೆ ಮಾಡಿದ್ದಾರೆ. ಸೈಟ್ ಸಿಗುತ್ತದೆ ಎಂದು ಜನರು ಜಾತಕಪಕ್ಷಿಗಳಂತೆ ಕಾಯುತ್ತಿರುವಾಗ ಅಲ್ಲೇನೋ ಗೊಂದಲ ಉಂಟುಮಾಡಿ ಗಡಿಬಿಡಿ ಶುರುಮಾಡಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಇಲ್ಲಿ ಯಾರ ಯಾರ ಕೈವಾಡ ಇದೆಯೋ ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು ಮತ್ತು ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ನಿವೇಶನ ಕೊಡುತ್ತೇವೆ ಎಂದು ನೀವು ಏನು ಹೇಳಿದ್ದೀರೋ ಆ ಕೆಲಸವನ್ನು ತಕ್ಷಣ ಮಾಡಿ ಸೈಟ್ ವಿತರಣೆ ಮಾಡಬೇಕೆಂದು ನಾನು ಅಧ್ಯಕ್ಷರ ಮೂಲಕ ಈ ಸಂದರ್ಭದಲ್ಲಿ ಒತ್ತಾಯವನ್ನು ಸರ್ಕಾರಕ್ಕೆ ಮಾಡುತ್ತೇನೆ. ಇನ್ನು ಬೆಂಗಳೂರಿನ ಹೊರ ವಲಯದಲ್ಲಿ ರಫ್ತು ಉದ್ದೇಶಕ್ಕಾಗಿ ಮೀಸಲಾದ ಭೂಮಿಯನ್ನು ನಿಯಮಾವಳಿಗಳನ್ನು ಗಾಳಿಗೆ ತೂರಿ ಬೇರೆ ಬೇರೆ ಉದ್ದೇಶಕ್ಕಾಗಿ ಮಾರಾಟ ಮಾಡಿದ್ದಾರೆ. ವೈಟ್‌ಫೀಲ್ಡ್ ಸಮೀಪದ ಹೂಡಿ ಹಾಗೂ ಸುತ್ತಮುತ್ತಲ ಗ್ರಾಮಗಳ ಸುಮಾರು 600 ಎಕರೆ ಭೂಮಿಯನ್ನು ಎರಡು ಹಂತಗಳಲ್ಲಿ ಸ್ವಾಧೀನಪಡಿಸಿಕೊಂಡರು.

1.10 ಪಿಎಂ

ನೂರಕ್ಕೆ ನೂರರಷ್ಟು ರಫ್ತು ಆದಂತಹ ಕೈಗಾರಿಕೆಗಳ ಸ್ಥಾಪನೆಗೆ ಮಾತ್ರವೆ ಈ ಪ್ರದೇಶವನ್ನು ಮೀಸಲಾಗಿ ಇಡುತ್ತೇವೆ ಎಂದು ಹೇಳಿದರು. ನಾನು ಹೆಸರು ಹೇಳುವುದಿಲ್ಲ, ನಾನು ಯಾವ ಸಮಯದಲ್ಲಿ ಬೇಕು ಆ ಸಮಯದಲ್ಲಿ ಡೀಟೈಲ್ಸ್ ಅನ್ನು ಕೊಡುತ್ತೇನೆ, ನನ್ನ ಹತ್ತಿರ ಇದೆ. ಬೇರೆ ಕಾರಣಕ್ಕೆ ನಾನು ಹೆಸರು ಹೇಳುತ್ತಿಲ್ಲ. ಅವರಿಗೆ ಬೇಕು ಬೇಕಾದವರಿಗೆ, ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಆ ಜಮೀನನ್ನು ಪರಭಾರೆ ಮಾಡುವಂತಹ ಕೆಲಸ ಮಾಡಿದ್ದಾರೆ. ನೂರಕ್ಕೆ ನೂರು ರಫ್ತು ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಮಾತ್ರವೆ ಈ ಪ್ರದೇಶ ಮೀಸಲಾಗಿತ್ತು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನೂರಾರು ಕೋಟಿ ರೂಪಾಯಿ ವಿನಿಯೋಗಿಸಿ ಈ ಪ್ರದೇಶಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಿಕೊಟ್ಟಾಗಿತ್ತು. ಮೂಲಭೂತ ಸೌಕರ್ಯ ಒದಗಿಸಿದ ನಂತರ ಮನಬಂದಂತೆ ಬೇಕಾದವರಿಗೆ ಈ ಜಮೀನನ್ನು ಕೊಟ್ಟಂತಹ ದಾಖಲೆಗಳು ನನ್ನ ಹತ್ತಿರ ಇದೆ. ಇದರ ಉದ್ದೇಶ ಏನು? ಇದರ ಹಿನ್ನೆಲೆ ಏನು? ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ಆವೊತ್ತು ಸಚಿವಸಂಪುಟದಲ್ಲಿ ಇದ್ದಂತಹ ಪ್ರಭಾವಿ ಸಚಿವರು, ಪ್ರಮುಖರು ಇದರಲ್ಲಿ ಪ್ರಮುಖ ಪಾತ್ರಧಾರಿಗಳು. ಕೆಲವರು ಅಲ್ಲಿ ಅವರೇ ಪಾರ್ಟನರ್ಸ್, ಎಲ್ಲಾ ರೀತಿಯ ಬಹುಶಃ ನಮ್ಮ ನಿರೀಕ್ಷೆ ಮೀರಿ ಒಂದು ಹಗಲು ದರೋಡೆ ಇದರಲ್ಲಿ ನಡೆದಿದೆ. ಅದರ ವಿವರಗಳು ಯಾರಿಗೆ ಕೊಟ್ಟಿದ್ದಾರೆ, ಏನೇನು ಕೊಟ್ಟಿದ್ದಾರೆ, ಆ ಎಲ್ಲಾ ದಾಖಲೆಗಳನ್ನು ನಾನು ಸಮಯ ಬಂದಾಗ ನಿಮಗೆ ಕೊಡುವುದಕ್ಕೆ ಸನ್ಮಾನ್ಯ ಅಧ್ಯಕ್ಷರೇ , ಸಿದ್ಧನಿದ್ದೇನೆ. ಇನ್ನೊಂದು ಪ್ರಮುಖವಾದಂಥಾದ್ದು, ಈ ನೈಸ್ ಕಂಪನಿ ಕಾರಿಡಾರ್ ಯೋಜನೆ. ದಾಖಲೆಗಳನ್ನು ತರಿಸಿ ಮಾನ್ಯ ಅಧ್ಯಕ್ಷರೆ, ಈ ಮೈಸೂರು ಬೆಂಗಳೂರು ಕಾರಿಡಾರ್ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದಾಗ ಆ ಸಂದರ್ಭದಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ನಾನು ಎದ್ದು ನಿಂತು ಅವತ್ತು ಇದ್ದಂತಹ ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರಿಗೆ ನಾನು ಹೇಳಿದೆ, ಇದನ್ನು ಯಾವ ಕಾರಣಕ್ಕೂ ಕೈಗೆ ತೆಗೆದುಕೊಳ್ಳಬೇಡಿ ಎಂದು. ಅದರಲ್ಲಿ ಎರಡು ಪ್ರಮುಖವಾದಂತಹ ಉದ್ದೇಶ

ಇತ್ತು. ಇವತ್ತು ಮೈಸೂರು ಬೆಂಗಳೂರು ರೋಡ್ ಅನ್ನು ಡಬಲ್ ರೋಡ್ ಮಾಡಿ ಮತ್ತು ಹೆಚ್ಚು ಟ್ರೇನ್‌ಗಳನ್ನು ಮೈಸೂರು ಬೆಂಗಳೂರಿಗೆ ಓಡಾಡಿಸಿ, ಈ ಯೋಜನೆ ಬೇಡ, ಟೌನ್‌ಶಿಪ್ ಮಾಡಬಹುದು, ನಾನ್ ಸ್ಟಾಪ್ ಕಾರುಗಳು ಇಲ್ಲಿಂದ ಮೈಸೂರಿಗೆ ಹೋಗಿ ಬರಬಹುದು ಗಂಟೆಗಟ್ಟಲೆ ಸಮಯ ಉಳಿಯಬಹುದು, ಹೆಚ್ಚು ಅನುಕೂಲ ಆಗಬಹುದು, ದೊಡ್ಡದೊಡ್ಡ ಉದ್ಯಮಿಗಳಿಗೆ ಆಕರ್ಷಣೆ ಆಗುವುದು ಇದು ಯಾವುದೂ ಇಲ್ಲವೆಂದು ನಾನು ಹೇಳಲಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಇದು ಬೇಡ, ಬೇರೆ ಪ್ರಾಮುಖ್ಯವಾದ ವಿಷಯಗಳು ಇವೆ ಅದಕ್ಕೆ ಆದ್ಯತೆ ಕೊಡಿ ಎಂದು ಹೇಳಿ ನೇರವಾಗಿ ನಾನು ಆರೋಪ ಮಾಡಿ ಇಲ್ಲಿ ಸಾಕಷ್ಟು ಗೊಂದಲ ನಿರ್ಮಾಣ ಆಗಿ, ಯಡಿಯೂರಪ್ಪ ರಾಜ್ಯದ ಅಭಿವೃದ್ಧಿಗೆ ಅಡ್ಡಿ ಮಾಡುವ ಮನುಷ್ಯ, ಹಳ್ಳಿ ರೈತನ ವಿಷಯ ಬಿಟ್ಟರೆ ಇನ್ನೊಂದು ಮಾತನಾಡುವುದಿಲ್ಲ, ನಾವು 21ನೇ ಶತಮಾನದ ಕಾಲದಲ್ಲಿ ನಾವು ಬಹಳಷ್ಟು ಪ್ರಗತಿಯತ್ತ ಯೋಚನೆ ಮಾಡಬೇಕಾಗುತ್ತದೆ ಎಂದು ಆ ಕಡೆ ಕುಳಿತವರು ಕೊಟ್ಟಂತಹ ಉತ್ತರ ಡಿಬೇಟ್ ಆ ವಿವರಗಳಿಗೆಲ್ಲಾ ನಾನು ಇವತ್ತು ಹೋಗುವುದಿಲ್ಲ, ಚರ್ಚೆ ಅದು ಬೇರೆ ರೀತಿಯಲ್ಲಿ ಆಗಬಹುದು, ನಾನು ಇವತ್ತು ಹೋಗುವುದಿಲ್ಲ. ಆದರೆ ಈಗ ನೀವೇನು ಮಾಡಿದಿರಿ? ಇವತ್ತು ಈ ನೈಸ್ ಕಂಪನಿಯ ಕಾರಿಡಾರ್ ಯೋಜನೆಯ ಅಪ್ಪ, ಅಮ್ಮ ಯಾರು? ಅದೇ ಜನತಾ ದಳದವರು, ಅದೇ ಕಾಂಗ್ರೆಸ್‌ನವರು. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ 20ನೇ ಫೆಬ್ರವರಿ 1995 ರಂದು ಯುಎಸ್‌ಎ ಗೌವರ್ನರ್ ಮತ್ತು ಸನ್ಮಾನ್ಯ ದೇವೆಗೌಡರು ಮುಖ್ಯಮಂತ್ರಿಗಳಾಗಿ ಈ ಅಗ್ರಿಮೆಂಟ್‌ನ್ನು ಮಾಡಿಕೊಂಡರು. ಎಂಓಯು ಗೆ ಸೈನ್ ಹಾಕಿದರು. ಆಗ ಏಳು ಇಂಡಸ್ಟ್ರೀಯಲ್ ಟೌನ್‌ಗೆ ಪ್ರಪೋಸಲ್ ಇತ್ತು. 21,710 ಎಕರೆ ಅದಕ್ಕಾಗಿ ಮತ್ತು ರಸ್ತೆಗಾಗಿ 7,748 ಅವರು ಕೇಳಿದರು. ಏಳು ಟೌನ್‌ಶಿಪ್ ಬೇಡ, ಐದು ಟೌನ್‌ಶಿಪ್ ಆಗಬೇಕು ಅಂತೇಳಿ ಅದನ್ನು ಕಡಿಮೆ ಮಾಡಿ 16,710 ಎಕರೆ ಅದಕ್ಕೆ ಮೊದಲು ಇದ್ದ 21,710 ಎಕರೆ ಬಿಟ್ಟು ಮತ್ತು ರಸ್ತೆ ಇದು ಅಗತ್ಯ ಇದೆ ಎಂದೇಳಿ ದಿನಾಂಕ: 20.11.95 ರಲ್ಲಿ ಸರ್ಕಾರಿ ಆಜ್ಞೆ ಹೊರಡಿಸಿ ಆ ಪ್ರಾಜೆಕ್ಟ್ ರಿಪೋರ್ಟ್‌ನ್ನು ದೇವೆಗೌಡರ ಸರ್ಕಾರ ಅಕ್ಸೆಪ್ಟ್ ಮಾಡಿತು. ಇದಾದನಂತರ ಒಂದು ಎಂಪವರ್ ಕಮಿಟಿ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಮಾಡಿದರು. ಇಲ್ಲಿ ಕುಳಿತಿದ್ದಂತಹ ಮಾನ್ಯ ಸಿದ್ಧರಾಮಯ್ಯನವರು ಎದ್ದು ಹೋದರು, ಬರುತ್ತಾರೆ. ಮಾನ್ಯ ಜೆ.ಹೆಚ್. ಪಟೇಲ್ ಮುಖ್ಯಮಂತ್ರಿಗಳಾದಾಗ ಸಿದ್ಧರಾಮಯ್ಯನವರ ಅಧ್ಯಕ್ಷರೆಯಲ್ಲಿ ಒಂದು ಉಪಸಮಿತಿ. ಪ್ರಕಾಶ್, ರೇವಣ್ಣ ಮತ್ತು ನಾಣಯ್ಯನವರು ಇದಕ್ಕೆ ಸದಸ್ಯರು. ಅವರೆಲ್ಲಾ ಸೇರಿ ರಸ್ತೆಗಾಗಿ 7,748 ಎಕರೆ ಬದಲಿಗೆ 6,999ಎಕರೆಗೆ ಇಳಿಸಿ, ಐದು ಟೌನ್‌ಶಿಪ್‌ಗೆ ಇದ್ದಂತಹ 14,210 ಎಕರೆ ಬದಲು, ಮಾನ್ಯ ದೇವೆಗೌಡರು ಇವರೆಲ್ಲಾ ಸೇರಿ 13,184 ಎಕರೆಗೆ ಕಡಿಮೆ ಮಾಡಿದರು. ಇದಾದ ಮೇಲೆ ಹೈಕೋರ್ಟ್‌ಗೆ ಹೋದರು, ರಿಟ್ ಆಯಿತು, ರಿಟ್ ಪಿಟಿಷನ್ 22:1997 ಈ ಅಗ್ರಿಮೆಂಟ್ ಇಲ್ಲೀಗಲ್ ಟರ್ಮ್ಸ್ ಅಂಡ್ ಕಂಡೀಷನ್ ನಿಂದ ಕೂಡಿದೆ ಎಂದು. ಹೈಕೋರ್ಟ್ ಅದನ್ನು ಕಿತ್ತು ಹಾಕಿತ್ತು, ಅವನ ಪರ ಮಾಡಿತು. ನಂತರ ಇವರು ಸುಪ್ರೀಂ ಕೋರ್ಟ್‌ಗೆ ಹೋದರು, ಸುಪ್ರೀಂ ಕೋರ್ಟ್ ಕೂಡ ಅವರ ಪರ ಮಾಡಿತು. ಆದಾದಮೇಲೆ ಸಿಬಿಐ ಎನ್‌ಕ್ವೈರಿ ಆಗಬೇಕೆಂದು ಆದಾಗ, ಸಿಬಿಐ ಎನ್‌ಕ್ವೈರಿ ಅಗತ್ಯ ಇಲ್ಲವೆಂದು ಆಯಿತು. ಅಂದರೆ ಇವರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಐದು ಟೌನ್‌ಶಿಪ್‌ಗೆ ಒಪ್ಪಿಕೊಂಡರು. ರಸ್ತೆ ಮಾಡುವುದಕ್ಕೆ ಒಪ್ಪಿಕೊಂಡರು. ಈ ಕೆಲಸ ಮಾಡುವುದಕ್ಕೆ ಎಲ್ಲಾ ಅವಕಾಶ ಮಾಡಿಕೊಟ್ಟರು. ಯಾರು ನಾವು ಇದ್ವಾ ಅಲ್ಲಿ? ಇಲ್ಲಿ ಕುಳಿತು ನಾವು ಅವತ್ತು ವಿರೋಧ ಮಾಡಿದೆವು. ಸುಪ್ರೀಂಕೋರ್ಟ್ ಮುಂದೆ, ಹೈಕೋರ್ಟ್ ಮುಂದೆ

ಎಲ್ಲದರ ಮುಂದೆ ಕೈಕಟ್ಟಿಸಿ, ಈಗ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತವೆ ಅಂದರೆ, I am worried one thing ಈ ರಸ್ತೆಯ ನಿರ್ಮಾಣಕ್ಕಾಗಿ ಏನು ಜಮೀನು ತೆಗೆದುಕೊಳ್ಳುತ್ತಿದ್ದೀರಿ, ಟೌನ್‌ಶಿಫ್ ಎಂದು ಏನು ಒಪ್ಪಿಕೊಂಡಿದ್ದೀರಿ, ಇದಕ್ಕೆ ನಮ್ಮ ರೈತನಿಗೆ ಇವತ್ತು ನೀವು ಯಾವರೀತಿ ಟ್ರೀಟ್ ಮಾಡುತ್ತಿದ್ದೀರಿ ಎನ್ನುವುದು ಬಹಳ ಮುಖ್ಯ. ಈ ಅಕ್ವೈರ್ ಮಾಡಿಕೊಂಡಂತಹ ಜಮೀನಿಗೆ ಅಲ್ಲಿರುವಂತಹ ಮಾರ್ಕೆಟ್ ಬೆಲೆ ಹಣವನ್ನು ಕೊಡುತ್ತಿದ್ದೀರಾ? ಕೊಡದೆ ಇದ್ದರೆ ಕಾರಣವೇನು? ಈ ಸುತ್ತಮುತ್ತ ಬೇಕಾದವರು, ಅವತ್ತು ಅಧಿಕಾರದಲ್ಲಿ ಇದ್ದಂತಹವರು ಅಲ್ಲಿ ನೂರು ಎಕರೆ ಇಲ್ಲಿ ನೂರು ಎಕರೆ ಮಾಡಿಕೊಂಡು ಆ ಟೌನ್‌ಶಿಫ್ ನೆಪದಲ್ಲಿ, ಆ ರಸ್ತೆ ಅಗಲ ಮಾಡುವ ನೆಪದಲ್ಲಿ ಅದನ್ನು ಕಬಳಿಸುವುದಕ್ಕೆ, ಅದರ ಮೂಲಕ ಸಾವಿರಾರು ಕೋಟಿ ರೂಪಾಯಿ ಮಾಡಿಕೊಳ್ಳುವುದಕ್ಕೆ ಇರುವಂತಹ ವಿವರಗಳು ಏನಾದರೂ ಇದೆಯಾ? ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು. ಇವತ್ತು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ಕೈಕಟ್ಟಿಸಿಕೊಂಡಿರುವಂತಹ ಈ ಸಂದರ್ಭದಲ್ಲಿ ಈ ನಮ್ಮ ರೈತ ಸಮೂಹಕ್ಕೆ ಏನು ಆಸೆ ಇಟ್ಟು ಕೊಂಡಿದ್ದಾರೆ ಒಬ್ಬ ರೈತನಿಗೆ ಅನ್ಯಾಯ ಆಗಕೂಡದು. ಇದುವರೆಗೆ ಎಲ್ಲಿ ಕೆಲಸ ಪ್ರಾರಂಭವಾಗಿದೆ? ಎಷ್ಟು ಕೋಟಿ ರೂಪಾಯಿ ರೈತರಿಗೆ ಹಣ ವಿತರಣೆಯಾಗಿದೆ? ಆ ಫಿಕ್ಸ್ ಆಗಿರುವಂತಹ ರೇಟ್ ಎಷ್ಟು? ಮಾರ್ಕೆಟ್ ಬೆಲೆ ಕೊಡುತ್ತಿದ್ದೀರಾ ಇಲ್ಲವೇ? ಈ ನೆಪದಲ್ಲಿ ಸಾವಿರ ಎಕರೆ ಕಬಳಿಸುವುದಕ್ಕೆ ಹೊರಟಿದ್ದೀರಿ. ಆ ಜಮೀನು ಯಾವುದು? ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಯಾವುದೋ ಒಂದು ಪ್ರಗತಿ ಬಗ್ಗೆ ಅಡ್ಡಿ ಮಾಡುವಂತಹ ವ್ಯಕ್ತಿ ನಾನಲ್ಲ. ನಾನು ಆ ಮಾತು ಆಡುತ್ತಿರಲಿಲ್ಲ. ಆದರೆ ಈ ಯೋಜನೆ ಅಗತ್ಯವೇ ಇಲ್ಲವೆಂದಾಗ, ರಾಜ್ಯದಲ್ಲಿ ಜ್ವಲಂತ ಸಮಸ್ಯೆಗಳು ನಮ್ಮನ್ನು ಕಾಡುತ್ತಿರುವಾಗ ಇದಕ್ಕೆ ಆದ್ಯತೆ ಏಕೆ ಕೊಟ್ಟಿರಿ? ಜನತಾದಳ ಅಧಿಕಾರದಲ್ಲಿ ಇದ್ದಾಗ ಮಾನ್ಯ ದೇವೆಗೌಡರು ಎಂಓಯುಗೆ ಸಹಿ ಮಾಡಿದನಂತರ, ಜೆ.ಹೆಚ್. ಪಟೇಲ್ ಸರ್ಕಾರ ಆದಮೇಲೆ ಮಾನ್ಯ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿರುವವರೆಗೂ ಈ ಯೋಜನೆಗೆ ಎಲ್ಲರೂ ಸಮಪಾಲುದಾರರು. ಈಗ ಸನ್ಮಾನ್ಯ ಧರ್ಮಸಿಂಗ್ ಬಂದಿದ್ದಾರೆ. ಅದಕ್ಕೋಸ್ಕರ ನಾನು ತಾವು ಬರುವುದಕ್ಕೆ ಮೊದಲು ಒಂದು ಮಾತನ್ನು ಹೇಳಿದೆ ಮಾನ್ಯ ಮುಖ್ಯಮಂತ್ರಿಗಳೇ ಈ ಭೂ ಹಗರಣದ ಬಗ್ಗೆ ಜೆಡಿಎಸ್‌ನವರು ಹೇಳಿದರು ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು, ಸ್ಪೆಷಲ್ ಕೋರ್ಟ್ ರಚನೆಯಾಗಬೇಕು ನ್ಯಾಯಾಧೀಶರಿಂದ ತನಿಖೆ ಮಾಡುತ್ತೇವೆ, ಜೈಲಿಗೆ ಕಳುಹಿಸುತ್ತೇವೆ ಎಂದು ಯಾರಾದರೇನು? ಅಪರಾಧ ಮಾಡಿದವನು ಕಾಂಗ್ರೆಸ್ ನವರಾದನೇನು? ಬಿಜೆಪಿಯವನಾದರೇನು? ಅಪರಾಧ ಮಾಡಿದವರು ಕಾಂಗ್ರೆಸ್ ನವರಾದನೇನು ಬಿಜೆಪಿಯವನಾದರೇನು? ಜೆಡಿಎಸ್ ನವನಾದರೇನು, ಹೊರಗಡೆಯವನಾದರೇನು? ಎರಡು ಮೂರು ಅಂಶ ಇದೆ. ಕಳೆದ ನಾಲ್ಕೂವರೆ ವರ್ಷದಲ್ಲಿ ನನಗೆ ಗೊತ್ತಿರುವ ಪ್ರಕಾರ 3–4 ಜನ ಮಂತ್ರಿಗಿದ್ದಂತಹವರು ಕನಿಷ್ಠ ಒಂದೊಂದು ಸಾವಿರ ಕೋಟಿ ರೂಪಾಯಿಯಾದರೂ ಈ ವ್ಯವಹಾರದಲ್ಲಿ ಲಾಭ ಮಾಡಿಕೊಂಡು ಜಮೀನು ಮಾಡಿಕೊಂಡು ಕಾಯ್ದುಕೊಂಡು ಕುಳಿತಿದ್ದಾರೆ. ಬೇನಾಮಿ ಹೆಸರಿನಲ್ಲಿ ವ್ಯವಹಾರಗಳು ಇವೆ. ನಾವು ಆ ಭಾಗದಲ್ಲಿ ಪ್ರವಾಸ ಮಾಡಿದಂತಹ ಕಾಲದಲ್ಲಿ ಮಾನ್ಯ ಈಶ್ವರಪ್ಪನವರು ಎಲೆಕ್ಷನ್‌ಗೆ ನಿಂತಂತಹ ಕಾಲದಲ್ಲಿ ಓಡಾಟ ಮಾಡಿದಂತಹ ಸಂದರ್ಭದಲ್ಲಿ ಜನ ಶಾಪ ಹಾಕಿದರು. ಸ್ವಾಮಿ ನಮ್ಮ ಜಮೀನನ್ನು ತಗೆದುಕೊಂಡಿದ್ದಾರೆ ರಸ್ತೆ ಮಾಡುತ್ತೇವೆಂದು ನಮಗೆ ಪರಿಹಾರ ಕೊಟ್ಟಿಲ್ಲ, ಎಲ್ಲಾ ಜಮೀನನ್ನು ಗೆಜೆಟ್ ನೋಟಿಫಿಕೇಷನ್ ಮಾಡಿ ಸರ್ಕಾರದ ವಶಕ್ಕೆ ತೆಗೆದುಕೊಂಡಾಗಿದೆ. ನಮಗೆ ಪರಿಹಾರನೂ ಕೊಡುವುದಿಲ್ಲ, ನಾವು ಉಳಿಮೆಯನ್ನು ಕೂಡ ಮಾಡುವ ಹಾಗೆ ಇಲ್ಲ. ಅದಕ್ಕೆ

ಸರ್ಕಾರ ಉತ್ತರ ಕೊಡುವಂತಹ ಕಾಲದಲ್ಲಿ ಎಷ್ಟು ಜಮೀನು ಅಕ್ವೈರ್ ಮಾಡಿಕೊಂಡಿದ್ದೀರಿ? ಎಷ್ಟು ಜಮೀನಿಗೆ ಪರಿಹಾರ ಕೊಟ್ಟಿದ್ದೀರಿ? ಯಾವ ಬೆಲೆಯಲ್ಲಿ ಕೊಟ್ಟಿದ್ದೀರಾ? ಅವರಿಗೆ ಯಾವಾಗ ಹಣವನ್ನು ಪೂರ್ಣವಾಗಿ ಕೊಡುತ್ತೀರಿ? ಅಥವಾ ನಿಮ್ಮ ಉದ್ದೇಶ ಏನು? ಇದು ಒಂದು ಭಾಗವಾದರೆ, ಇನ್ನೊಂದು ಭಾಗ ಬೆಂಗಳೂರು ನಗರದ ಸುತ್ತಮುತ್ತಲೂ ಬೇರೆ ಬೇರೆ ಉದ್ದೇಶಗಳಿಗಾಗಿ, ಐ.ಟಿ. ಪಾರ್ಕ್ ಮಾಡುತ್ತೇವೆಂದು, ಮತ್ತೆ ಬೇರೆ ಬೇರೆ ಕೆಲಸಗಳನ್ನು ಮಾಡುತ್ತೇವೆಂದು ರೈತರಿಂದ ಜಮೀನುಗಳನ್ನು ತೆಗೆದುಕೊಂಡು, 10, 20 ಲಕ್ಷ ರೂಪಾಯಿಗಳಿಗೆ ಒಂದೊಂದು ಎಕರೆಯನ್ನು ತೆಗೆದುಕೊಂಡು, ಆನಂತರ ಡೀನೋಟಿಫೈ ಮಾಡುವಂಥಾದ್ದು, ಇದೆಯಲ್ಲಾ ಇದು ಎಲ್ಲಕ್ಕಿಂತ ದೊಡ್ಡದಾದ ಹಗರಣವಾಗಿದೆ. ಇದರ ಬಗ್ಗೆ ಸಮಗ್ರವಾದಂತಹ ತನಿಖೆಯಾಗಬೇಕು. ಈಗ ನಮ್ಮ ಎಲ್ಲಾ ಸ್ನೇಹಿತರು ಇದರ ಬಗ್ಗೆ ಮಾತನಾಡುತ್ತಾರೆ, ಬೆಳಕು ಚೆಲ್ಲುತ್ತಾರೆ, ಆನಂತರ ನನ್ನ ಹತ್ತಿರವಿರುವಂತಹ ಪ್ರಮುಖವಾದ ಮಾಹಿತಿಗಳನ್ನೂ ಸಹ ನಾನು ಇಲ್ಲಿ ಯಾವ ರೀತಿಯ ತನಿಖೆಯನ್ನು ಮಾಡುತ್ತೇವೆಂದು ನಾವೆಲ್ಲಾ ಒಪ್ಪಿಕೊಂಡು ತೀರ್ಮಾನ ಮಾಡುತ್ತೇವೆಯೋ, ಆ ತನಿಖೆಯ ಮುಂದೆ ನಾನು ಎಲ್ಲಾ ವಿವರಗಳನ್ನು ಕೊಡಲು ತಯಾರಿದ್ದೇನೆ. ನಾನು ಈಗ ಇಲ್ಲಿ ಕೊಡಬಹುದು, ಆದರೆ ಕೊಟ್ಟ ತಕ್ಷಣ ಇದರ ಬಗ್ಗೆ ವ್ಯವಹಾರಗಳು ಪ್ರಾರಂಭವಾಗುತ್ತದೆ. ನಾನು ದಾಖಲೆಗಳ ವಿವರಗಳನ್ನು ನನ್ನ ಹತ್ತಿರ ಇಟ್ಟುಕೊಂಡಿದ್ದೇನೆ. ಅದನ್ನು ಕೊಡುತ್ತೇನೆ. ಆದರೆ ನೀವು ಇದಕ್ಕೆ ಸ್ಪೆಷಲ್ ಕೋರ್ಟ್ ಮಾಡಿ, ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಿ, ಈ ತನಿಖೆಗೆ ಅವಕಾಶ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈಗ ಇನ್ನು ಉಳಿದಂತಹ ನನ್ನ ಸ್ನೇಹಿತರು ಇದರ ಬಗ್ಗೆ ಬೆಳಕನ್ನು ಚೆಲ್ಲುತ್ತಾರೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜೆ.ಸಿ. ಮಾಧುಸ್ವಾಮಿ : (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ತಂದು, ಬೆಂಗಳೂರು ಆಜು ಬಾಜಿನಲ್ಲಿ, ಬೇರೆ ಬೇರೆ ಯೋಜನೆಗಳಿಗೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಬೇಕಾದರೆ, ಅಕ್ರಮಗಳು ಆಗಿದೆ, ಅನಾವಶ್ಯಕವಾಗಿ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೆಂಬ ವಿಚಾರದ ಬಗ್ಗೆ ತಮಗೆ ಮನದಟ್ಟು ಮಾಡಿದ್ದೆವು. ಆ ಬಗ್ಗೆ ಇವತ್ತು ಚರ್ಚೆಗೆ ಕರೆದಿರುವುದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ಇದು ಬಹಳ ಪ್ರಮುಖವಾದಂತಹ ವಿಷಯವಾಗಿದೆ. ಬೆಂಗಳೂರಿನ ಬಗ್ಗೆ ಯೋಜನೆಗಳನ್ನು ಮಾಡಬೇಕಾದರೆ, ಮತ್ತು ಜನರಿಗೆ ಅನುಕೂಲಗಳನ್ನು ಕಲ್ಪಿಸಬೇಕಾದಂತಹ ಸ್ಥಿತಿಯಲ್ಲಿ, ಸರ್ಕಾರ ಅನೇಕ ಶಾಸನಬದ್ಧವಾದ ಬೋರ್ಡ್‌ಗಳನ್ನು, ನಿಗಮಗಳನ್ನು, ಏಜೆನ್ಸಿಗಳನ್ನು ಮಾಡುವಂಥಾದ್ದು, ಮತ್ತು ಕಾಲ ಕಾಲಕ್ಕೆ ಬೆಂಗಳೂರು ನಗರವನ್ನು ಹೇಗೆ ಇಟ್ಟುಕೊಳ್ಳಬೇಕೆಂಬ ಬಗ್ಗೆ, ಮುಂದೆ ಬೆಂಗಳೂರು ಏನು ಆಗಬಹುದು. ಇದರ ಬಗ್ಗೆ ಯೋಜನೆಗೆ ಒಳಪಟ್ಟವರು ಪ್ಲಾನ್‌ಗಳನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಇದರ ಬಗ್ಗೆ ನೋವಿನ ಸಂಗತಿ ಏನೆಂದರೆ ಅಷ್ಟೇ ಸತ್ಯವಾಗಿದೆ, ತಲೆಮಾರುಗಳಿಂದ ಹೇಗಾದರೂ ಮಾಡಿ ಬೆಂಗಳೂರಿನಲ್ಲಿ ಸೈಟ್‌ಗಳನ್ನು, ನಿವೇಶನಗಳನ್ನು ಹೊಡೆದು ಹಾಕಬೇಕು. ಸರ್ಕಾರದಲ್ಲಿರುವುದನ್ನು ಸ್ವಂತಕ್ಕೆ ಮಾಡಿಕೊಳ್ಳಬೇಕೆಂದು, ಹೇಳಿ 1900ರಿಂದ ಇಲ್ಲಿಯವರೆಗೂ ಪ್ರಮುಖವಾದ ಸ್ಥಾನಗಳನ್ನು ಅಲಂಕಾರ ಮಾಡಿರುವಂತಹ ಜನರು, ಬೆಂಗಳೂರಿನಲ್ಲಿ ಅತ್ಯಾಚಾರವನ್ನು ಮಾಡಿದ್ದಾರೆ. ಇದು ಎಷ್ಟು ಎಕರೆಗಳಿಗೆ ಹೋಗಿದೆ ಎಂಬುದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಬೆಂಗಳೂರು ಮೈಸೂರು ರಸ್ತೆ

ಹೆದ್ದಾರಿಯದ್ದು ಇದೆ, ಮತ್ತೆ ಆರ್ಕಾವತಿಯದ್ದು ಇದೆ, ಅಗರಿದ್ದು ಇದೆ, ಮತ್ತೆ ವಿಧಾನ ಸೌಧದ ಮುಂದೆ ಇರುವಂತಹ ಏಟ್ರಿಯಾ ಹೋಟೆಲದ್ದು ಇದೆ. ನಾವು ವೈಟ್ ಫೀಲ್ಡ್‌ನಲ್ಲಿ ಜಾಗವನ್ನು ಏನು ತೆಗೆದುಕೊಂಡಿದ್ದೇವೆ, ಅದು ಇದೆ. ಇನ್ನು ಎನ್.ಜಿ.ಇ.ಎಫ್.ನ 43ಎಕರೆಗಳನ್ನು 175ರೂಪಾಯಿಗಳನ್ನು ಕೊಟ್ಟು, ಡೆವಲಪ್‌ಮೆಂಟ್ ಚಾರ್ಜ್ ಅನ್ನು ಸೇರಿಸಿ, 280, 300 ರೂಪಾಯಿಗಳಿಗೆ ಕೊಟ್ಟಿದ್ದಾರೆ. ಇನ್ನೂ 120 ಎಕರೆ ಡಿಸ್‌ಪ್ಯೂಟ್‌ನಲ್ಲಿದೆ, ಇದರ ಜೊತೆಗೆ ಬಿ.ಡಿ.ಎ.ಯವರು ಅಕ್ವೈರ್ ಮಾಡಿರುವಂತಹ ಬೇಕಾದಷ್ಟು ಭೂಮಿ ಬೆಂಗಳೂರಿನಲ್ಲಿ ಸೇರಿದೆ. ನಾನು "ನಂದಿ ಇನ್‌ಫ್ರಾಸ್ಟ್ರಕ್ಚರ್" ರವರು "ಕಾರಿಡಾರ್" ಎಂಟರ್‌ಪ್ರೈಸಸ್" ನವರು ಬೆಂಗಳೂರು– ಮೈಸೂರು ರಸ್ತೆಯನ್ನು ಮಾಡುತ್ತೇವೆಂದು ಬಂದಂತಹ ಘಟನೆಯನ್ನು ಪ್ರಮುಖವಾಗಿ ತೆಗೆದುಕೊಂಡು, ಆನಂತರ ಬೇರೆ ಘಟನೆಗಳ ಬಗ್ಗೆ ಮಾತನಾಡಲು ಇಚ್ಛೆಸುತ್ತೇನೆ. ಇದು ಚರ್ಚೆಯಾಗಿರುವುದರಿಂದ, ನಾನು ವಿವರಗಳಿಗೆ ಹೋಗುವಂತಹ ಅಗತ್ಯತೆ ಇದೆಯೆಂದು ಭಾವಿದಿ, ಅದಕ್ಕೆ ತಾವು ಸಹ ಅವಕಾಶವನ್ನು ಕೊಡುತ್ತೀರೆಂದು ನಾನು ನಂಬಿದ್ದೇನೆ. ನಾವು ದಿನಾಂಕ 20.2.1995ರಲ್ಲಿ ಒಂದು ಎಂ.ಓ.ಯುಉ.ಗೆ ಸೈನ್ ಆಯಿತು, SAB Engineering, M/s. Kalyani, Masia Prestininc ಎಂದು ಹೇಳಿ ಈ ಮೂರು ಜನರು in the presence of Governor of Massachusetts, America ಅವರ ಸಮಕ್ಷಮದಲ್ಲಿ ಒಂದು ಅಗ್ರಿಮೆಂಟ್ ಅನ್ನು ಮಾಡಿಕೊಂಡರು, ಎಂ.ಓ.ಯು. ಅನ್ನು ಮಾಡಿಕೊಂಡರು. ಅದರ ಪ್ರಕಾರ ಅವರು ಒಂದು ರಸ್ತೆಯ ವಿನ್ಯಾಸವನ್ನು ಮಾಡಿ, ಸರ್ಕಾರಕ್ಕೆ ವರದಿಯನ್ನು ಕೊಡಬೇಕೆಂದು ಆಯಿತು. ಇದಾದನಂತರ ಎಂ.ಓ.ಯು, ಆದ ನಂತರ ಈ ರಸ್ತೆಯನ್ನು ಯಾರಾದರೂ ನಿರ್ವಹಣೆ ಮಾಡುತ್ತಾರಾ ಎಂದು ಹೇಳುವ ಕಾಲಕ್ಕೆ "ಕಲ್ಯಾಣ ಕಂಪನಿ" ಯವರು ರಸ್ತೆಯನ್ನು ಮಾಡುವುದಕ್ಕೆ ಮುಂದಾದರು. ಆಗ ಬೇಕಾದಷ್ಟು ಸಭೆಗಳು ಆಯಿತು, ಒಂದು ಫ್ರೇಮ್ ವರ್ಕ್ ಅಗ್ರಿಮೆಂಟ್ ಆಯಿತು, ಹೈಪವರ್ ಕಮಿಟಿಗಳು ಆಯಿತು, ಕ್ಯಾಬಿನೆಟ್ ಸಬ್ ಕಮಿಟಿಗಳು ಆಯಿತು, ಚೀಫ್ ಮಿನಿಸ್ಟರ್‌ರವರ ಅಧ್ಯಕ್ಷರೆಯಲ್ಲಿ ಸಭೆಗಳು ನಡೆಯಿತು. ಇವೆಲ್ಲಾ ಕಾಲಕಾಲಕ್ಕೆ ನಡೆಯುತ್ತಾ ಬಂತು. ಇವೆಲ್ಲಾ ವಿವರಗಳನ್ನು ಅಮೇಲೆ ಕೊಡುತ್ತೇನೆ. ಇಲ್ಲಿ ಉದ್ದೇಶ ಒಂದೇ ಆಗಿತ್ತು. ಅದು ಬೆಂಗಳೂರು–ಮೈಸೂರು ಮಧ್ಯ ಅತೀ ವೇಗದ ಅಂದರೆ ಕನಿಷ್ಟ 120 ಕಿ.ಲೋ ಮೀಟರ್ ವೇಗದಲ್ಲಿ ವಾಹನ ಚಲಿಸುವಂತಹ ಒಂದು ರಸ್ತೆಯನ್ನು ಮಾಡಬೇಕಾಗಿತ್ತು. ಆ ರಸ್ತೆಯಲ್ಲಿ ಯಾವುದೇ ಅಡ್ಡಿ ಆತಂಕಗಳು ಇಲ್ಲದೇ, ಬೆಂಗಳೂರಿನಿಂದ ಮೈಸೂರಿಗೆ ವಾಹನ ಸಂಚಾರ ಮಾಡುವ ಹಾಗೆ ನಿರ್ಮಾಣ ಮಾಡಬೇಕಾಗಿತ್ತು. ಇದರ ಉದ್ದೇಶ ಬೆಂಗಳೂರಿನಿಂದ ಮೈಸೂರಿಗೆ ಜನ, ಮತ್ತೆ ಮೈಸೂರಿನಿಂದ ಬೆಂಗಳೂರಿಗೆ ಜನ ಬಂದು; ಅದಷ್ಟು ಅವರ ವ್ಯವಹಾರಗಳನ್ನು ಮಾಡುವುದಕ್ಕೆ ಮತ್ತು ಜನಸಂದಣಿಯನ್ನು ಕಡಿಮೆ ಇರುವಂತಹ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಆ ರಸ್ತೆಯ ನೆಪದಲ್ಲಿ ನಾವು ಏನು ಮಾಡಿದೆವು, ಕಂಟ್ರಾಕ್ಟ್‌ದಾರರನ್ನು ಕರೆದಂತಹ ಸಂದರ್ಭದಲ್ಲಿ ಅವರು ಸಭೆಗಳಲ್ಲಿ ಹೇಳುತ್ತಾ ಬಂದರು. ಮೊದಲನೆಯ ಸಭೆಯಲ್ಲಿ ನಮಗೆ ತೀರ್ಮಾನವಾಯಿತು. ನಾವು ರಾಜ್ಯ ಸರ್ಕಾರ ಯಾವುದೇ ರೀತಿಯಲ್ಲಿ ಹಣವನ್ನು ಗತೊಡಗಿಸದ ಹಾಗೆ ಈ ರಸ್ತೆಯನ್ನು ಗುತ್ತಿಗೆಗೆ ಕೊಡಬೇಕು. ಈ ರಸ್ತೆಯನ್ನು ಗುತ್ತಿಗೆಗೆ ತೆಗೆದುಕೊಂಡವರು ಹತ್ತು ವರ್ಷದಲ್ಲಿ ಇದನ್ನು ಮುಗಿಸಬೇಕು. ಇನ್ನು 30 ವರ್ಷಗಳಲ್ಲಿ ಅವರು ಟೋಲ್ ಕಲೆಕ್ಟ್ ಮಾಡಿಕೊಳ್ಳಬೇಕು. ಆನಂತರ 30 ವರ್ಷದಲ್ಲಿ ಆ ರಸ್ತೆಯ ಮೇಲೆ ಬರುವಂತಹ ಆದಾಯವನ್ನು ರಾಜ್ಯ ಸರ್ಕಾರಕ್ಕೆ ಬಿಡಬೇಕು. ಇದರ ಜೊತೆಗೆ ಇದು ಲಾಭದಾಯಕವಾದ ವ್ಯವಹಾರವಲ್ಲವೆಂದು ರಸ್ತೆ ಜೊತೆಗೆ ಏಳು ಸೆಟಲೈಟ್ ಟೌನ್‌ಗಳನ್ನು ನಾವು ನಿರ್ಮಾಣ

ಮಾಡುತ್ತೇವೆಂದು ಅವರು ಕೇಳಿಕೊಂಡರು. ಇವು ಅಷ್ಟೂ ಬೆಂಗಳೂರಿನ ಹೊರ ವಲಯದಲ್ಲಿ ಆಗಬೇಕಾಗಿತ್ತು. ಇದು ಬೆಂಗಳೂರಿನಿಂದ ಆಚೆ ಬಿಡದಿಯಿಂದ ಮುಂದಕ್ಕೆ, ನಾವು ಏಳು ಸೆಟಲೈಟ್ ಟೌನ್‌ಗಳನ್ನು ಮಡಬೇಕಾಗಿತ್ತು. ಆ ಏಳು ಸೆಟಲೈಟ್ ಟೌನ್‌ಗಳು ಮತ್ತು ಈ ರಸ್ತೆಗಳು ಸೇರಿ, ನಾವು ಒಂದು ನಕಾಶೆಯನ್ನು, ಪ್ರಾಜೆಕ್ಟ್ ಅನ್ನು ತಯಾರು ಮಾಡಿ ಸರ್ಕಾರಕ್ಕೆ ಆ ಕಂಪನಿಯವರು ಕೊಡಬೇಕಾಗಿತ್ತು. ಅವರು ಒಂದು ಪ್ರಾಜೆಕ್ಟ್ ಅನ್ನು ಮಾಡಿಕೊಟ್ಟರು. ಅದು ಕಾಲ ಕಾಲಕ್ಕೆ ರಿವ್ಯೂ ಆಯಿತು, ಇದು ರಿವ್ಯೂ ಆಗಬೇಕಾದರೆ ಏನಾಯಿತೆಂದರೆ, ನಮ್ಮ ಅಧಿಕಾರಿಗಳು ಕಾಲ ಕಾಲಕ್ಕೆ ಅವರಿಗೆ ಸಲಹೆ ಸಹಕಾರಗಳನ್ನು ಕೊಡುತ್ತಾ ಬಂದರು. ಆ ಸಲಹೆಗಳ ಆಧಾರದ ಮೇಲೆ ನಾನು ಹೇಳ ಬೇಕೆಂದರೆ, ಪ್ರತಿಯೊಂದು ಸಭೆಯ ನಿರ್ಣಯಗಳನ್ನು ಈ ವಿಧಾನ ಸಭೆಯಲ್ಲಿ ಓದುವಂಥಾದ್ದರ ಬಗ್ಗೆ ಸರಿಯಲ್ಲವೆಂದು ನಾನು ತಮಗೆ ಹೇಳುತ್ತಿದ್ದೇನೆ. ಒಂದು ಸಲ ನಿರ್ಣಯವೂ ಆಯಿತು, ನಾವು ಯಾವುದೇ ರೀತಿ ಜಮೀನನ್ನು ಕೊಡುವುದಿಲ್ಲ. ನಿಮಗೆ ಎಷ್ಟು ಜಮೀನು ಬೇಕಾಗುತ್ತದೆಯೋ, ಮತ್ತೆ ಸರ್ಕಾರಿ ಜಮೀನು ಏನು ಇದೆ, ಅದನ್ನೂ ತಾವು ಕೊಂಡುಕೊಳ್ಳಬೇಕಾಗುತ್ತದೆ, ಮತ್ತೆ ಸರ್ಕಾರಿ ಜಮೀನು ಏನು ಇದೆ, ಅದನ್ನೂ ತಾವು ಕೊಂಡು ಕೊಳ್ಳಬೆಕಾಗುತ್ತದೆ. ಆ ಜಮೀನಿನ ಹಣವನ್ನು ತಆವು ಮೊದಲೇ ಡೆಪಾಸಿಟ್ ಮಾಡಬೇಕಾಗುತ್ತದೆ. ಇದರ ಜೊತೆಗೆ ಕೆಲವು ಸಭೆಗಳಲ್ಲಿ ತೀರ್ಮಾನವಾಯಿತು. ಇಲ್ಲಿ ಬರೀ ಜಮೀನನ್ನು ಕೊಟ್ಟರೆ ಆಗುವುದಿಲ್ಲ, ಜಮೀನಿನ ಜೊತೆಗೆ, ಆ ಮನೆಯವರಲ್ಲಿ ಯಾರಿಗಾದರೂ ಒಂದು ಉದ್ಯೋಗವನ್ನು ಕೊಡಬೇಕು, ಅಥವಾ ಜಮೀನಿನ ಜೊತೆಗೆ ಮನೆ ಕಳೆದುಕೊಂಡಿದ್ದರೆ, ಅಥವಾ ಉದ್ಯೋಗವನ್ನು ಕಳೆದುಕೊಂಡಿದ್ದರೆ ಒಂದು ಮನೆಯನ್ನು ಕೊಡಬೇಕು, ಅಥವಾ ಜಮೀನಿನ ಜೊತೆಗೆ ಎಕ್ಸ್‌ಚೇಂಜ್ ಅಂದರೆ ಬೇರೆ ಕಡೆ ಎಲ್ಲಾದರೂ ಜಮೀನನ್ನು ಕೊಡಬೇಕು ಮತ್ತೆ ಸ್ವಲ್ಪ ಹಣ ಸಹಾಯವನ್ನು ಮಾಡಬೇಕೆಂದು ಆಯಿತು. ಇದಾದನಂತರ ಏನಾಯಿತೆಂದರೆ ಜಮೀನನ್ನು ಪ್ಯಾರಲಲ್ ಆಗಿ ಜಮೀನನ್ನು ಕೊಡುವ ವ್ಯವಸ್ಥೆಯಲ್ಲಿ, ಈ ಜಮೀನುಗಳ ವ್ಯವಸ್ಥೆಯನ್ನು ನೋಡಿಕೊಳ್ಳುವವರಿಗೆ ಸ್ವಲ್ಪ ಆಸೆಯೂ ಬಂತು. ಇದು ಎಲ್ಲಾ ಅಲ್ಲಿಯವರೆಗೆ, ಪಿ.ಡಬ್ಲ್ಯೂ.ಡಿ. ಮಂತ್ರಿಗಳ ಅಧೀನದಲ್ಲಿ ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯ ಅಧೀನದಲ್ಲಿ ನಡೆದುಕೊಂಡು ಹೋಗುತ್ತಿತ್ತು, ಏಕೆಂದರೆ ಬೆಮಗಳೂರಿನ ಸುತ್ತ ಮುತ್ತಲಿನ ಜಮೀನನ್ನು ಅಕ್ವೈರ್ ಮಾಡುವುದು, ಮತ್ತು ಅದಕ್ಕೆ ಧಾರಣೆಯನ್ನು ಫಿಕ್ಸ್ ಮ್ಡುವುದು. ಅದನ್ನು ಸರ್ಕಾರಕ್ಕೆ ತೆಗೆದುಕೊಂಡು, ಸಂಬಂಧಪಟ್ಟವರಿಗೆ ವರ್ಗಾವಣೆ ಮಾಡುವಂತಹ ಕೆಲಸ, ರಸ್ತೆಯಾಗಿದ್ದರಿಂದ, ಪಿ.ಡಬ್ಲ್ಯೂ.ಡಿ.ಯು ನೋಡಲ್ ಏಜನ್ಸಿಯಾಗಿ ಇರಬೇಕಾದ್ದು ನ್ಯಾಯವಾಗಿತ್ತು, ಆ ರೀತಿಯಲ್ಲೇ ಇತ್ತು. ಈ ಮಧ್ಯೆ ಏನೊ ಆಯಿತು, ಇದು ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲೆ ಇದ್ದರೆ, ಏನ್ನೂ ಪ್ರಯೋಜನವಾಗುವುದಿಲ್ಲವೆಂದು ಏನೋ ತೀರ್ಮಾನವಾಗಿರಬಹುದು. ಆ ಇಲಾಖೆಯೊಡನೆ ಅನೇಕ ಇಲಾಖೆಗಳು ಸೇರ್ಪಡೆ ಯಾಯಿತು. ಕೆಲವು ಬಾರಿ ಕ್ಯಾಬಿನೆಟ್ ಸಬ್ ಕಮಿಟಿಗಳು ಆಯಿತು. ಅನೇಕ ಜನ ಸನ್ಮಾನ್ಯ ಮಂತ್ರಿಗಳು ಭಾಗವಹಿಸಿದ್ದರು. ಆನಂತರ "ಎಂಪವರ್ ಕಮಿಟಿ" ಎಂದು ಮಾಡಿದರು, "ಹೈ ಲೆವೆಲ್ ಕಮಿಟಿ" ಎಂದು ಮಡಿದರು. ಈ ಕಮಿಟಿಗಳಲ್ಲಿ ಏನೇನು ಡೆಲಿಬರೇಷನ್ಸ್ ಆಗುತ್ತಾ ಬಂತು, ಅವುಗಳು ನಿರ್ಣಯವಾಗುತ್ತಾ ಬಂತು. ನಾನು ತಮಗೆ ಹೇಳಬೇಕೆಂದರೆ ಕನ್‌ಸೋರ್ಟಿಯಂ ಎಂದು ಒಂದು ಗುಂಪು. ಈ ಗುಂಪು ಏನು ಮಾಡುತ್ತಾರೆಂದರೆ, ಇವರು ರಸ್ತೆಗಳನ್ನು ಮಾಡುವುದರ ಜೊತೆಗೆ, "ಟೌನ್ ಶಿಪ್" ಮಾಡುತ್ತೇವೆಂಬುದನ್ನು ಆಮೇಲೆ ರೆಡ್ಯೂಸ್ ಮಾಡಿದರು. ಅದನ್ನು ಐದಕ್ಕೆ ಇಳಿಸಿದರು, ಅದರಲ್ಲಿ ಶ್ರೀರಂಗಪಟ್ಟಣದ್ದು ಬಿಟ್ಟರು, ಮತ್ತೆ ಮೈಸೂರು

ಕಡೆಯದೊಂದು ಬಿಟ್ಟರು. ಈ ಕಡೆ ಮದ್ದೂರು ಕಡೆಯಲ್ಲಿ ಐದು ಟೌನ್ ಶೀಫ್ ಮಾಡುತ್ತೇವೆಮದು ಹೇಳಿದರು. ಅದರಲ್ಲಿ ಒಂದೊಂದು ಟೌನ್ ಶಿಫ್‌ಗೆ ಒಂದೊಂದು ಅಕ್ಟಿವಿಟೀಸ್ ಅನ್ನು, ಹೇಳುತ್ತೇವೆ, ಮತ್ತೆ ಡೆವಲಪ್ ಮಾಡುತ್ತೇವೆಂದು ಹೇಳಿದರು. ಈ ರಸ್ತೆ ಇಷ್ಟೇ ಆದರೆ ಸಾಲುವುದಿಲ್ಲ, ಇದಕ್ಕೆ ಒಂದು ಪೆರಿಫೆರಲ್ ರೋಡ್ ಆಗಬೇಕು, ಬೆಂಗಳೂರು ವೃತ್ತದಲ್ಲಿ ಹೊರಗಡೆ ಇನ್ನೊಂದು ರಸ್ತೆಯನ್ನು ತಂದು ಈ ರೋಡನ್ನು ಕನ್‌ಕ್ಟ್ ಫುಡಿಬಿಟ್ಟು ಬೆಂಗಳೂರಿನವರೆಗೂ ಓಡಾಡಲು ಅನುಕೂಲವಾಗುವಂತೆ ಮಾಡಬೇಕು ಎಂದು ಒಂದು ನಿರ್ಣಯ ತೆಗೆದುಕೊಂಡರು. ಆ ನಂತರ ಏನು ಮಾಡಿದರೆಂದರೆ, ಅಷ್ಟಾದರೆ ಆಗುವುದಿಲ್ಲ, ಇದಕ್ಕೆ ಅಲ್ಲಿಂದಲ್ಲಿಂದ ಲಿಂಕ್ ರೋಡ್‌ಗಳಾಗಬೇಕು ಎಂದು ಮಾಡಿದರು. ನಾಣು ಆವತ್ತು ಮಾತನಾಡುತವಾಗ ತಮಗೆ ಹೇಳಿದೆ, the whole problem has arised from this place. ಈ ರೀತಿ, ಲಿಂಕ್ ರೋಡ್ ಹೆಸರಿನಲಿ, ಪೆರಿಫೆರಲ್ ರೋಡ್ ಹೆಸರಿನಲ್ಲಿ ಬೆಂಗಳೂರಿನಲ್ಲಿರುವ ಭೂಮಿಯನ್ನು ಯಥೇಚ್ಛವಾಗಿ, ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಲ್ಯಾಂಡ್ ಅಕ್ವೈರ್ ಮಾಡಿದರು. ಯಾರ ಜಮೀನಿನ ಮೇಲೆ ಕಣ್ಣು ಬೀಳುತ್ತದೆ, ಅಲ್ಲೊಂದು ಲಿಂಕ್ ರೋಡ್ ಮಾಡುತ್ತೇವೆ ಎಂದು ಹೇಳುವುದು, ಸರ್ವೀಸ್ ರೋಡುಗಳನ್ನು ಮಾಡುತ್ತೇವೆ ಎನ್ನುವುದು, ಇದು ಇದಕ್ಕೆ ಅಗತ್ಯವಿದೆ ಎನ್ನುವುದು, ಅಕ್ವಿಜಿಷನ್ ಮಾಡುತ್ತೇವೆ ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಿದರು. ಈ ಸ್ಥಿತಿ ನಿರ್ಮಾಣವಾಗುವುದಕ್ಕೆ ಮೊದಲೇ, ಅರ್ಧಚಂದ್ರಾಕಾರದ ಒಂದು ಪೆರಿಫೆರಲ್ ರೋಡನ್ನು ಬೆಂಗಳೂರಿನ ಪಶ್ಚಿಮಕ್ಕೆ ಈ ಕಂಪನಿಯವರು ಮಾಡಬೇಕಾಗಿತ್ತು. ಪೂರ್ವಕ್ಕೆ ಇನ್ನೊಬ್ಬರಿಗ್ಯಾರಿಗೋ ಕೊಟ್ಟು ಬಿಟ್ಟಿದ್ದರು ಅಥವಾ ದಕ್ಷಿಣಕ್ಕೆ ಇನ್ನೊಬ್ಬರಿಗ್ಯಾರಿಗೋ ಕೊಟ್ಟು ಬಿಟ್ಟಿದ್ದರು ಅಥವಾ ದಕ್ಷಿಣಕ್ಕೆ ಇನ್ನೊಬ್ಬರಿಗ್ಯಾರಿಗೋ ಕೊಟ್ಟುಬಿಟ್ಟಿದ್ದರು. ಈ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ, ಯಾವುದೋ ಒಂದು ಮಲೇಷಿಯನ್ ಕಂಪನಿಗೆ ಅದನ್ನು ಕೊಟ್ಟಿದ್ದರು. ಅದರ ಜೊತೆಗೆ, ಬಿ.ಡಿ.ಎ. ನವರೂ ಕೂಡ ಒಂದು ರಿಂಗ್ ರೋಡನ್ನು ಪ್ಲಾನ್ ಮಾಡಿದ್ದರು. ಇದನ್ನು ತಾವು ಯೋಚನೆ ಮಾಡಬೇಕು. ಬೆಂಗಳೂರಿನ ಸುತ್ತ ಯಾವುದೋ ಕಂಪನಿಯವರು ಪೆರಿಫೆರಲ್ ರೋಡ್ ಮಾಡುವುದು, ನ್ಯಾಷನಲ್ ಹೈವೇನವರು ಬೈಪಾಸ್ ರೋಡ್ ಮಾಡುವುದು, ಇನ್ನೊಬ್ಬರು ರಿಂಗ್ ರೋಡ್ ಮಾಡುವುದು. ಬಎಂಗಳೂರಿನ ಸುತ್ತ, ಆಜೂಬಾಜಿನಲ್ಲಿ ರೈತರು ಇರುವ ಹಾಗಿಲ್ಲ. ಈ ಸ್ಥಿತಿ ಬಂದಾಗ ಜಮೀನು ಅಕ್ವೈರ್ ಮಾಡುವ ಪ್ರಶ್ನೆಗಳು ಉದ್ಭವವಾದವು. ಇದರ ಜೊತೆಗೆ, ಸರ್ಕಾರೀ ಜನೀನನ್ನೂ ಅವರಿಗೆ ಕೊಡಬೇಕಾದಂತ ತೀರ್ಮಾನಕ್ಕೆ ಸರ್ಕಾರ ಬಂದಿತು. ಇವರ ಫ್ರೇಂವರ್ಕ್ ಅಗ್ರಿಮೆಂಟಿನಲ್ಲಿ ಸ್ಪಷ್ಟವಾಗಿದೆ, ಯಾವುದೇ ಜಮೀನನ್ನು ನಾವು ನಿಮಗೆ ಉಚಿತವಾಗಿ ಕೊಡುವುದಿಲ್ಲ. ಜಮೀನಿಗೆ ಅದರ ಧಾರಣೆ ಕೊಟ್ಟು ತೆಗೆದುಕೊಳ್ಳಬೇಕು ಮತ್ತು ಯಾವುದೇ ಕನ್ಸೆಷನನ್ನು ಕೊಡುವುದಿಲ್ಲ. No liability from Government side ಎಂದು ಸ್ಪಷ್ಟವಾಗಿದೆ. ಆದರೂ ಕೂಡ ಸುಮಾರು ನಾಲ್ಕು ಸಾವಿರ ಚಿಲ್ಲರೆ ಎಕರೆಯಷ್ಟು ಜಮೀನನ್ನು ಬೆಂಗಳೂರಿನಲ್ಲಿ ಐಡೆಂಟಿಫೈ ಮಾಡಿದರು, ಇನ್ನೊಂದಷ್ಟು ಜಮೀನನ್ನು ಬೆಂಗಳೂರಿನ ಹೊರವಲಯದಲ್ಲಿ ಐಡೆಂಟಿಫೈ ಮಾಡಿ, ವಾರ್ಷಿಕವಾಗಿ ಬರೀ 10 ರೂಪಾಯಿ ಲೀಸನ್ನು ಫಿಕ್ಸ್ ಮಾಡಿ, 30 ವರ್ಷ ಆಪರೇಟ್ ಮಾಡಲು ಮತ್ತು 10 ವರ್ಷ ಮಾರಿಟೋರಿಯಂ ಕನ್‌ಸ್ಟ್ರಕ್ಷನ್ ಪಿರಿಯಡ್, ಒಟ್ಟು 40 ವರ್ಷಗಳಿಗೆ ಇವರು ಅವರಿಗೆ ಅಗ್ರಿಮೆಂಟ್ ಮಾಡಿಕೊಟ್ಟರು. ಇದರ ಮಧ್ಯೆ ಬಂದಂಥ ಫಾರಸ್ಟ್ ಜಮೀನನ್ನು ಒಂದು ಹೆಕ್ಟೇರ್‌ಗೆ ಒಂದು ಸಾವಿರ ರೂಪಾಯಿಗೆ ಗುತ್ತಿಗೆ ಕೊಟ್ಟರು, ಅಂದರೆ ಒಂದು ಎಕರೆಗೆ ನಾನೂರು ರೂಪಾಯಿಗೆ ಒಂದು ವರ್ಷಕ್ಕೆ ಇವರು ಅವರಿಗೆ ಲೀಸ್ ಮಾಡಿದರು. ಇಷ್ಟೂ ಪ್ರಾಪರ್ಟಿ 30 ವರ್ಷಗಳಾದ ಮೇಲೆ ಸರ್ಕಾರಕ್ಕೆ ವಾಪಸ್ಸು

ಬರಬೇಕು ಎನ್ನುವ ಅಗ್ರಿಮೆಂಟ್ ಇದು. ಮತ್ತು ಅವನು ಡೆವೆಲಪ್ ಮಾಡುವ ಟೌನ್‌ಶಿಪ್‌ನಲ್ಲೂ ರಿಸರ್ವೇಷನ್ ಇಡಬೇಕು. ಸಮಾಜದಲ್ಲಿರುವ ಕೆಳವರ್ಗದ ಜನರಿಗೆ, ಮಧ್ಯಮ ವರ್ಗದ ಜನರಿಗೆ ನಾವು ಇಷ್ಟು ರಿಸರ್ವ್ ಇಟ್ಟುಬಿಟ್ಟು, ಮಿಕ್ಕಿದ್ದರಲ್ಲಿ ಹಣ ಮಾಡಿಕೊಳ್ಳುತ್ತೇವೆ ಎಂದು ಆ ಕಂಪನಿಯವರು ಇವರ ಜೊತೆ ಫ್ರೇಂವರ್ಕ್ ಅಗ್ರಿಮೆಂಟ್ ಮಾಡಿಕೊಂಡಂಥಾದ್ದು. ಈಗ ಇದೆಲ್ಲವನ್ನೂ ಮೀರಿ ಹೋಗಿಬಿಟ್ಟಿತು. ಮತ್ತೊಂದು ವಿಷಯ ತಮ್ಮ ಗಮನಕ್ಕೆ ತರುವುದೆಂದರೆ, ನನಗೆ ತಿಳಿದ ಮಟ್ಟಿಗೆ ಇದುವರೆಗೆ ನಾನು ತಿಳಿದಮಟ್ಟಿಗೆ ಸರ್ಕಾರದಲ್ಲಿ ಅಲೈನ್‌ಮೆಂಟ್ ಫಿಕ್ಸ್ ಆಗಿರುವ ಸ್ಕೆಚ್ ಇವರ ಹತ್ತಿರ ಇಲ್ಲ. Till this day ಪಕ್ಕ ಅಲೈನ್‌ಮೆಂಟ್ ಆಗಿಯೇ ಇಲ್ಲ. ಈ ರಸ್ತೆ ಎಲ್ಲಿಂದ ಎಲ್ಲಿಗೆ ಹೋಗುತ್ತದೆ, ಇದಕ್ಕೆ ಪೆರಿಫೆರಲ್ ರೋಡ್ ಯಾವುದು, ಇದಕ್ಕೆ ಲಿಂಕ್ ರೋಡ್ ಯಾವುದು, ಇದಕ್ಕೆ ಸರ್ವೀಸ್ ರೋಡ್‌ಗಳ್ಯಾವುವು ಎನ್ನುವ ಬಗ್ಗೆ ಇವತ್ತಿನವರೆಗೆ ಸ್ಕೆಚ್ ಆಗಿಲ್ಲ. ಇದ್ದರೆ, ಅವರು ಕೊಟ್ಟರೆ ಏನಾದರೊಂದು ಆಗಬಹುದು. ಯಾವುದೇ ಒಂದು ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಆಗಬೇಕಾದರೆ, ಪಕ್ಕಾ ಆಗಿರುವ ಒಂದು ಅಲೈನ್‌ಮೆಂಟ್ ಸ್ಕೆಚ್ಚನ್ನು ನೀವು ನಿಮ್ಮ ಮುಂದೆ ಇಟ್ಟುಕೊಂಡಿರಬೇಕು. ಎಷ್ಟು ವಿಸ್ತೀರ್ಣದ ಜಮೀನನ್ನು ತಾವು ಅಕ್ವೈರ್ ಮಾಡುತ್ತೀರಿ, ಅದಕ್ಕೆ ಒಂದು ನೋಟಿಫಿಕೇಷನ್ ಆಗಬೇಕು. ಯಾವ ಯಾವ ಕೆಟಗರಿ ಜಮೀನನ್ನು ಅಕ್ವೈರ್ ಮಾಡುತ್ತೀರಿ ಎಂದು ನೋಟಿಫಿಕೇಷನ್ ಆಗಬೇಕು. ಆದರೆ ಇಲ್ಲಿ ಏನಾಗಿದೆ ಎಂದರೆ, ಎಲ್ಲಾದರೂ ವೆಟ್ ಲ್ಯಾಂಡ್ ಬಂದರೆ, ಕನ್‌ಸ್ಟ್ರಕ್ಷನ್ ಇರುವ ಏರಿಯಾಗಳು ಬಂದರೆ, ಅಂಥ ಕಡೆಗಳಲ್ಲಿ ಸರ್ವೆ ಮಾಡತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಸಹ, ಬೆಂಗಳೂರು ಹೊರವಲಯದಲ್ಲಿ ಮನೆ ಕಟ್ಟಿರುವ ಜಾಗಗಳು ಅಕ್ವೈರ್ ಆಗಿವೆ, ಬೆಂಗಳುರು ಹೊರ ವಲಯದಲ್ಲಿ ಕೆ.ಐ.ಎ.ಡಿ.ಬಿ ಯವರು ಇಂಡಸ್ಟ್ರಿಯಲ್ ಪರ್ಪಸ್‌ಗೆ ಎಂದು ಅಕ್ವೈರ್ ಮಾಡಿ, ಇಂಡಸ್ಟ್ರಿ ಸೆಟಪ್ ಆಗಿದೆ ಎಂದು ಸರ್ಟಿಫಿಕೇಟ್ ಕೊಟ್ಟಿರುವ ಜಾಗಗಳೂ ಅಕ್ವೈರ್ ಆಗಿವೆ, ಬೆಂಗಳೂರು ಹೊರವಲಯದಲ್ಲಿ ಬಡವರು 'ಆಶ್ರಯ' ಸಮಿತಿಯಲ್ಲಿ ಮನೆ ಕಟ್ಟಿಕೊಳ್ಳಬೇಕಾದಂಥ ಜಮೀನನ್ನು ಅಕ್ವೈರ್ ಮಾಡಿದ್ದಾರೆ, ಬೆಂಗಳೂರು ಹೊರವಲಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದವರನ್ನು ಎತ್ತಿಹಾಕುವ ಕೆಲಸ ಮಾಡಿ, ಅವರಿಗೆ ಕಾಂಪನ್‌ಸೇಷನ್ ಇಲ್ಲದ ಸ್ಥಿತಿಯಲ್ಲಿ ಪೊಸಿಷನನ್ನು ಕ್ಲಿಯರ್ ಮಾಡಿಸಿಬಿಟ್ಟು ಅಕ್ವಿಜಿಷನ್ ಮಾಡಿದ್ದಾರೆ. ಇದು ಗವರ್ನಮೆಂಟ್ ಜಾಗವಾದ್ದರಿಂದ 10 ರೂಪಾಯಿಗೆ ಜಮೀನು ಸಿಗುತ್ತದೆಂದು ಹಾಗೆ ಮಾಡಿದ್ದಾರೆ. ಇಷ್ಟು ದೊಡ್ಡ ಹುನ್ನಾರ ಏಕೆ ಆಯಿತೆಂದರೆ, ಅವರಿಗೆ ಗೊತ್ತಾಗಿ ಬಿಟ್ಟಿತು, ನಾವು ಕೇವಲ ರಸ್ತೆ ಮಾಡುವುದರಿಂದ, ಟೌನ್‌ಶಿಪ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹೇಗಾದರೂ ಮಾಡಿ ಬೆಂಗಳೂರಿನಲ್ಲಿ ಒಂದು ಎಸ್ಟೇಟ್ ದಂಧೆಯನ್ನು ಆರಂಭ ಮಾಡಬೇಕು, ಈ ಎಸ್ಟೇಟ್ ದಂಧೆಯನ್ನು ಮಾಡದೇ ಹೋದರೆ ಇಲ್ಲಿ ಲಾಭ ಮಾಡುವುದಕ್ಕೆ ಯಾವ ಕಂಪನಿಯವರಿಗೂ ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಂಡು, ಸರ್ಕಾರ ನಡೆಸುವವರು ಮತ್ತು ಇವರ ಜೊತೆ ಕಾಂಟ್ರಾಕ್ಟ್‌ಗೆ ಬರುವವರು, ಇವರಿಬ್ಬರೂ ಶಾಮೀಲಾಗಿ ಈ ಸ್ಥಿತಿಯನ್ನು ನಿರ್ಮಾಣ ಮಾಡಿದರು. ಬೆಂಗಳೂರಿನ ಅಜುಬಾಜಿನಲ್ಲಿ ಅಕ್ವೈರ್ ಆದ ಜಮೀನಿಗೆ ಒಂದು ಎಕರೆಗೆ ಎರಡು ಲಕ್ಷ ರೂಪಾಯಿ ಕಾಂಪನ್‌ಸೇಷನ್ ಕೊಟ್ಟಿದ್ದಾರೆ. ಇವತ್ತು ಕಾಸ್ಟ್ ಆಫ್ ದಿ ಲ್ಯಾಂಡ್ ಎಷ್ಟಿದೆ? ಅದೇ ಲ್ಯಾಂಡನ್ನು, ಡೆವೆಲಪ್ ಮಾಡಿದ್ದೇವೆ ಎಂದು ಸುಳ್ಳು ಹೇಳಿ 25 ಲಕ್ಷ ರೂ 30 ಲಕ್ಷ ರೂ.ಗಳಿಗೆ ಮಾರಿದರು. ಕೆ.ಐ.ಎ.ಡಿ.ಬಿ.ಯವರು ಯಾವ ಲ್ಯಾಂಡಿಗೆ 2 ಲಕ್ಷ ರೂದಿಂದ 6 ಲಕ್ಷ ರೂಪಾಯಿಗಳವರೆಗೆ ನಿಗದಿ ಮಾಡಿ ಕಾಂಪನ್‌ಸೇಷನನ್ನು ಕೊಟ್ಟಿದ್ದಾರೆ, ಅದೇ ಜಮೀನನ್ನು ರೈತರಿಂದ, ಬಡವರಿಂದ ಅಕ್ವೈರ್

ಮಾಡಿಕೊಂಡು, 25 ಲಕ್ಷ 30 ಲಕ್ಷ ರೂಪಾಯಿ ಒಂದು ಎಕರೆಗೆ ಎಂದು ಮಾರಿದ್ದಾರೆ. BOT was the turnkey of the entire project, build, operate and transfer ಎಂದು ಏನಿತ್ತು, ಆಪರೇಟ್ ಮಾಡಿ, ನಮಗೆ ಟ್ರಾನ್ಸ್‌ಫರ್ ಮಾಡಬೇಕು ಎಂದು ಮಾಡಿದಂಥ ಪ್ರಾಜೆಕ್ಟನ್ನು ಇವತ್ತು ಅವರು ಸ್ವಂತಕ್ಕೆ ಇಟ್ಟುಕೊಮಡು ಎಸ್ಟೇಟ್ ಬಿಸಿನೆಸ್ಸನ್ನು ಸ್ಟಾರ್ಟ್ ಮಾಡಿದ್ದಾರೆ. ನಾನು ಆವತ್ತು ಇಲ್ಲಿ ಮಾತನಾಡುವಾಗ ಹೇಳಿದೆ, ಬ್ರೋಚರ್‌ಗಳನ್ನು ಮಾಡಿದ್ದಾರೆ, ಓಪನ್ ಅಡ್ವರ್ಟೈಸ್‌ಮೆಂಟ್‌ಗಳಾಗುತ್ತಿವೆ. 'ನಿವರಗೆ ಯಾವುದೇ ರೀತಿ ತಾಪತ್ರಯ ಇಲ್ಲದ ಹಾಗೆ ಸೈಟ್ ಬೇಕೇ? ನಮ್ಮ ಹತ್ತಿರ ಅರ್ಜಿ ಹಾಕಿಕೊಳ್ಳಿ. ಹೀಗೆ ಅಡ್ವೈಸ್‌ಮೆಂಟ್‌ಗಳನ್ನು ಕೊಡುತ್ತಿದ್ದಾರೆ. ಈ ಸೈಟುಗಳನ್ನು ಮಾರುವ ಕೃತ್ಯಕ್ಕೆ ಚರ್ಚೆಯಾದಂಥ ಸಭೆ ಈ ರಾಜ್ಯದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಗುತ್ತದೆ. ನಾವು ಸೈಟುಗಳನ್ನು ಮಾಡಿ ಮಾರುತ್ತೇವೆ ಎಂದು ಚರ್ಚೆಯಾಗುವ ಕಾಲಕ್ಕೆ, ಆವತ್ತಿನ ಮುಖ್ಯಮಂತ್ರಿಗಳು ಆ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. I am shocked to understand ಇದು ಹೇಗಾಯಿತು? ಅವರೇನಾದರೂ ಮಂಪರಿನಲ್ಲಿದ್ದರೇ ಅಥವಾ ಬೇಕಂತಲೇ ಮಾಡಿದರೇ? ಅಥವಾ ಗೊತ್ತಿಲ್ಲದೇ ಮಾಡಿದರೇ? ಅವರಾಗಿಯೇ ಇಲ್ಲಿ ಬಂತು ಉತ್ತರ ಹೇಳಬೇಕು. ಆವತ್ತಿನ ಆ ಸಭೆಯಲ್ಲಿ ಅವರು ಇದ್ದರು, ಕರ್ನಾಟಕ ರಾಜ್ಯದ ಘನತೆವೆತ್ತ ಮುಖ್ಯಮಂತ್ರಿಗಳು, ಸೈಟ್ ಮಾರಬಹುದು ಎಂದು ತೀರ್ಮಾನವಾಗಿರುವ ಸಭೆಯ ಅಧ್ಯಕ್ಷತೆ ವಹಿಸಿದ್ದರು, ಅದಕ್ಕೆ ನಾನು ಮತ್ತೆ ಬರುತ್ತೇನೆ. ಇಲ್ಲಿ, ಜಮೀನನ್ನು ತೆಗೆದುಕೊಂಡರಲ್ಲಾ ಅದನ್ನು ಏನು ಮಾಡಿದರು? ಅದನ್ನು ಐ.ಸಿ.ಐ.ಸಿ.ಐ. ಬ್ಯಾಂಕಿಗೆ 150 ಕೋಟಿ ರೂಪಾಯಿಗೆ ಪ್ಲೆಡ್ಜ್ ಮಾಡಿದರು. ಐ.ಸಿ.ಐ.ಸಿ.ಐ. ಬ್ಯಾಂಕಿಗೆ ಪ್ಲೆಡ್ಜ್ ಮಾಡಿ, 20 ಕೋಟಿ ರೂಪಾಯಿಗಳನ್ನು ಕೆ.ಐ.ಎ.ಡಿ.ಬಿ.ಗೆ ಡೆಪಾಸಿಟ್ ಮಾಡಿದ್ದಾರೆ. ಇನ್ನುಳಿದ 130 ಕೋಟಿ ರೂ. ಎಲ್ಲಿ ಹೋಯಿತು ಎಂಬುದು ಗೊತ್ತಿಲ್ಲ. Condition prevailing was entire ಅಮೌಂಟನ್ನು ಡೆಪಾಡಿಟ್ ಮಾಡಿ ಜಮೀನನ್ನು ಅಕ್ವೈರ್ ಮಾಡಬೇಕು ಎನ್ನುವುದು. ಇವತ್ತು, ಇದೆಲ್ಲವನ್ನೂ ಓವರ್‌ಲುಕ್ ಮಾಡಿ ಆ ಕಂಪನಿಯಾಗಿದೆ. ಇಷ್ಟೆಲ್ಲಾ ಆದರೂ, ಅವರು ಅದನ್ನು ಆಪರೇಟ್ ಮಾಡಿದ್ದಾರೆಯೇ? ಇಲ್ಲ. ಅಧ್ಯಕ್ಷರೇ, ತಾವು ಇಲ್ಲಿಗೆ ಆ ದಿಕ್ಕಿನಿಂದ ಬರುವವರೇ. ಮೈಸೂರರಿನಿಂದ ಬರುವ ರೋಡಿನಲ್ಲಿ ಬರುವವರು ನೀವು. ಬೆಂಗಳೂರಿನಿಂದ ಮೈಸೂರಿಗೆ ಇರುವ ಒಂದೇ ಒಂದು ಕಿಲೋಮೀಟರ್ ಸಹ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ರೋಡ್ ಆಗಿಲ್ಲ. ಒಂದೇ ಒಂದು ಕಡೆಯೂ ಮನೆ ಬೆಳೆದಿಲ್ಲ. 1995ನೇ ಇಸವಿಯಲ್ಲಿ ಕಂಡೀಷನ್ ಆಗಿ ಫಸ್ಟ್ ಸ್ಟೇಜ್‌ನಲ್ಲಿ ಐದು ವರ್ಷದಲ್ಲಿ ಮುಗಿಸುತ್ತೇವೆ, ಸೆಕೆಂಡ್ ಸ್ಟೇಜನ್ನು ಮೂರು ವರ್ಷದಲ್ಲಿ ಮುಗಿಸುತತೇವೆ, ಥರ್ಡ್ ಸ್ಟೇಜನ್ನು ಎರಡು ವರ್ಷದಲ್ಲಿ ಮುಗಿಸುತ್ತೇವೆ ಎಂದು ಅಗ್ರಿಮೆಂಟ್ ಆಗಿತ್ತು, ಈಗ 9ನೇ ವರ್ಷ ತುಂಬಿ, 10ನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ, ಇದುವರೆಗೂ ಒಂದೇ ಒಂದು ಇಂಚು ಜಮೀನು ಸಹ ರಸ್ತೆ ಫಾರ್ಮೇಷನ್‌ನಲ್ಲಿ ಬಂದಿಲ್ಲ. ಒಂದೇ ಒಂದು ಸಣ್ಣ ಕೆಲಸ ಕೂಡ ಅವತ್ತಿನ ಫ್ರೇಂವರ್ಕ್ ಅಗ್ರಿಮೆಂಟ್ ಪ್ರಕಾರ ನಡೆದಿಲ್ಲ. ಆದರೆ ಭೂಮಿ ಕಬಳಿಸುವ ಕೆಲಸ ಯಥೇಚ್ಛವಾಗಿ ನಡೆದಿದೆ. ಇಪತ್ತು 29 ಸಾವಿರ ಚಿಲ್ಲರೆ ಎಕರೆ ಜಮೀನುನ್ನು ನಾವು ಅಕ್ವಿಜಿಷನ್‌ಗೆ ಪ್ರಪೋಸ್ ಮಾಡಿದ್ದೇವೆ ಅಥವಾ ಅಕ್ವೈರ್ ಮಾಡಿದ್ದೇವೆ, ಅದು ಡಿಫರೆಂಟ್ ಸ್ಟೇಜ್‌ನಲ್ಲಿ ಇದೆ ಎಂದು ಅವರು ಹೇಳುತ್ತಿದ್ದರಲ್ಲಾ ನಾನು ನಂತರ ಅದರ ಡೀಟೇಲ್ಸ್‌ಗೆ ಬರುತ್ತೇನೆ. ಈ ಕಂಪನಿಯವರು ಹೈಕೋರ್ಟ್ ಮುಂದೆ ಏನು ಹೇಳುತ್ತಾರೆ. ಈ ಬಗ್ಗೆ ಹೈಕೋರ್ಟ್ ಒಂದು ಪಿಟೀಷನ್ ಹೋಗುತ್ತದೆ. what is the extent of land required in Bangalore City? ಎನ್ನುವುದಕ್ಕೆ ಅವನು ಹೇಳುತ್ತಾನೆ, 1,600 acres

ಎಂದು. ನನಗೆ ಬೆಂಗಳೂರಿನೊಳಗೆ 1600 ಎಕರೆ ಜಮೀನು ಸಾಕು ಎಂದು ಕರ್ನಾಟಕದ ಹೈಕೋರ್ಟಿನ ಮುಂದೆ ಕಂಪನಿಯವನು ಹೇಳಿದ್ದಾನೆ. ಆದರೆ ಇವತ್ತು ನೀವು 10 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡುತ್ತಿದ್ದೀರಿ. ಜಸ್ಟೀಸ್ ಚಂದ್ರಶೇಖರಯ್ಯ ನವರು ಅವಾರ್ಡ್ ಪಾಸ್ ಮಾಡುತ್ತಾರೆ, ನಿಮಗೆ ಏನು ರಿಕ್ವೈರ್‌ಮೆಂಟ್ ಇದೆ, ಅಷ್ಟನ್ನು ಬಿಟ್ಟು ನೀವು ಅಕ್ವೈರ್ ಮಾಡತಕ್ಕದ್ದಲ್ಲ ಎಂದು ಹೇಳುತ್ತಾರೆ. ಆದರೂ ಇಲ್ಲಿ ಯಾವ ಕೃತ್ಯವೂ ಅಕ್ವಿಜಿಷನ್ ಪ್ರೊಸೀಡಿಂಗ್‌ನಲ್ಲಿ ನಿಲ್ಲುವುದಿಲ್ಲ. ನನಗೆ ಬೆಂಗಳೂರಿನ ಪೆರಿಫೆರಲ್ ಏರಿಯಾದಲ್ಲಿ 1600 ಎಕರೆ ಜಮೀನು ಸಾಕು ಎಂದು ಅವನು ಏಕೆ ಹೇಳಿದ? what made the Government to go for further acquisition of land? ತಿನ್ನುವುದಕ್ಕಾಗಿಯೇ? ಬೆಂಗಳೂರನ್ನು ಮಾರುವುದಕ್ಕೇ ಅಥವಾ ಬಡವರನ್ನು ನಿರ್ನಾಮ ಮಾಡಲು ಈ ಕೃತ್ಯವನ್ನು ಮಾಡಿದ್ದಾರೆಯೇ? ತಮಗೇ ಗೊತ್ತಿದೆ, ಬೆಂಗಳೂರಿನಲ್ಲಿ ಕೆ.ಐ.ಎ.ಡಿ.ಬಿ. ಒಂದೇ ಒಂದು ಏಜೆನ್ಸಿ ಅಲ್ಲ, ಲ್ಯಾಂಡ್ ಅಕ್ವೈರ್ ಮಾಡಲು ಪ್ರಿವೈಲಿಂಗ್ ಏಜೆನ್ಸಿ ಇದ್ದದ್ದು, ಬಿ.ಡಿ.ಎ. ಇತ್ತು ಬಿ.ಎಂ.ಆರ್‌.ಡಿ.ಎ ಇತ್ತು, ಪಿ.ಡಬ್ಲ್ಯೂ.ಡಿ ನವರಿದ್ದರು, ರೆವಿನ್ಯೂನವರಿದ್ದರು ಮತ್ತು ಸಿ.ಡಿ.ಪಿ ಎಂದು ಕಾಂಪ್ರಹೆನ್ಸೀವ್ ಡೆವೆಲಪ್‌ಮೆಂಟ್ ಪ್ಲಾನ್ ಮಾಡುವಂಥ ಅದರದೇ ಆದ ಯೋಜನಾ ಪ್ರಾಧಿಕಾರ ಬೆಂಗಳೂರಿನಲ್ಲಿತ್ತು. ಆಗಾಗ ಬೇಕಾದಷ್ಟು ನಿರ್ಣಯಗಳನ್ನು ಈ ಸ್ಟಾಚುಟರಿ ಬೋರ್ಡ್‌ಗಳನ್ನು ತೆಗೆದುಕೊಂಡಿದ್ದವು. ಒಂದು ಸ್ಟಾಚುಟರಿ ಬೋರ್ಡಿನ ನಿರ್ಣಯವನ್ನು ತಮಗೆ ಉದಾಹರಣೆಗಾಗಿ ಹೇಳುತ್ತೇನೆ. ತಿಪ್ಪಗೊಂಡನಹಳ್ಳಿ ರಿಸರ್ವಾಯರ್ ಬಗ್ಗೆ ಬಹಳ ಹೊತ್ತು ಚರ್ಚೆ ಮಾಡಿ, ತಿಪ್ಪಗೊಂಡನಹಳ್ಳಿ ರಿಸರ್ವಾಯರ್ ಪೊಲ್ಯೂಟ್ ಆಗುತ್ತಿದೆ. Tippagondanahalli reservoir is the main source of drinking water for Bangalore City ಇದನ್ನು protect ಮಾಡಬೇಕು at any cost ಎಂದು ಒಂದು decision ಆಗುತ್ತದೆ. ಇವತ್ತು ತಿಪ್ಪಗೊಂಡನಹಳ್ಳಿಯ reservoir ಆಜುಬಾಜು ತಾವು ಹೋಗಿಬರಬೇಕು. ಆ Resolution ಆಗುವುದು ಏನಾಗುತ್ತದೆ ಎಂದರೆ the inflow of water has to be protected, ecology has to be balanced. Nature has to be protected. Environment safety has to be maintained. ಇದರಲ್ಲಿ ಎಲ್ಲಾ ಸೇರಿಕೊಂಡಿದೆ. ಹಾಗಾಗಿ, This has to be treated as hundred per cent green belt area. ಇಲ್ಲಿ ಯಾವುದೇ construction ತರುವುದಾಗಲಿ, ಯಾವುದೇ industrial operations ಮಾಡುವುದಾದಲಿ, ಇದಕ್ಕೆ ಬರುತ್ತಿರುವ ಅರ್ಕಾವತಿ ಅಥವಾ ಕುಮದವತಿ ಏನು ಅಚ್ಚುಕಟ್ಟು ಏರಿಯಾ ಅಥವಾ catchment area ಇದೆ ಅಲ್ಲಿಂದ ಈ reservoir ಗೆ ಬರುವ ನೀರನ್ನು ಅಡ್ಡಿ ಮಾಡುವ ಕೃತ್ಯವನ್ನು ಅಲ್ಲಿ ಮಾಡಬಾರದು, ಮತ್ತೆ ಬೆಂಗಳೂರು ಸಿಟಿಯವರಿಗೆ ಕುಡಿಯುವ ನೀರು ಇದು ಪವಿತ್ರವಾದದು ಎಂದು decision ತೆಗೆದುಕೊಳ್ಳುತ್ತಾರೆ. ನೀರಿನ ಪಾವಿತ್ರತೆಯನ್ನು ನಾವು ನೂರಕ್ಕೆ ನೂರು ಕಾಪಾಡಬೇಕು. ಇವತ್ತು ಆ ನೈಸ್ ಕಂಪನಿಯವರ ಕಣ್ಣಿಗೆ ಅದೂ ಕೂಡ ಬಿದ್ದುಬಿಟ್ಟಿದೆಯಲ್ಲ! In and around Thippagondanahalli, we have acquisition proposals. ಅಲ್ಲಿಂದ ಕಡೆಗೆ ಬಂದು ಮುಂದಕ್ಕೆ ಹೋದರೆ ಮಾಧಾವರ ಎನ್ನುವ ಊರನ್ನು ಮತ್ತು ಇನ್ನೊಂದನ್ನು ನೆಲಮಂಗಲ ತಾಲ್ಲೂಕಿನಲ್ಲಿ ಹೀಗೆ ಎರಡು ಊರನ್ನು any cost, any cost a ಆ ಊರಿನಲ್ಲಿ ಇನ್ನು ಮುಂದೆ land acquisition ಆಗಲಿ construction work ಆಗಬಾರದೆಂದು ಸರ್ಕಾರದ ಆದೇಶ ಇತ್ತು. Secretary of that Panchayat shall not issue any new licences till the

consent of government ಎಂದು ಆ ಪಂಚಾಯತಿಗೆ ಒಂದು ಆದೇಶ ಹೋಯಿತು. ಅಲ್ಲಿ ಇಡೀ ಊರು ಊರನ್ನೇ acquire ಮಾಡಿ ಆಗಿದೆ. ಯಾರಿಗೋಸ್ಕರ acquire ಆಯಿತು ಅದು ಗೊತ್ತಿಲ್ಲ. Entire project ಯಾರ ಉದ್ದೇಶಕ್ಕೆ ನಡೆಯಿತು ಎಂದು ಮಾತನಾಡುತ್ತಾ ಹೋದರೆ ಇದು road ಮಾಡಲಿಕ್ಕೆ ನಡೆಯಲೇ ಇಲ್ಲ. ರಸ್ತೆ ಅಗತ್ಯಕ್ಕೆ acquire ಆಗಲಿಲ್ಲ. ಅಲ್ಲಲ್ಲಿ ಕಟ್ಟಡದ ಮೈದಾನ ಇದಾಯಿತು. ನಾವು ಏನೇನು ಮಾಡಬೇಕಾಗಿತ್ತು ಅದು ನಮಗೆ ಗೊತ್ತಿಲ್ಲ. ಇದು ನಮ್ಮ ದೃಷ್ಟಿಗೆ ಬಿದ್ದುಬಿಟ್ಟಿತು. C.D.P planನಲ್ಲಿ conversions ಮಾಡಬಾರದು ಎಂದು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಇವೆಲ್ಲವನ್ನೂ ಆ ಮೇಲೆ ನಾನು ನಿಮಗೆ ಓದಿ ಹೇಳುತ್ತೇನೆ. ಇವೆಲ್ಲವನ್ನೂ ಮೀರಿ ಸುಮಾರು 35000 ಎಕರೆಯಷ್ಟು ಜಮೀನನ್ನು ಬೆಂಗಳೂರಿನ ಸುತ್ತ further acquisition ಗೆ ಹುನ್ನಾರ ನಡೆದಿದೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ? ನಾವು ಎಲ್ಲಿಗೆ ಹೋಗಿ ನಿಂತುಕೊಳ್ಳುತ್ತಿದ್ದೇವೆ? ಇದನ್ನು ಯಾರು ತಡೆಯುವವರು? ಅರ್ಥ ಆಗಿಲ್ಲ. ಆಧಿಕಾರ ಸ್ಥಾನಗಳಲ್ಲಿ ಕುಳಿತವರು ಈ ತರಹ ಕೃತ್ಯವಗಳನ್ನು ಮಾಡಿಕೊಂಡು ಹೋದರೆ ಬಹುಶಃ ಈ ರಾಜ್ಯದ ರಕ್ಷಣೆ ಮಾಡುವವರು ಯಾರು? ಈ ರೈತರ ರಕ್ಷಣೆ ಮಾಡುವವರು ಯಾರು ಎನ್ನುವ ಪ್ರಶ್ನೆಯನ್ನು ಕೇಲಬೇಕಾಗುತ್ತದೆ. ಇದನ್ನು ಯಾರ ಮೇಲೋ ದ್ವೇಷಕ್ಕೆ ಆಡುವ ಮಾತಲ್ಲ. ಅಥವಾ ನಮ್ಮನ್ನು ಯಾರೋ ತಯಾರು ಮಾಡಿ ನಿಲ್ಲಿಸುವ ಮಾತುಗಳು ಇವಲ್ಲ. ನಾವು ಬಹಳ concern ಅನ್ನು ಈ ರಾಜ್ಯದ ಮಕ್ಕಳಿಗೆ ತೋರಿಸುತ್ತೇವೆ. ಬಹಳ concern ಅನ್ನು ಈ ರಾಜ್ಯದ ರೈತರಿಗೆ ತೋರಿಸುತ್ತೇವೆ. ಈ ಬೆಂಗಳೂರು ಸಿಟಿ ವಿಷಯ ಬಂದಾಗ ನಮ್ಮ commitment ಏನಾಗಿದೆ ಎಂದು ಪ್ರಶ್ನೆ ಮಾಡಿಕೊಳ್ಳಬೇಕು. ಬೆಂಗಳೂರು ಜನರನ್ನು ಕೊಂದುಬಿಟ್ಟೆವು. ಇವತ್ತು ಬೆಂಗಳೂರಿನ ಗಾಂಧಿನಗರದಲ್ಲಿ 10 ಪರ್ಸೇಂಟ್ ಜನ Bangaloreans ಇಲ್ಲ. ಚಿಕ್ಕಪೇಟೆಯಲ್ಲಿ 10 ಪರ್ಸೇಂಟ್ ಇಲ್ಲ. ಚಾಮರಾಜ ಪೇಟೆಯಲ್ಲಿ 10 ಪರ್ಸೇಂಟ್ ಇಲ್ಲ. ರಾಜಾಜಿನಗರದಲ್ಲಿ ಕೂಡ ಇವತ್ತು ಇವರು ಜಾಗ ಮಾರಿ ನಾನೇನೋ ಸಾಧನೆ ಮಾಡುತ್ತೇನೆಂದು ಆಚೆಗೆ ಹೋಗಿ ಸೈಟ್ ತೆಗೆದುಕೊಂಡು ಚಿಕ್ಕ ಮನೆ ಕಟ್ಟಿಕೊಳ್ಳುವುದು, ಈ ಬೆಂಗಳೂರು ಹೋದ ಹಾಗೆ ಹೋದ ಈ ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರೂ ಕೂಡ ಮುಂದಕ್ಕೆ ಹೋಗುತ್ತಾ ಇದ್ದಾರೆ. ಈಗ ರೈತರನ್ನೂ ಸಹ ಒಕ್ಕಲೆಬ್ಬಿಸುವ ಕೆಲಸ ಸೃಷ್ಟಿಯಾಗಿಬಿಟ್ಟಿದೆ. ಎಲ್ಲಿಯವರೆಗೆ ಹೋಗಿದೆ ಎಂದರೆ ಇವರಿಗೆ ಇಷ್ಟ ಬಂದ ಹಾಗೆ ಹೇಗೇಗೆ ಬೇಕೋ ಹಾಗೆ alignment ಗಳನ್ನು ಚೇಂಜ್ ಮಾಡಿಕೊಳ್ಳುತ್ತಾರೆ. ಏಕೆ? There is no approved alignment or plan with the government even to-day. ಇವತ್ತು ಕೂಡ ಸರ್ಕಾರದ ಮುಂದೆ ಇಲ್ಲ. This is the final alignment ಎಂದು ಇದಕ್ಕೆ ಯಾರೂ ಹೇಳಲೇ ಇಲ್ಲ. P.W.D. Secretary sign ಮಾಡಿಲ್ಲ, ನಿಮ್ಮ Infrastructure corridor ಗೆ ಜಮೀನು acquire ಮಾಡುವ KAIDB ಯವರಿಗೆ ಎಲ್ಲಿ alignment ಇದೆಯೆಂದು ಗೊತ್ತಿಲ್ಲ. High Court of Karnataka ಇವತ್ತು ಒಂದು Judgment ಕೊಟ್ಟಿದೆ. ನಿಮಗೆ ಜಮೀನು ಎಷ್ಟು ಬೇಕಾಗಿತ್ತೋ ಅಷ್ಟನ್ನು acquire ಮಾಡುವುದು ಬಿಟ್ಟುಬಿಟ್ಟು Why are you going in for excess acquisition? ಏತಕ್ಕೆ acquisition ಮಾಡಿದಿರಿ ಎಂದು ಕೇಳುತ್ತಾರೆ. ಅದಕ್ಕೆ ಇವರೇ ಒಂದು ಮಾಹಿತಿಯನ್ನು ಕೊಡುತ್ತಾರೆ. ಎಷ್ಟು ಬೇಕಾಗಿತ್ತು ಇವರು ಎಷ್ಟು acquire ಮಾಡುತ್ತಾರೆ ಒಂದು ಸಣ್ಣ ಉದಾಹರಣೆಯನ್ನು ತಮಗೆ ಇಲ್ಲಿ ನಾನು ಓದುತೇನೆ. ಬೆಂಗಳೂರು ರೋಡಿಗೆ ಎಷ್ಟಷ್ಟು ಜಮೀನನ್ನು ಎಲ್ಲೆಲ್ಲಿ ತೆಗೆದುಕೊಳ್ಳಬೇಕೆನ್ನುವುದನ್ನು ಇವರು ಪ್ಲಾನ್‌ನಲ್ಲಿ ಹೇಳಿದ್ದರು. ನಾನು ಆವತ್ತು ತಮಗೆ ಹೇಲಿದ್ದೆ.

ಬೆಂಗಳೂರು ರೋಡ್‌ನಲ್ಲಿ 111 ಕಿ.ಲೋ. ಮೀಟರ್‌ಗೆ ಎಷ್ಟು ಬೇಕು, ಅಲ್ಲಿಂದ ಆಚೆ ಎಷ್ಟು ಬೇಕು ಅದನ್ನು ಹೇಳುತ್ತೇನೆ. ಕೊನ್ನಪ್ಪನ ಅಗ್ರಹಾರದಿಂದ ಹಿಡಿದು ಸೀಗೆಹಳ್ಳಿ ವರೆಗೆ 68 ಊರುಗಳು ಇದ್ದು, ಒಂದನೆಯದು, ದೊಡ್ಡ ತೂಗೂರು Land required for roads 3 Acres 38 Guntas, excess land acquired for real estate 136.39 Acres, ಬೆರಟನ ಅಗ್ರಹಾರ 7 ಎಕರೆ 17 ಗುಂಟೆ, 10 ಎಕರೆ 58 ಗುಂಟೆ, ಚಿಕ್ಕತೋಗೂರು 19.18 ಎಕರೆಗಳು, 172.19 ಎಕರೆಗಳು, ಬೇಗುನಿ ಅಲ್ಲಿ ಜಾಸ್ತಿ ಬೇಕಿತ್ತು ಇವರು ಕಮ್ಮಿ ಮಾಡುತ್ತಾರೆ, ಏಳೇನಹಳ್ಳಿ 19.1820 ಕಮ್ಮನಹಳ್ಳಿ ಹೀಗೆ ಪಿಲಿಗಾನ ಹಳ್ಳಿ ಎಂದು ಚಿಕ್ಕ ಊರು ಇಲ್ಲಿ 14.33 ಎಕರೆ ರೋಡ್‌ಗೆ ಲ್ಯಾಂಡ್ acquire ಆಗಿದ್ದರೆ acquisition is 452 acres. ಇದನ್ನು ನಾನು ಹೇಳಿರುವುದು ಅಲ್ಲ ಕಂಪನಿಯವನು ಹೇಳಿರುವುದು. This was the Statement made by the Company 946 Acres 24 Guntas. Acquisition proposed or acquired land 6089 Acres 14 Guntas. ಇದನ್ನು ಸನ್ಮಾನ್ಯ ಘನತೆವೆತ್ತ ಈ ರಾಷ್ಟ್ರದ ಮಾಜಿ ಪ್ರಧಾನಿಗಳು 'ನೋಡಿ, ಇಂಥ ಒಂದು ದೊಡ್ಡ ಹಗರಣ ಬೆಂಗಳೂರಿನಲ್ಲಿ ನಡೆಯುತ್ತಿದೆ ಎಂದು Governor ಗೆ ಕೊಟ್ಟಿರುವ ಮಾಹಿತಿ ಇದು. ಇದು ಸಣ್ಣ instance. ನಾವು 68 ಹಳ್ಳಿಯಲ್ಲಿ 900 ಎಕರೆ ಜಮೀನನ್ನು acquire ಮಾಡುವ ಕಡೆ 6089 ಎಕರೆ 14 ಗುಂಟೆ ಇವತ್ತು acquire ಮಾಡಿದ್ದೇವೆ. what for? ಏತಕ್ಕಾಗಿ ಮಾಡಿದಿರಿ? ನೀವು ಅವರ ಜೊತೆ framework agreement ಅನ್ನು ಏಕೆ ಮಾಡಿಕೊಂಡಿರಿ? ನಮ್ಮದು liability ಇಲ್ಲ ಎಂದು ಅಲ್ಲಿ ಏಕೆ ಹೇಳಿದಿರಿ? ನೀವು ಹೇಳದೇ ಹೋಗಿದರಿಂದ ಇನ್ನೂ ಒಂದು ಕಂಪನಿ ಬಂದು ಆವತ್ತು Contract ಗೆ sign ಹಾಕಿರುತ್ತಿದ್ದರು. ಈ ಕಂಪನಿಯವರನ್ನೇ ಏಕೆ ಕರೆಯಬೇಕಾಗಿತ್ತು? ನಾನು ಸಂವೃದ್ಧಿಯಾಗಿದ್ದೇನೆ, ನೀವು ನನಗೆ ಏನೂ ಕೊಡಬೇಡಿ ನಾನು ರಸ್ತೆ ಮಾಡುತ್ತೇನೆಂದು ಹೇಳಿ ಬಂದ ಕಂಪನಿಗೆ ನೀವು concessions ಕೊಟ್ಟಿರುವುದು ಇದು ತಾನೆ? ಎರಡನೆಯದು, ಎಂಥ ದುರಂತಗಳಿಗೆ ಹೋಗಿದ್ದೇವೆ ಎಂದರೆ, ನಾವು Government Land ಅನ್ನು ಅವರಿಗೆ ಏನು ಕೊಟ್ಟಿದ್ದೇವೆ. complete registration cost ಅನ್ನು stamp duty ಅನ್ನು waive ಮಾಡಿದ್ದೇವೆ. Service charge ಅನ್ನು conversion ಅನ್ನು waive ಮಾಡಿದ್ದೇವೆ. which amounts to around Rs. 120 crore to 160 crore. ಏತಕ್ಕೆ ಈ favour ಮಾಡುತ್ತೀರಿ? Rs. 152 crore precisely. ಏತಕ್ಕೆ ಇಷ್ಟು favour ಅನ್ನು ಆ ಕಂಪನಿಗೆ ಮಾಡುತ್ತಿದ್ದೀರಿ? ಗೊತ್ತಿಲ್ಲ. ಅಷ್ಟೇ ಅಲ್ಲ, ಆ ಕಂಪನಿಯವನು ಬೇರೆಯವರಿಗೆ ಏನು ಜಮೀನು ಕೊಡುತ್ತಾನೆ ಅದಕ್ಕೂ waive ಕೊಟ್ಟಿದ್ದೀರಿ. ಅಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಂಥ ಮೀಟಿಂಗ್‌ನಲ್ಲಿ ಒಬ್ಬ ಅಧಿಕಾರಿಗಳು ಕುಳಿತುಕೊಂಡು ಹೇಳುತ್ತಾರೆ. ಅದೇನೆಂದರೆ, `This has to be brought before the Legislature. This is against the Act provision.' ಮುಖ್ಯ ಮಂತ್ರಿಗಳು ಹೇಳುತ್ತಾರೆ `Do this.' He directs the officer to clear the problem. Even after the Secretary says, `We have no powers and this has to be brought before the Legislature.' ಶಾಸನ ಸಭೆ ಮುಂದೆ ತರಬೇಕೆಂದು ಅವರು ಹೇಳಿದರೂ ಕೂಡ direct ಮಾಡಿ ಈ ರಾಜ್ಯದ ಮುಖ್ಯಮಂತ್ರಿಗಳು ಅವರಿಗೆ clearance ಕೊಡಿಸುತ್ತಾರೆ. ಏಕೆ ಸ್ವಾಮಿ? ಹಾಗಾದರೆ ಈ ಶಾಸಕಾಂಗದ ಹಕ್ಕಿಗೆ ಚ್ಯುತಿ ಆಗಲಿಲ್ಲವೇ? ನಮ್ಮ ಹಕ್ಕಿಗೆ ಚ್ಯುತಿ ಆಗಲಿಲ್ಲವೇ? ಇಂಥಿಂಥ concessions ಅನ್ನು ಕೊಡಲಿಕ್ಕೆ

ಶಾಸನದಲ್ಲಿ ಅವಕಾಶ ಇಲ್ಲ ಎಂದಾಗಲೂ ಕೊಡುತ್ತೀರಿ ಎಂದರ ಏನದರರ್ಥ? Was it brought before this House and ratified at least? ನನಗೆ ಗೊತ್ತಿಲ್ಲ. ನಾನು ಆವಾಗ ಎಂ.ಎಲ್.ಎ. ಆಗಿರಲಿಲ್ಲ. ಶ್ರೀ ರಮೇಶ್ ಕುಮಾರ್ ರವರ ಇವತ್ತು ಲಾಯರ್ ಆಗಿ ಬಂದಿದ್ದಾರೆ. ಅವರೂ ಕೂಡ ಆವತ್ತು ಎಂ.ಎಲ್.ಎ. ಆಗಿರಲಿಲ್ಲ.

Sri K.R. Ramesh Kumar : The most interesting thing is, I am not a student of law, leave alone being a Lawyer.

Sri J.C. Madhu Swamy : I know you have been appointed this day as Lawyer. ಆಗಬಹುದು. ಅವರಿಷ್ಟ ಅದು. ನಾನು ಕೇಳುವುದೇನೆಂದರೆ, even against the advice of the officer, a statutorily placed officer, a Secretary ನೀವು ಏಕೆ ಈ ಕಂಪನಿಗೆ concession ಕೊಡುತ್ತೀರಿ? ಗೊತ್ತಿಲ್ಲ. Why this favouritism? ಇದನ್ನು ನೀವು ಮಾಡಿಕೊಂಡು ಬಂದಿರಿ. ನೀವು ಬೇಕಾದಾಗ ಹೀಗೆ ಮಾಡುತ್ತೀರಿ. ರಾಜ್ಯದಲ್ಲಿ ಡೀನೋಟಿಫಿಕೇಷನ್ ದುರಂತ ನಡೆಯುತ್ತಿದೆ. ಆವತ್ತು ಬಹುಶಃ ತಾವು ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷರು. ತಮಗೆ ನೆನಪಿರಬೇಕು. ಸನ್ಮಾನ್ಯ ರಮೇಶ್‌ಕುಮಾರ್‌ರವರು ಬಿಡಿಎ ಲ್ಯಾಂಡ್ ಅನ್ನು ಡೀನೋಟಿಫೈ ಮಾಡುವಂಥ ಪ್ರಾವಿಷನ್ ತಂದ ದಿವಸ ನಾನೊಬ್ಬನೇ ಒಬ್ಬ ಈ ಸಭೆಯಲ್ಲಿ ವಿರೋಧ ಮಾಡಿದ್ದು. ನಾನು ಅವತ್ತು ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಓದಿದ್ದೆ, When the land is acquired for a specific purpose, it will not lie in the mouth of the acquiring Authority to reconvey the land. ತಾವು ಒಂದು ಹೆಜ್ಜೆ ಮುಂದೆ ಹೋಗಿ,ಜಿಪಿಎ ಹೋಲ್ಡರ್‌ಗೆ ಕೂಡ ರೀ-ಕನ್‌ವೇ ಮಾಡಬಹುದೆಂದು ಮಾಡಿದ್ದೀರಿ. ಟೈಟಲ್ ಇಲ್ಲದವನು ಕೂಡ ಯಾರದೋ ಜಮೀನನ್ನು ನನ್ನದೆಂದು ವಾಪಸ್ಸು ತೆಗೆದುಕೊಳ್ಳುವ, ಶಾಸನವನ್ನು ಇಲ್ಲಿ ಮಾಡಿದ್ದೆವು. Are we not ashamed of that? ಇವತ್ತು ಅದರ ಕೆಳಗೆ ಇದೆಲ್ಲಾ 'ಆಗುತ್ತಿವೆ. ಬೆಂಗಳೂರು ಸಿಟಿಯಲ್ಲಿ ಯಾರ ಜಮೀನನ್ನಾದರೂ ತೆಗೆದುಕೊಳ್ಳಬಹುದು. ಯಾರದನ್ನಾದರೂ ರೀ-ಕನ್‌ವೇ ಮಾಡಬಹುದು. ಮಂತ್ರಿಮಂಡಲ ಲಾ ಡಿಪಾಟ್‌ಮೆಂಟ್‌ನವರನ್ನು ಕೇಳುತ್ತದೆ. ಲಾ ಸೆಕ್ರೆಟರಿಯವರಿಂದ ಒಪಿನಿಯನ್ ಸೀಕ್ ಮಾಡಿ, ಇದನ್ನು ವಾಪಸ್ಸು ಕೊಡಬೇಕಾದರೆ, Can this be treated as an agricultural land or can it be treated as an industrail land ಎಂದು ಕೇಳಿದೆ. ನಾನು ಓದಿದ್ದೇನೆ. ರೀ-ಕನ್‌ವೇ ಮಾಡಬೇಕಾದರೆ ನೀವು ರೇಟ್ ಫಿಕ್ಸ್ ಮಡಬೇಕಲ್ಲವೇ? 2 ಲಕ್ಷ ರೂಪಾಯಿಗೆ ನೀವು ಅಕ್ವಾಯರ್ ಮಾಡಿ, 25-30 ಲಕ್ಷ ರೂಪಾಯಿಗೆ, because this is treated as an industrail land. For a specific purpose it was acquired and all developments have been done. ನೀವು ಹೇಳಬೇಕಲ್ಲವೇ? ಅದೇ ಮಾಲೀಕನಿಗೆ ಕೊಡುವುದಕ್ಕೂ ನೀವು ರೇಟ್ ಜಾಸ್ತಿ ಮಾಡಿ ಕೊಟ್ಟಿದ್ದೀರಿ. ಈ ಮಧ್ಯ ಏನು ಮಾಡಿದ್ದಾರೆಂದರೆ ಯಾರೋ ದಲಾಲರನ್ನು ಇಟ್ಟುಕೊಳ್ಳುವುದು. ಅವನು ಹೋಗಿ, 2 ಲಕ್ಷ ರೂಪಾಯಿ ನಿನ್ನ ಜಮೀನಿಗೆ ಬರುತ್ತದೆ, ನನ್ನ ಮಾತು ಕೇಳು, 6 ಲಕ್ಷ ರೂಪಾಯಿ ತೆಗೆದುಕೊಂಡು ನನಗೆ ಬಿಟ್ಟುಬಿಡು ಎಂದು ಹೇಳುವುದು. ಒಂದು ಕಡೆ ಸರ್ಕಾರ, ಇನ್ನೊಂದು ಕಡೆ ಈ ಕಂಪನಿಯವರು ವಾಲಂಟರಿಯಾಗಿ ಮನೆ ಮನೆಗೆ ಹೋಗಿದ್ದಾರೆ. I will give the names of those farmers. ಯಾರು ಯಾರನ್ನು ಭೇಟಿ ಮಾಡಿದ್ದಾರೆಂಬ ಮಾಹಿತಿ ಕೊಡುತ್ತೇನೆ. ಅಲ್ಲಿ 6-7 ಲಕ್ಷ ರೂಪಾಯಿ ಇವರು

ಡೈರೆಕ್ಟ್ ಆಗಿ ವ್ಯಾಪಾರ ಮಾಡಿದ್ದಾರೆ. Then, why did you acquire lands for the company? ಅವರೇ ಹೋಗಿ ನೆಗೋಷಿಯೇಟ್ ಮಾಡುವಂಥ ಸ್ಥಿತಿಯಲ್ಲಿ ಲ್ಯಾಂಡ್ ಅನ್ನು ಅಕ್ವಾಯರ್ ಮಾಡಿಕೊಟ್ಟಿರಿ. ನಾನು ಡೀ–ನೋಟಿಫಿಕೇಷನ್ ವಿಷಯಕ್ಕೆ ಬಂದರೆ, ಯಾರು ಎಂಪವರ್ ಮಾಡಿದರು? ಏಕೆ ಮಾಡಿದರು? ನಮಗೆ ಗೊತ್ತಿಲ್ಲ. ಅದು ಡೀನೋಟಿಫಿಕೇಷನ್ ಇಷ್ಯೂ. ಇದೊಂದು ಮೋಸ. ಒಂದು ವ್ಯವಸ್ಥೆಯಲ್ಲಿ ನಾವು ಇಂಥ ಕೆಲಸಮಾಡಬೇಕೆಂದು ಹೇಳಿ, ಸರ್ಕಾರದಲ್ಲಿ ನಿರ್ಧಾರವಾಗಿ ಆ ಕೆಲಸಕ್ಕೆ 4 ಲೈನ್, 6 ಲೈನ್ ರೋಡ್ ಬೇಕೆ; ಎಕ್ಸ್‌ಟೆನ್‌ಷನ್ ಮಾಡುತ್ತೇವೆ, ಅದನ್ನು ಗ್ರೀನ್ ಬೆಲ್ಟ್ ಎಂದು ಹೇಳುತ್ತೀರಾ? ನಿಮಗೆ ಎಷ್ಟುದ್ದ'ದ ರೋಡ್ ಬೇಕು, ಅಷ್ಟಕ್ಕೆ ನೀವು ಅಕ್ವಾಯರ್ ಮಾಡಬೇಕು. ಅಲೈನ್‌ಮೆಂಟ್ ಆದ ಮೇಲೆ, ಅಲೈನ್‌ಮೆಂಟ್ ಮಾಡಬೇಕಾದರೆ ಪ್ರಿ–ಕಂಡೀಷನ್ಸ್ ಅನ್ನು ತಾವು ನೋಡಬೇಕು. ಅದು ಯಾವ್ಯಾವ ಜಮೀನಿನ ಮೇಲೆ ಹೋಗಬಾರದು, ಮನೆ ಕಟ್ಟಿರುವ ಕಡೆ ಹೋಗಬಾರದು, ಇಂಡಸ್ಟ್ರಿಯಲ್ ಎಸ್ಟಾಬ್ಲಿಶ್‌ಮೆಂಟ್ ಇದ್ದರೆ ಅಲ್ಲಿ ಹೋಗಬಾರದು, ಯಾವುದೇ ಧಾರ್ಮಿಕ ಸ್ಥಳಗಳು ಇದ್ದರೆ, ಅಲ್ಲಿ ಹೋಗಬಾರದು ಇದೆಲ್ಲಾ ನೋಡಿ, ನೀವು ಅಕ್ವಾಯರ್ ಮಾಡಿದ ಮೇಲೆ ಡೀನೋಟಿಫೈ ಮಾಡುವ ಪರಿಸ್ಥಿತಿ ಏಕೆ ಉದ್ಭವವಾಗುತ್ತದೆ? ಇದು ಅರ್ಥವಾಗಬೇಕು. ಒಂದು ಜಮೀನನ್ನು ನೀವು ಅಕ್ವಾಯರ್ ಮಾಡಬೇಕಾದರೆ, you acquire a land for a specific purpose 10 ಅಡಿ 10 ಅಥವಾ 10 ಮೀಟರ್ ಅತವಾ 100 ಮೀಟರ್‌ನಲ್ಲಿ ಒಂದು ರೋಡ್ ಹೋದರೆ, ಇಡೀ ಸರ್ವೆ ನಂಬರ್ ಅನ್ನು ಅಕ್ವಾಯರ್ ಮಾಡುವುದು, ಹೇಗೂ ಎಕ್ಸ್‌ಪ್ರೆಸ್ ರೋಡ್ ಆಗುತ್ತದೆ, ನಾಳೆ ಆ ಜಾಗ ಕಮರ್ಷಿಯಲ್ ಆಗುತ್ತದೆಂದು ಹೇಳಿ, ಎಷ್ಟು ಬೇಕೋ ಅಷ್ಟು ಹಣಕ್ಕೆ ವ್ಯಾಪಾರ ಮಾಡಿಕೊಂಡು, ನೀವು ಜಾಗಗಳನ್ನು ಡೀನೋಟಿಫೈ ಮಾಡಿದ್ದೀರಿ ಅಂದರೆ ಇದಕ್ಕೇನು ಅರ್ಥ? ಈ ಡೀನೋಟಿಫಿಕೇಷನ್ ಮಾಡಬಾರದೆಂದು ನಾನು ಅವತ್ತು ಹೇಳಿದ್ದೆ. Now, I can take the officer's name. Mr. Negi, the then Secretary has taken a strong objection. ಇಲ್ಲ, ನೀವು ಆ ಡೀನೋಟಿಫೈ ಮಾಡುತ್ತಿರುವುದು ತಪ್ಪು, ಇದು ನಮ್ಮ ಅಧಿಕಾರ ವ್ಯಪ್ತಿಯಲ್ಲಿ ಬರುವುದಿಲ್ಲ, ನಾವು ಹೈಕೋರ್ಟ್ ಆಫ್ ಕರ್ನಾಟಕ ಮುಂದೆ ಹೇಳಿದ್ದೇವೆ, ಕೋರ್ಟ್ ಮೆ ಪಾಸ್ ಸ್ಟ್ರಿಕ್ಚರ್ಸ್, ದಯವಿಟ್ಟು ಆ ಪ್ರಾಕ್ಟೀಸ್‌ಗೆ ಇತಶ್ರೀ ಹಾಡಿ ಎಂದು ಹೇಳಿದ್ದರು. ಅಧಿಕಾರಿಗಳು ರಿಟೈರ್ಡ್ ಆದ ಮೇಲೆ ಮಾತ್ರ ಮಾತನಾಡುತ್ತಾರೆ, ಸರ್ವಿಸ್‌ನಲ್ಲಿದ್ದಾಗ ಮಾತನಾಡುವುದಿಲ್ಲ, ಎಂದು ನಾವು ಬಹಳ ಮಾತನಾಡುತ್ತೇವೆ. ಅವರ ನೋಟ್‌ಗೆ ಯಾವ ಕವಡೆ ಕಿಮ್ಮತ್ತು ಇದೆಯೇ? ಏನು ಬೆಲೆ ಬಂತು? ಅವರು ಹೇಳಿದ ಮೇಲೂ, ನೀವು ಡೀನೋಟಿಫೈ ಮಾಡಿಲ್ಲವೇ ಆಲ್‌ರೈಟ್, ಯಾವ ರಿಪೋರ್ಟ್ ಮಾಡುತ್ತಾರೆ, ನಾವು ಡೀ ನೋಟಿಫೈ ಮಾಡುವುದು ತಪ್ಪೇ ಎಂದು ಆವತ್ತು ಇಂಡಸ್ಟ್ರಿ ಮಿನಿಸ್ಟರ್ ಕೇಳಿದರು. ಡೀನೋಟಿಫೈ ಮಾಡುವ ಮೊದಲೇ ಯಾವ್ಯಾವ ಅಧಿಕಾರಿಗಳನ್ನು ಕೇಳಿ, ಯಾರ್‍ಯಾರು ಆ ಪ್ರಾಜೆಕ್ಟ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆಂದು ಕೇಳಿ, ವೆದರ್ ಇಟ್ ಈಸ್ ರಿಕ್ವಾಯರ್ಡ್ ಆರ್ ನಾಟ್ ಎಂದು ಕೇಳಿ, ತಾವೇನಾದರೂ ಕನ್‌ಫರ್ಮ್ ಮಾಡಿಕೊಂಡು ಡೀನೋಟಿಫೈ ಮಾಡಿದ್ದೀರಾ? ಇಲ್ಲ. whims and fancies. ಅಂತೆ ನಡೆಯುತ್ತಿದೆ. Taking an application; making an order. ಅರ್ಜಿ ತೆಗೆದುಕೊಳ್ಳುವುದು, ಡೀನೋಟಿಫೈ ಮಾಡುವುದು. ಎಷ್ಟು? ಸರಿ ಸುಮಾರು ಆ ರೀತಿ 1200 ಎಕರೆ ಮಾಡಿದ್ದಾರೆ. ಐ ಸ್ಟ್ಯಾಂಡ್ ಕರೆಕ್ಟ್. 399.14 ಎಂದು ನಾಣು ಹೇಳಿದ್ದೆ. ಮೈ ಇನ್‌ಫರ್ಮೇಷನ್ ಗೋಸ್, 1000 ಚಿಲ್ಲರೆ ಎಕರೆಯನ್ನು ನೀವು ಬೆಂಗಳೂರಿನಲ್ಲಿ ಡೀನೋಟಿಫೈ ಮಾಡಿದ್ದೀರಿ. ಅಟ್ ವಾಟ್ ಕಾಸ್ಟ್? ಅದು 25–27 ಲಕ್ಷ ರೂಪಾಯಿ ಬೆಲೆ ಬಾಳುವ

ಜಾಗ. ಮಧ್ಯದಲ್ಲಿ ಎಷ್ಟು ವ್ಯವಹಾರ ನಡೆದಿರಬಹುದೆಂಬುದನ್ನು ನೀವು ಊಹೆ ಮಾಡಬಹುದು. I leave it to the imagination of the House. ಈ ಸಭೆಯಲ್ಲಿರುವವರೆಲ್ಲಾ ಅನುಭವಸ್ಥರು-ಬಂದಿದ್ದೀರಿ. ಎಷ್ಟು ವ್ಯವಹಾರ, ಎಷ್ಟು ದಂಧೆ ನಡೆಯಲಿಕ್ಕೆ ಇಲ್ಲಿ ಅವಕಾಶವಿದೆ ಎಂಬುದು ಅವರ ವ್ಯಾಪ್ತಿಗೆ ಬಿಟ್ಟಿದ್ದು. ಹಾಗಾದರೆ, ನಿಮ್ಮ ಹತ್ತಿರಕ್ಕೆ ಬಂದಿದ್ದೇನೆ, ಒಬ್ಬ ಮಂತ್ರಿಗೆ ಹತ್ತಿರದಲ್ಲಿದ್ದೇನೆ, ಮುಖ್ಯಮಂತ್ರಿಗೆ ಹತ್ತಿರದಲ್ಲಿದ್ದೇನೆ, ಎಂದು ಹೇಳಿ, ನಾನು ಹೋಗಿ ನಿಂತು, ಒಂದು ಅರ್ಜಿ ಕೊಟ್ಟು ಜಮೀನನ್ನು ಡೀನೋಟಿಫೈ ಮಾಡಿಸುವ ದಂಧೆ ಶುರು ಮಾಡಿದರೆ, ಅಕ್ವಿಜಿಷನ್ ಪ್ರೊಸೀಡಿಂಗ್ಸ್‌ಗೆ ಅರ್ಥ ಉಳಿಯುತ್ತದೆಯೇ? ಯಾರು ಬೇಕಾದರೂ ಡೀನೋಟಿಫೈ ಮಾಡಿಕೊಳ್ಳಬಹುದು. ಶಕ್ತಿ ಇಲ್ಲದವನ ಮೇಲೆ ತೆಗೆದುಕೊಂಡು ಹೋಗುವುದು. ಎಷ್ಟು ಸಲ ಅಲೈನ್‌ಮೆಂಟ್ ಮಾಡುವುದು? ನಾನು ತಮಗೆ ಆ ಕಾಪಿಗಳನ್ನು ಕಳುಹಿಸುತ್ತೇನೆ. ಅಲೈನ್‌ಮೆಂಟ್ ಎಷ್ಟು ಸಲ ಛೇಂಜ್ ಆಗಿದೆ? ಇಂಥ ಒಂದು ಪ್ರಮುಖವಾದ ಯೋಜನೆ ವಿಶ್ವದಲ್ಲಿ ಅದರದೆ ಒಂದು ಟರ್ನ್ ಆಗಬೇಕಾದ ಯೋಜನೆಯ ಅಲೈನ್‌ಮೆಂಟ್ ಅನ್ನು ಎಷ್ಟು ಸಲ ಛೇಂಜ್ ಮಾಡುತ್ತಾರೆ? ಅದಕ್ಕೆ ಹೈಕೋರ್ಟ್‌ನವರು ಹೇಳಿದ್ದು, ಸುರೇಶ್ ಹೆಬ್ಳೀಕರ್‌ರವರು ಒಂದು ಪಿ.ಐ.ಎಲ್. ಹಾಕಿದರು, ಹಾಗಾಗಿ, ನಾವು ಕೆಲವು ಕಡೆ ಅಲೈನ್‌ಮೆಂಟ್ ಛೇಂಜ್ ಮಾಡಿದೆವು ಎಂದು ಇವರು ಹೇಳುತ್ತಾರೆ. ಹೈಕೋರ್ಟ್ ಸ್ಪಷ್ಟವಾಗಿ ಹೇಳಿದೆ, ಅಲ್ಲಿಯೂ ಕೂಡ ಇಂಥ ಕೆರೆ ಬರುವ ಇನ್‌ಫ್ಲೋ ಆಫ್ ವಾಟರ್ ಅನ್ನು ನೀವು ರಿಸ್ಟ್ರಿಕ್ಟ್ ಮಾಡಕೂಡದು, ನೀವು ಹೈ ವೇಸ್ ಮಾಡಿಕೊಳ್ಳಿ, ಅಥವಾ ಸೂಪರ್ ಹೈ-ವೇಸ್ ಮಾಡಿಕೊಳ್ಳಿ, ಮೇಲುಗಡೆ ಕಟ್ಟಿಕೊಳ್ಳಿ; ನೀವು ಕಂಬ ಹಾಕಿ ನೀರಿಗೆ ಅಡ್ಡಿ ಇಲ್ಲದ ಹಾಗೆ, ಮೇಲಿನಿಂದ ರೋಡ್ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆ. 7–9 ಮೀಟರ್‌ಗೆ ರೋಡ್ ರೈಜ್ ಮಾಡಬೇಕಾಗಿದ್ದು, ಅಂಥ ಕಡೆ ನೀವು ಮೇಲಿನಿಂದ ಹೋಗಿರಿ ಎಂದು ಅವರು ಹೇಳಿದರೆ, ಇವರು ಅದನ್ನು ಬಿಟ್ಟು, ಇನ್ಯಾರದೋ ಜಮೀನಿನಲ್ಲಿ ಹಾಸಿ ಹೋದರು. ಅವತ್ತಿನ ಮಿನಿಸ್ಟರ್‌ಗೆ ಅವರು ಮನವಿ ಕೊಟ್ಟರು, 'Yes, yes. This has to be denotified.' ಎಂದು ಸಚಿವರು ಹೇಳಿದರು. ಇಲ್ಲ, I don't know what made him again, ಎಂದರು ಇಲ್ಲ ಇಲ್ಲ, you go in the same area ಅಂದರು ಆಮೇಲೆ ಅಷ್ಟು ಹೊತ್ತಿಗೆ ಎಲೆಕ್ಷನ್ ಬಂತು. ಲಾಯಲ್ಟಿ ಅವರದೇ ಛೇಂಜ್ ಆಯಿತೋ, ಇವರದೇ ಛೇಂಜ್ ಆಯಿತೋ, ಮತ್ತೆ ಇನ್ಯಾರದೋ ನನಗೆ ಗೊತ್ತಿಲ್ಲ. ಅವರು ಉತ್ತರ ಹೇಳುವಾಗ ಹೇಳುತ್ತಾರೆ. ನಿಮ್ಮಿಷ್ಟವೇ? ಹಾಗಾದರೆ, ಇವತ್ತು. ಡೀನೋಟಿಫೈ ಮಾಡುತ್ತೇವೆನ್ನುವುದು, ಇನ್ನು ಎರಡು ತಿಂಗಳಾದ ಮೇಲೆ ಅದನ್ನು ವಿತ್‌ಡ್ರಾ ಮಾಡುತ್ತೇನೆ, ಮಾಮೂಲಿನಂತೆ ಲ್ಯಾಂಡ್ ಅನ್ನು ನೀವು ಅಕ್ವಾಯರ್ ಮಾಡಿಕೊಂಡು ಹೋಗಿ ಎನ್ನುವುದು ನಿಮ್ಮಿಷ್ಟವೇ? ಹಾಗಾದರೆ, ಸರ್ಕಾರ ನಿಮ್ಮ ತೆವಲಿಗೆ ನಡೆಯುತ್ತದೆಯೇ? ಇದಕ್ಕೇನೂ ಕಾನೂನಿನಲ್ಲವೇ? ಅಥವಾ ಸಂವಿಧಾನ ಇಲ್ಲವೇ? ಇಲ್ಲಿರುವ ಒಬ್ಬ ಪ್ರಜೆಗೆ ರಕ್ಷಣೆ ಇಲ್ಲವೇ? ಸರ್ಕಾರ ನಡೆಸುವವರು ಹೇಗೆ ಬೇಕಾದರೂ ಮಾಡಬಹುದೆ? ಅದು ನಿಮ್ಮಿಷ್ಟವೇ? ನಮ್ಮಿಷ್ಟ ಎಂದು ಸರ್ಕಾರ ಹಾಗೇ ನಡೆದಿದೆ. ಅವರ ಇಷ್ಟಕ್ಕೆ ಸರ್ಕಾರ ನಡೆದಿದೆ. ಇಲ್ಲಿ ಕಾನೂನಿಗೆ ರಕ್ಷಣೆ ಇಲ್ಲ, ಕೋರ್ಟ್ ಆದೇಶಕ್ಕೆ ಮನ್ನಣೆ ಇಲ್ಲ, ಯಾರಾದರೊಬ್ಬರು ಗೌರವಸ್ಥ ಅಧಿಕಾರಿ ಹೇಳುವ ಮಾತಿಗೆ, ಅವರು ಬರೆಯುವ ಟಿಪ್ಪಣಿಗೆ ಮೂರು ಕಾಸಿನ ಕವಡೆ ಕಿಮ್ಮತ್ತು ಇಲ್ಲಿ ಉಳಿದುಕೊಂಡಿಲ್ಲ. ಅವರಿಷ್ಟ. ಅವರು ಬಾರಿಸುವ ಮ್ಯೂಸಿಕ್‌ಗೆ ಡ್ಯಾನ್ಸ್ ಮಾಡುವ ಹಾಗಿದ್ದರೆ, ನೀವು ಬಹಳ ಒಳ್ಳೆಯ ಹುದ್ದೆಯಲ್ಲಿರಬಹುದು. ಇಲ್ಲದಿದ್ದರೆ, ಯು ಸಫರ್. ಹೋಗಿ ಅನುಭವಿಸಿ ಕೊಳ್ಳಿ ಇಂಥ ಸ್ಥಿತಿಯನ್ನು ಉದ್ದೇಶಪೂರ್ವಕವಾಗಿ personal

gainsಗಾಗಿ ಮಾಡಿದ್ದಾರೆಂದು ನಾನು ತಮ್ಮ ಮೂಲಕ ಈ ಸಭೆಯಲ್ಲಿ ಚಾರ್ಜ್ ಮಾಡುತ್ತಿದ್ದೇನೆ. This is purely because for personal gains. ರಾಜ್ಯದ ಹಿತಾಸಕ್ತಿಯದ್ದಲ್ಲ. ಎಕ್ಸ್‌ಪ್ರೆಸ್ ಹೈ–ವೇಗೆ ಏನು ಎಂ.ಓ.ಯು. ಸಹಿ ಮಾಡಬೇಕಾದರೆ ಇದ್ದ ಘನತೆ, ಗೌರವ ಇತ್ತೋ, ಕಾಲಕಾಲಕ್ಕೆ ಇವರಿಗೆ ಅರ್ಥವಾಗುತ್ತಾ ಬಂತು. ಎರಡು ಕಾರಣಕ್ಕೆ, ಇದೊಂದು ಶ್ರೀಮಂತ ದಂಧೆ ಎಂಬುದು ಇವರಿಗೆ ಅರ್ಥವಾಯಿತು. ಅಲ್ಲಿರುವ ಲ್ಯಾಂಡ್ ಅನ್ನನು ರೀಕನ್‌ವೇ ಮಾಡುವುದು. ಆ ರೋಡ್ ಆದ ಮೇಲೆ ಬದುವಿನಲ್ಲಿರುವ ಅಥವಾ ಪಕ್ಕದಲ್ಲಿರುವ ಲ್ಯಾಂಡ್ ವ್ಯಾಲ್ಯೂ ಎಷ್ಟಾಗುತ್ತದೆಂದು ತಾವು ತಿಳಿದುಕೊಳ್ಳಬೇಕು. ನ್ಯಾಷನಲ್ ಹೈವೇ ಪಾಸ್ ಆದರೆ, ಯಾರೂ ಕೇಳಲಾರದ ಜಮೀನುಗಳ ಬೆಲೆ ಗಗನಕ್ಕೆ ಹೋಗುತ್ತವೆ. ರೋಡ್ ಹೋದರೆ, ಹಳ್ಳಿ ಹಳ್ಳಿಗಳಲ್ಲಿ ಅವರಿಗೆ ಮಾರಾಟಕ್ಕೆ ಬೆಲೆ ಸಿಗುತ್ತದೆ. ಅದನ್ನೆಲ್ಲಾ ಮೊದಲೇ ಗಮನಿಸಿದರು. ಏಕೆಂದರೆ, ಆ ಲಾಭ ರೈತನಿಗೆ ಸಿಗಬಾರದಲ್ಲ. ಈ ಫೆರಿಫೆರಲ್ ರೋಡ್, ಲಿಂಕ್ ರೋಡ್. ಯಾರು ಸ್ವಾಮಿ ಪ್ಲಾನ್ ಮಾಡಿದ್ದು? ಹಾಗಾದರೆ, were they obliged for the C.D.P. of Bangalore? ಏಕಿದೆ ಆ ಸಂಸ್ಥೆ ಯಾರು ಅದರ ಅಧ್ಯಕ್ಷರು? ಇನ್ನೂ ಅವರು ಅಧ್ಯಕ್ಷರಾಗಿ ಏಕೆ ಇದ್ದಾರೆ ಎಂಬ ಮಾಹಿತಿ ನಮಗೆ ಬೇಕಲ್ಲವೆ? Comprehensive Development Plan of Bangalore, whether it is a statutory committee or not? ಕಾಂಪ್ರಹೆನ್ಸಿವ್ ಡೆವಲಮೆಂಟ್ ಪ್ಲಾನ್ ಆಫ್ ಬೆಂಗಳೂರು ಇಲ್ಲಿನ ಯೋಜನೆಗಳನ್ನು ಅಥವಾ ತೀರ್ಮಾನಗಳನ್ನು ತಿರುಚಲಿಕ್ಕೆ ನಿಮಗೆ ಏನು ಅಧಿಕಾರವಿತ್ತು? ಐ ಡಿಮಾಂಡ್. ನನಗೆ ಹೇಳಬೇಕು. Then why have you constituted such committees? ಬೆಂಗಳೂರಿಗೊಂದು ಕಾಂಪ್ರಹೆನ್ಸೀವ್ ಪ್ಲಾನ್ ಬೇಕೆಂದು ನೀವು ಹೇಳಿ, ಹೇಗೆ ಬೇಕೋ ಹಾಗೆ ನೋಟಿಫಿಕೇಷನ್ ಮಾಡಿ, ತಿರುಚಿಕೊಳ್ಳುವುದು. ನಾನು ಓದಿ ಹೇಳುತ್ತೇನೆ, ಅಧಿಕೃತ ಜ್ಞಾಪನಾ ಪತ್ರ ಇದರಲ್ಲಿ, "ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರ ಹಳ್ಳಿ ಹೋಬಳಿ, ಹೊಸಕೆರೆ ಹಳ್ಳಿ ಗ್ರಾಮದ ಸರ್ವೆ ನಂಬರ್ 7 ಪಿ 7ರಲ್ಲಿ ಒಟ್ಟು 2 ಎಕರೆ ವಿಸ್ತೀರ್ಣವು ಸಿಡಿಪಿಯಿಂದ ಪಾರ್ಕ್ ವಲಯದಲ್ಲಿದ್ದು, ಸದರಿ ಪ್ರದೇಶವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಿಂದ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾಗೆ ಸ್ಥಳೀಯ ಯೋಜನಾ ಪ್ರಾಧಿಕಾರ, ಬಎಂಗಳೂರಿಗೆ ವರ್ಗಾಯಿಸುವ" ಇದು ಸರ್ಕಾರಿ ಆದೇಶ. ಸಿಡಿಪಿಯಲ್ಲಿ, It is hundred per cent park zone. Are you empowered to change this? ಸಿಡಿಪಿಯಲ್ಲಿ ಪ್ಲಾನ್‌ನಲ್ಲಿ ಗ್ರೀನ್ ಬೆಲ್ಟ್, ಪಾರ್ಕ್ ಏರಿಯಾ, ಇಂಥಿಂಥ ಕಮರ್ಷಿಯಲ್ ಏರಿಯಾ ಎಂದು ಮಾಡಿರುವುದನ್ನು ನೀವು ಯವಾಗ ಬೇಕೋ, ಆಗ ಸುಮ್ಮನೆ ಕುಳಿತು ಜ್ಞಾಪನಾ ಪತ್ರವನ್ನು ಹೊರಡಿಸಿ, ಬದಲಾಯಿಸಿ ಮಾಡಿದರೆ, ಹೇಗೆ? ಇಂಥವು ಎಷ್ಟಾಗಿವೆ? I will give you hundreds of these copies. ನೋಡಿ, ದಿನಾಂಕ: 12.2.04ರ ಅನ್ವಯ ಅನುಮೋದನೆ ಗೊಂಡ ಸ್ಥೂಲಾಭಿವೃದ್ಧಿ ನಕ್ಷೆ ಪ್ರಕಾರ, ಪಾರ್ಕ್ ವಲಯದಿಂದ ವಾಸದ ವಲಯಕ್ಕೆ ಸರ್ಕಾರವು ಪರಿವರ್ತಿಸಿರುವುದರಿಂದ ವಾಸದ ಭೂ ಉಪಯೋಗಕ್ಕೆ ಭೂ ಪರಿವರ್ತನೆ ಮಂಜೂರಾತಿ ಮಾಡಿದೆ. Comprehensive Development Plan ಈ ಊರಿಗೆ ಏಕೆ ಬೇಕಾಗಿತ್ತು? ಈ ಊರಿಗೆ ಬಿಡಿಎ ಏಕೆ ಬೇಕು? ಈ ಊರಿಗೆ ಕಾರ್ಪೋರೇಷನ್ ಏಕೆ ಬೇಕಿತ್ತು? ಕೆಐಎಡಿಬಿ ಹೆಸರಿನಲ್ಲಿ ಎಲ್ಲವನ್ನೂ ಲೂಟಿ ಮಾಡಿಬಿಡಿ. ಇಲ್ಲಿಂದ ಅತ್ತಿಬೆಲೆವರೆಗೆ ಏನು ಇದೆ, ಯಾರಿಗೂ ಏನೂ ಉಳಿಸಬೇಡಿ, ಯಾರನ್ನು ಕೇಳಿ ನೀವು ಇದನ್ನು ಛೇಂಜ್ ಮಾಡಿದಿರಿ? ಯಾರನ್ನು ಕೇಳಿ ನೀವು ಛೇಂಜ್ ಮಾಡಿದಿರಿ? ಅವರಿಗೇನು ಸಂವಿಧಾನಾತ್ಮಕವಾದ ಅಧಿಕಾರ

ಇತ್ತು? CDP is not supposed to be changed. ಅದು 10 ವರ್ಷ, 20 ಬರ್ಷ, 100 ವರ್ಷಗಳ ಆಲೋಚನೆ ಇಟ್ಟುಕೊಂಡು ಒಂದೊಂದು ನಗರಕ್ಕೆ ನಾವು ಪ್ಲಾನ್ ಮಾಡಿರುವುದು. ಇಷ್ಟ ಬಂದಹಾಗೆ ನೀವು ಬದಲಾಯಿಸುವುದಕ್ಕೆ ಶುರು ಮಾಡಿಬಿಟ್ಟರೆ ಗತಿ ಏನು? ಮಾಡುವಾಗ ಏನು ಮಾಡಿದಿರಿ? ಮನೆಯಿದ್ದ ಭಾಗವನ್ನು ಒಡೆದು ಹಾಕಿದಿರಿ. ಯಾವ್ಯಾವ ಜಾಗ ಬೇಕೋ ಅಲ್ಲೆಲ್ಲೇ ನೀವು ಹಿಂದಿನಿಂದ ರಿಸರ್ವ್ ಮಾಡಿಕೊಂಡು ಬಂದಿದ್ದ ಜಮೀನುಗಳನ್ನು ಇವತ್ತು ಭೂ ಪರಿವರ್ತನೆ ಮಾಡಿಕೊಂಡಿದಿರಿ. ಏನು ಉಳಿದಿದೆ ಈ ಬೆಂಗಳೂರಿನಲ್ಲಿ? ನನಗೆ ಅರ್ಥವಾಗುತ್ತಿಲ್ಲ ಇನ್ನು ಏನು ಉಳಿಸಿದಿರಿ ಬೆಂಗಳೂರಿನಲ್ಲಿ? ನಿಮಗೆ ಬಿಡಿಎ ಅನ್ನು ಸೂಪರ್ ಸೀಡ್ ಮಾಡುವ ಅಧಿಕಾರವನ್ನು Karnataka Industrial Areas Development Board ಕೊಟ್ಟಿದಿರಿ. ಪಿಡಬ್ಲ್ಯೂಡಿ ಅಕ್ವಿಜಿಷನ್ ಅನ್ನು ಸೂಪರ್‌ಸೀಡ್ ಮಾಡುವ ಅಧಿಕಾರವನ್ನು ಕೊಟ್ಟರಿ. ನಿಮ್ಮ ಸಿಡಿಪಿ ಯನ್ನು ಸೂಪರ್‌ಸೀಡ್ ಮಾಡುವ ಅಧಿಕಾರವನ್ನು ನೀವು ತೆಗೆದುಕೊಂಡರಿ. ಹಾಗಾಗಿ ಬಿಡಿಎ ಮನೆಕಟ್ಟಲಿಕ್ಕೆ ತೆಗೆದುಕೊಂಡಿದ್ದ ಜಮೀನು ಇವತ್ತು ಇನ್‌ಫ್ರಾಸ್ಟ್ರರ್ ಕಾರಿಡಾರ್‌ಗೆ ವಹಿಸಿಕೊಡುತ್ತೀರಿ. ನಿಮ್ಮ ಇಷ್ಟ ಬಂದ ಹಾಗೆ, in the name of Karnataka Industrail Areas Development Board. ನೀವು ಇವತ್ತು ಬೆಂಗಳೂರನ್ನು ಕೊಂಡುಕೊಳ್ಳುತ್ತಿದ್ದೀರಿ ಮಾರುತ್ತಿದ್ದೀರಿ, ಮುಗಿಸಬೇಕಾ ಸಾರ್. ನೀವು ಗಡಿಯಾರ ನೋಡಿದ್ರಿ..

ಅಧ್ಯಕ್ಷರು : ಮುಗಿಸಬೇಕಾಗಿತ್ತು, ಅದಕ್ಕೆ ನಿಮಗೆ ಎಷ್ಟು ನಿಮಿಷ ಬೇಕು, ತಕ್ಷಣ ಮುಗಿಸುವುದಾದರೆ ಇನ್ನೊಂದು ಐದು ನಿಮಿಷ ಮಾಡೋಣ, ಇಲ್ಲದಿದ್ದರೆ ಊಟವಾದ ನಂತರ ಮಾಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ಇಲ್ಲ ಊಟವಾದ ನಂತರ ಮುಮದುವರಿಸುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು 3 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸಭೆ ಸರಲು ನಿಶ್ಚಯಿಸಿತು)

(ಸದನವು ಪುನಃ 3 ಗಂಟೆ 20 ನಿಮಿಷಕ್ಕೆ ಪ್ರಾರಂಭವಾಯಿತು)

(ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠದಲ್ಲಿದ್ದರು)

ನಿಯಮ 69 ಮೇರೆಗೆ ಚರ್ಚೆ

ವಿಷಯ : ಬೆಂಗಳೂರು ಸುತ್ತಮುತ್ತ ಭೂಸ್ವಾಧೀನ ಮಾಡುವುದರಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಬಗ್ಗೆ

(ಮುಂದುವರೆದ ಚರ್ಚೆ)

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ತಉವು ಪ್ರಾರಂಭ ಮಾಡಿ ಬೇಗ ಮುಗಿಸಿ, ಒಂದು ವಿಷಯ ತಮ್ಮ ಅವಗಾಹನೆಗಾಗಿ, ಕಾಂಗ್ರೆಸ್‌ನಿಂದ 8 ಜನ ಹೆಸರನ್ನು ಕೊಟ್ಟಿದ್ದಾರೆ. ಜೆಡಿಎಸ್ ದಿಂದ 4 ಜನ ಹೆಸರು ಕೊಟ್ಟಿದ್ದಾರೆ. ನಿಮ್ಮ ಜೊತೆ ಸಹಿ ಮಾಡಿರುವವರು ಸೇರಿ 7 ಜನ, ಇದರಲ್ಲಿ ಬಿಜೆಪಿ ಯವರು ಇದ್ದಾರೆ. ಇತರರು 3 ಜನ, ಇಷ್ಟೊಂದು ಜನ ಈ ಸಬ್ಜೆಕ್ಟ್ ಮೇಲೆ ಮಾತನಾಡಲು ಬಯಸಿದ್ದಾರೆ.

Sri J.C. Madhu Swamy (Chikkanayakanahally) : Acquisition of Land ಗೆ ಅವರು agreement ಮಾಡಿಕೊಂಡಿರುವ ಒಂದು clauseನ್ನು quote

ಮಾಡುತ್ತೇನೆ. GOK shall use its best effforts and cause its governmental instrumentalities to use their best effort to exercise it and their legal rights of feminine domain under the laws of India to acquire the acquired land. Right to acquirinf any acquired land, GOK will obtain from the company written conformation of its willingness to purchase such acquired land from GOK at the purchased price, whether in the form of cash or comparable aland required under the laws of India. The acquired land compensation, GOK shall offer to the purported owneres of the land, the rehabilitation package specifically worked out for this infrastructure corridor programme project with mutual consultation of the Consortium of the Revenue authorities in accordance with the applicable rules. ಸರ್ ಈ ಫ್ರೇಮ್ ವರ್ಕ್ ಅಗ್ರಿಮೆಂಟ್ ನಲ್ಲಿ ಇದು ಕ್ಲೀಯರ್ ಆಗಿದೆ. ಎರಡನೆಯದು 511(2) ನಲ್ಲಿ ಕ್ಲಾಸ್ ಆರ್ಟಿಕಲ್ಲಿ 5 ರಲ್ಲಿ ಇವರು ಹೇಳುತ್ತಾರೆ. The company will pay the aggregate acquired land compensation previously confirmed in writing for all acquired land acquired by it pursuant to this paragraph 511 in accordance with applicable Indian laws. ಮುಂದುವರೆದು ಇವರು ಹೇಳುತ್ತಾರೆ ಸರ್ Revenue land:- GOK will sell and transfer the revenue land to the company subject to the terms set forth below.

All revenue lands shall be transferred to the company. GOK sell such revenue land to the company for a price mutually agreed between GOK and the company in accordance with applicable Indian Laws. Revenue and compensation: The company will pay the revenue land compensation for the revenue land in accordance with the applicable Indian laws at the time of the sale of revenue land to the company. ಸರ್, ಇದು gross violation of the conditions of the agreement. ಇವರು ಸ್ಪಷ್ಟವಾಗಿ ಆ ಕಂಪನಿಯ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡು ಬಿಟ್ಟು ಈಗ ಅವರು ಲೀಸ್ ಮಾಡಿದ್ದಾರೆ. 10 ರೂಪಾಯಿಗಳಿಗೆ ಫೀ ಮಾಡಿದ್ದಾರೆ. ಬಡವರ ಜಮೀನನ್ನು ಗೌರ್ನಮೆಂಟ್ ಜಮೀನು ಎಂದು ಮಾಡಿ ಮತ್ತೆ ಈ ಅಗ್ರಿಮೆಂಟ್ ಎಲ್ಲಾ ಕಡೆ ಅವರೇ ಕ್ಲೀಯರ್ ಆಗಿ ಹೇಳುತ್ತಾರೆ. This is a framework agreement entered by the Government of Karnataka with the Nandi Infrastructure Corridor Company. 'ಎತಕ್ಕಾಗಿ ಹೀಗಾಯಿತೆಂಬುದು ನನಗೆ ಗೊತ್ತಾಗಬೇಕು ಸರ್. ಇದರಲ್ಲಿ ಏನಾಗಿದೆ ನಾವೇ ಮಾಡಿದ ಅಗ್ರಿಮೆಂಟ್‌ಗಳನ್ನು ಯಾರೋ ಒಬ್ಬ ಖಾಸಗಿ ವ್ಯಕ್ತಿ ಪರವಾಗಿ ಬದಲಾಯಿಸಿಕೊಂಡು ನಾವೇ ಜಮೀನನ್ನು ಅವನಿಗೆ ಉಚಿತವಾಗಿ ಕೊಡುವುದು ಒಂದು ಕಡೆ; ಬೇಕಾಬಿಟ್ಟಿ ನಾವೇ ಅಕ್ವೈರು ಮಾಡುವುದು ಅವನಿಗೆ ಕೊಡುತ್ತೇವೆನ್ನುವುದು ಮಾರಿಕೊಡುವುದು ಇನ್ನೊಂದು ಕಡೆಯಾಗಿದೆ. ನಾಣು ಇದರಲ್ಲಿ ಸಂಬಂಧಪಟ್ಟವರನ್ನು ಚಾರ್ಜ್

ಮಡುತ್ತೇನೆ. conforts letters ಇವರು ಏನೇನು ಕೊಡುತ್ತಾರೆ ಎಂಬುದು ತಾವು ಓದಬೇಕು. Letter of comforts given by the company. ನಾನು ಆಗಲೇ ತಮಗೆ ಹೇಳಿದ್ದೇನೆ. 100% exemption of stamp duty and registration charges. Proceedings of the meeting held on 22nd September, 2000 for review of pending issues of Bangalore-Mysore infrastructure corridor project by the Chief Minister of Karnataka. Present: Hon'ble Chief Minister, Hon'ble Minister for Revenue, Hon'ble Minister for Public Works, Additional Chief Secretary, so and so. ಇಲ್ಲಿ ತಾವು ಗಮನಿಸಬೇಕು. It was clarified that an estimated Rs. 152 crores would be in the income to the government when the sites are sold by the NICE. 'Site are sold by the NICE'. ಸೈಟುಗಳನ್ನು ಅವರು ಮಾರುತ್ತಾರೆ ಆಗ ನಮಗೆ 152 ಕೋಟಿ ರೂಪಾಯಿ ಬರುತ್ತದೆಂದು in front of the Chief Minister, it was discussed . After detailed deliberations, it was agreed that 100% exemption of stamp duty and registration charges is to be extended to BMICP. Necessary orders may be issued in this regard by the end of September, 2000. Action: The Principal Secretary to the Government, Revenue Department. ಏನು ನಡೆದಿದೆ ಸರ್; ಇದರಲ್ಲಿ ನಾನು ಪಕ್ಷವೆಂದು ತಿಳಿದುಕೊಂಡು ನಾನು ಮಾತನಾಡುತ್ತಿಲ್ಲ. This is a meeting. ಅದಕ್ಕಾಗಿ ನನಗೆ ಆಗಲೇ ಇದನ್ನು ನೋಡುವುದಕ್ಕಾಗಲಿಲ್ಲ. ಮುಂದುವರೆದು ಏನು ಹೇಳುತ್ತಾರೆಂದರೆ, The Principal Secretary, U.D.D. explained further and assured that this subject will be palced before the next Assembly Session for necessary changes, Clearances: Since this will take some more time, the company requested an assurance from the government for issue of a letter of comfort that the government would take up the responsibility to expempt the levies and cesses. It was deceded in the meeting that the letter of comfort may be issued to the company assuring that the government would exempt levies and other cesses payable under Section 18 of the KTCP Act-1961 to the BMICP to facilitate early financial closure. The Principal Secretary, Urban Development Department was directed to issue the letter of comfort. ಅಸೆಂಬ್ಲಿ ಮುಂದೆ ತೆಗೆದುಕೊಂಡು ಹೋಗಬೇಕೆಂದು ಯಾವ ಪ್ರಿನ್ಸಿಪಲ್ ಸ್ಕ್ರೆಟರಿ ಹೇಳುತ್ತಾನೆ. He was directed to issue the letter of comfort exempting all the levies. This meeting was chaired by the then Hon'ble Chief Minister of Karnataka on 22nd Sepetember, 2000. ಸರ್, ಇದು ಏನಾಗಿದೆ. Fixation of price for government land to be sold by the company. In the framework agreement entered into between the government and NICE,

it is indicated that the government land to be utilized for commercial development is to sold to the company at a conccession rate. The A.Cs explain that. ಇದು ಎಲ್ಲಾ ಆದಮೇಲೆ the finance department suggested the price of 10% above the guideline value. After reconsideration of the proposal, the Revenue Department suggested to fix at market value whereas the Finance department suggested to fix market value at prvailing rate at the time of taking possession of the Government land by the company. ಈ ರಾಜ್ಯದಲ್ಲಿ ಆಫೀಸರ್ಸ್ ಕೆಲಸ ಮಾಡಿದ್ದಾರೆ. ನೀವು ಅವರನ್ನ ಉಳಿದುಕೊಳ್ಳುವುದಕ್ಕೆ ಬಿಟ್ಟಿದ್ದೀರಾ? were they not present? Were they not right? ಅವರೆಲ್ಲಾ ನಿಮಗೆ ಹೇಳೀಕೊಂಡು ಬರುತ್ತಾರೆ ಅಡ್ವೈಸ್ ಮಾಡುತ್ತಾರೆ ದಯವಿಟ್ಟು ಮಾಡಬೇಡಿ ಹೀಗೆ ಮಾಡಿ ಎಂದು. At the time of project formation, the availability of government land was indicated as 7,506 acres, but actually 4436 acres of the government land was handed over to the company through KIADB. The shortfall is due to land grants, unauthorised cultivation, encroachment, etc. Due to this, the company is not only have to incur additional cost. ಇದೆಲ್ಲಾ ಒಂದು ದುರಂತ. Hon'ble Chief Minister ಅವರ ಕೆಳಗಡೆ ನಡೆದಂಥ ಸಭೆ ಇದು. Chief Minister of Karnatak, the then, No.1 ಕೊನೆಗೆ ಏನು ಇದೆ ಎಂದರೆ, the Hon'ble Chief Minister stated that with all the clearance given trom the government within the end of this month there will be no more hindrances and he directed that the company should start the civil works of BMICP in the first week of November 2000, to which the representatives of NICEL agreed. Is this implemented? ಜಮೀನನ್ನು ಕೊಡುವುದಕ್ಕೆ ನೀವು ಆದೇಶ ಕೊಟ್ಟು ಎಲ್ಲವನ್ನೂ ಮಾಡಿದ್ದೀರಲ್ಲಾ. ನವೆಂಬರ್ 2000 ರೊಳಗೆ ಈ ವರ್ಕ್ ಸ್ಟಾರ್ಟ್ ಮಾಡಿರಬೇಕೆಂದು ನಿಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ನಾವು 2004ನೇ ನವೆಂಬರ್ ಹತ್ತಿರಕ್ಕೆ ಬಂದು ಬಿಟ್ಟಿದ್ದೇವೆ. Even after four years, ಏನಾಗಿದೆ? ಸರ್ ಮುಂದಿನ ವರ್ಷಕ್ಕೆ ಈ ಪ್ರಾಜೆಕ್ಟ್ ಕಂಪ್ಲೀಟ್ ಆಗಬೇಕಾಗಿದೆ. according to their MOU. ಆವತ್ತು ಸರ್ಕಾರ ಸತ್ತು ಹೋಗಿತ್ತೇ? ಹಾಗಾದರೆ 2000 ದಿಂದ 2004 ವರೆಗೆ ಸರ್ಕಾರ ನಡೆಯಲಿಲ್ಲವೆ, ಅದೇ ಗೌರ್ನಮೆಂಟ್ ಇತ್ತಲ್ಲವೆ? Did they question them? ಏತಕ್ಕಾಗಿ ನೀವು ಕೆಲಸ ಮಾಡಿಲ್ಲವೆಂದು ಯಾರಾದರೂ ಕೇಳಿದ್ದೀರಾ? ಏಕೆ ಕೇಳಲಿಲ್ಲ? You had some personal gains with them. You had some interest in that. You had some encumbrances with them. There is no doubt. ಇಷ್ಟೊಂದು ರಿಯಾಯಿತಿಯನ್ನು ನೀವು ಕೊಟ್ಟಿರಿ, against law, against KTCP Act, ನೀವು ಇವತ್ತು ಸರ್ಕಾರವನ್ನು ನಡೆಸುತ್ತೀರಿ, ಅವನನ್ನು ಏಕೆ ಕೆಲಸ ಶುರು ಮಾಡಿಲ್ಲವೆಂದು ಕೇಳುತ್ತೀರಾ? ಸರ್, ಹೈಕೋರ್ಟ್ ಏನು ಹೇಳುತ್ತದೆಂದರೆ ಅವರು ಕೆಲಸ ಶುರು ಮಾಡದಿದ್ದರೆ ಏನಾಗುತ್ತದೆಂದು ಜಡ್ಜ್ ಅವರು ಹೇಳುತ್ತಾರೆ. The entire burden will

fall on the KIADB, which has acquired land. ಹೈಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಈ ಕೆಲಸ ಏನಾದರೂ if they turn out, if they won't start work, the entire burden of this will fall on KIADB. -Caution. ಎಲ್ಲಿದೆ ನಿಮ್ಮ ಕೆಐಎಡಿಬಿನಲ್ಲಿ ಇಷ್ಟೊಂದು ಬರ್ಡನ್ ಹೊತ್ತುಕೊಳ್ಳುವುದಕ್ಕೆ ಕೆಐಎಡಿಬಿ ಯನ್ನು ಉಪಯೋಗಿಸಿಕೊಂಡು ದುಡ್ಡು ಮಾಡಿಕೊಂಡಿರುವವರು ತಂದು ಇದನ್ನು ಕಟ್ಟುತ್ತಾರೆಯೇ? Where will you be? ಈ ರಾಜ್ಯದ Karnataka Industrial Area Development Board. ಎಲ್ಲಿಗೆ ಹೋಗಿ ನಿಲ್ಲುತ್ತದೆ? ಇದರ ಬಗ್ಗೆ ಹೈಕೋರ್ಟ್ ಮೊದಲೇ ಹೇಳಿ ಬಿಟ್ಟಿದೆ. The whole burden will fall on KIADB. ಈ ಪ್ರಾಜೆಕ್ಟ್‌ನ್ನು ನೀವು ಆರಂಭವೇ ಮಾಡಿಲ್ಲ ಈ ಪ್ರಾಜೆಕ್ಟ್‌ನ್ನು ನೀವು ಆರಂಭ ಮಾಡಬೇಕಾದರೆ ಏನು principle adopt, ಮಾಡಿದ್ದೀರಿ ಅದು ಇವತ್ತು ನಿಮ್ಮ ಮುಂದೆ ಉಳಿದುಕೊಮಡಿಲ್ಲ. ಸರ್, ಇದಕ್ಕೆ ಏನು ಕಾರಣ? ನಾನು ತಮಗೆ ಹೇಳಬೇಕಾಗುತ್ತದೆ. ಇದರ ಜೊತೆಗೆ ಎಷ್ಟು ಸಲ ಅಂದಿನ Hon'ble Industries Minister de-notification ಮಾಡಿರುವುದು? ಏಕೆ ಸರ್, ಈ ರಾಜ್ಯದಲ್ಲಿ ನಾನು ತಮಗೆ ಇದರ ಬಗ್ಗೆ ಆಗಲೇ ಕೇಳಿದೆ ಒಂದು ಲ್ಯಾಂಡ್‌ನ್ನು ಅಕ್ವೈರ್ ಮಾಡಬೇಕೆಂದು ನಾನು ನಿಮಗೆ ಪ್ರಪೋಸಲ್‌ನ್ನು ಕೊಡಬೇಕಾದರೆ. ನಮ್ಮ ಹತ್ತಿರ ಅಲೈನ್‌ಮೆಂಟ್ ಇರಬೇಕು ಒಂದು ಸರ್ವೆ ರೆಕಾರ್ಡ್ ಇರಬೇಕು. ಯಾವ ಕೆಟಗರಿ ಆಫ್ ಲ್ಯಾಂಡ್‌ನ್ನು ಅಕ್ವೈರ್ ಮಾಡುತ್ತೇವೆಂದು ವರದಿ ಇರಬೇಕು; ಆಕಸ್ಮಾತ್ತಾಗಿ ಮಾಡಲಾರದಂಥ ಜಮೀನು ಇದ್ದರೆ ನಾವು ಅದನ್ನು ಬಿಟ್ಟುಬಿಡಬೇಕು. ಸರ್ ಎಲ್ಲವನ್ನೂ ಇವರು ಡೀ–ನೋಟಿಫೈ ಮಾಡಿದ್ದಾರೆ. ನೋಡಿ ಸರ್ ನಾನು ಓದುತ್ತೇನೆ. ಶ್ರೀ ಎಂ.ಆರ್. ಲಕ್ಷ್ಮಪ್ಪ ಶ್ರೀಮತಿ ಪಾರ್ವತಮ್ಮ ಇವರ ಕೇಸ್‌ನಲ್ಲಿ ವಿಶೇಷ ಭೂಸ್ವಾಧೀನಾದಿಕಾರಿ, ಕೆಐಎಡಿಬಿ ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಅಲೈನ್‌ಮೆಂಟ್‌ಗೆ ಮಾತ್ರ ಇವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಿ ಮಿಕ್ಕ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದು ಸರ್ಕಾರದ ನೀತಿಯಾಗಬೇಕು. ಇನ್ನು ಯಾರು ಬರೆದದ್ದು. This is again Hon'ble Chief Minister of Karnataka. ಸರ್ ಇದನ್ನು ಯಾವತ್ತು ಬರೆದದ್ದು ಅಂದರೆ ಅಕ್ಟೋಬರ್ 6ಕ್ಕೆ ಸರ್ ಅವರು ಬರೆಯುತ್ತಾರೆ. ಅಲೈನ್‌ಮೆಂಟ್‌ಗೆ ಎಷ್ಟು ಜಮೀನು ಬೇಕು ಅಷ್ಟನ್ನು ಮಾತ್ರ ತೆಗೆದುಕೊಳ್ಳಿ ಎಂದು 1600 acres ನಿಮ್ಮ ಅಲೈನ್‌ಮೆಂಟ್‌ಗೆ ಬೇಕು ಎಂದಾಗ why did you acquire 10,000 acres or 9,000 acres in Bangalore? ಹಾಗಾದರೆ ಏನಾಯಿತು ಯಾರಿಗೋಸ್ಕರ ಅಲೈನ್ ಮಾಡಿದ್ದೀರಿ ಮತ್ತೆ ರಾಜ್ಯ ಸರ್ಕಾರವನ್ನು ನಡೆಸುವವರು ಫ್ರೇಮ್ ವರ್ಕ್ ಅಗ್ರಿಮೆಂಟ್ ಬಿಟ್ಟು ಎಮ್‌ಒಯು ಬಿಟ್ಟು ನಾನು ಸೈಟ್ ಮಾಡುತ್ತೇನೆ ನನಗೆ ಕೊಡಿ ಎಂದು ನಿಮ್ಮ ಸಮಕ್ಷಮ ಕುಳಿತುಕೊಂಡು ಕೇಳಿದಾಗ 152 ಕೋಟಿ ರೂಪಾಯಿಗಳ ವರಮಾನ ಬರುತ್ತದೆ ಸೈಟ್ ಮಾಡಿದರೆ ಎಂದು ಒಂದು ಕಂಪನಿಯವನು ಪ್ರಪೋಸ್ ಮಾಡಿದರೆ ಬಾಯಿ ಮುಚ್ಚಿಕೊಂಡು ಕುಳಿತುಕೊಂಡು ಸಭೆ ನಡೆಸುತ್ತೀರಲ್ಲಾ ಇದು ಏನು ರಾಜ್ಯವೆ? Then why all these agreements? Why all these understanding, MOUs? ನಿಮಗೆ ಇಷ್ಟ ಬಂದಂತೆ ಮಾಡಿಕೊಳ್ಳಿ ತಾವು ಇದನ್ನು ಗಹನವಾಗಿ ತೆಗೆದುಕೊಳ್ಳಬೇಕು. ಇದು ಎಲ್ಲಿಯವರೆಗೆ ಹೋಗಿದೆ ಎಂಬುದು ಗೊತ್ತಿಲ್ಲ. ಯಾರ್‍ಯಾರು ಏನೇನು ಮಾಡಿದ್ದಾರೆಂದು ತನಿಖೆಯಾದರೇನೇ ಇದು ನಿರೂಪಣೆಯಾಗುವುದು. ಸರ್, ನಾನು ತಮಗೆ ಹೇಳುತ್ತಿದ್ದೇನೆ. ಈ

ಯೋಜನೆ ಖಂಡಿತ ಬರುವುದಿಲ್ಲ. ಏಕೆಂದರೆ ಈ ಯೋಜನೆ ಮಾಡಿರುವುದೇ ಎಸ್ಟೇಟ್ ಬಿಸಿನೆಸ್‌ಗಾಗಿ ಇಲ್ಲಿ ನಾವು ತಕರಾರು ಮಾಡುತ್ತಿದ್ದೇವಲ್ಲಾ? ಕೋರ್ಟಿನಿಂದ ಮೊದಲೇ ಅವರಿಗೆ ಸೂಚನೆ ಇದೆ, ನಿಮ್ಮ ಬರ್ಡನನ್ನು ನೀವೇ ಹೊರಬೇಕು. ತೆಗೆದುಕೊಂಡಿರುವ ಜಮೀನನ್ನು ನೀವು ಮಾರುತ್ತಿದ್ದೀರಾ. You have sold. ಇನ್‌ಟರ್ನ್ ಅವರು ಯಾರಿಗೋ ಸುಮಾರು ಎಕರೆ ಜಮೀನನ್ನು ಮಾರಿ ಬಿಟ್ಟಿದ್ದಾರೆ ಕಂಪನಿಯವರು. Rs. 27 lakhs per acre. for which there is stamp duty exemption again. ಕಂಪನಿಯವರು ಅವರಿಗೆ ಮಾರಿದ್ದಾರೆ. ಕಂಪನಿಯವರು ಈ ಅಡ್ವರ್ಟೈಸ್‌ಮೆಂಟ್ ಹಾಕಿದ್ದಾನೆ I am the Real Estate business company in Karnataka, come to me straight. Single Window system. ಬ್ರೋಚರ್‌ಗಳನ್ನು ತಮಗೆ ತೋರಿಸುತ್ತೇನೆ.

ಅಧ್ಯಕ್ಷರು : ಗೌರ್ನಮೆಂಟ್ ಲ್ಯಾಂಡ್‌ನ್ನು ಕಂಪನಿಯವರಿಗೆ ಕೊಟ್ಟಿದ್ದಾರೆ ಅವನು ಅದನ್ನು ಮಾರುತ್ತಿದ್ದಾನೆಯೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅವನು ಸೈಟ್ ಮಾಡಿ ಮಾರುತ್ತಿದ್ದಾನೆ, ಅವನಿಗೆ ಅದು 2 ರಿಂದ 6 ಲಕ್ಷ ರೂಪಾಯಿಗಳ ಅಕ್ವಿಜಿಷನ್ ಕಾಸ್ಟ್ ಕೊಟ್ಟು ಅವನು 27 ರಿಂದ 30 ಲಕ್ಷ ರೂಪಾಯಿಗಳಿಗೆ ಸೈಟ್‌ನ್ನು ಮಾರುತ್ತಿದ್ದಾನೆ. ಹೊರಗಡೆಯಿಂದ ಬರುವವರಿಗೆ ನಾವು ಹೀಗೆ ಲ್ಯಾಂಡ್ ಕೊಡುವುದು. ಹೆಚ್‌ಎಸ್‌ಆರ್ ಲೇಔಟ್ ಮತ್ತು ಅಗರ ಮಧ್ಯೆ ನಿಮಗೆ ಇಷ್ಟು ಎಕರೆ ಜಮೀನು ಕೊಡುತ್ತೇವೆ ಬಾ ಎಂದು ಒಂದು ರಿಸರ್ವ್ ಮಾಡುತ್ತಾರೆ. ನಾವು ಪ್ರಗತಿ ಮೈದಾನದಲ್ಲಿ ಒಂದು ಎಸ್ಟಾಬ್ಲಿಷಮೆಂಟ್ ಮಾಡುತ್ತೇನೆಂದು ಯಾರೋ ಒಬ್ಬ ಬಂದು ಅರ್ಜಿಯನ್ನು ಕೊಡುತ್ತಾನೆ. For whom it will be reserved with all infrastructure? ಯಾರೋ ಒಬ್ಬ ರೈತನಿಗೆ ಐ.ಪಿ.ಸೆಟ್‌ಗೆ ಟ್ರಾನ್ಸಫಾರ್ಮರ್ ರಿಪ್ಲೇಸ್ ಮಾಡಿ ಎಂದರೆ ನಮಗೆ ದುಡ್ಡಿಲ್ಲ. ಎಂದೋ ನೂರು ವರ್ಷಕ್ಕೆ ಇಲ್ಲಿ ಬರ್ತೀನಿ, ನಾನೊಂದು ಎಸ್ಟಾಬ್ಲಿಶ್‌ಮೆಂಟ್ ಮಾಡುತ್ತೇನೆ ಎನ್ನುವವನಿಗೆ ಎಕರೆಗಟ್ಟಲೆ, ಅದೂ ಹೆಚ್.ಎಸ್.ಆರ್. ಲೇಔಟ್ ಅಂತಹ ಕಡೆ, ಸರ್ಜಾಪುರ ರಸ್ತೆ ಕಡೆ ರಿಸರ್ವ್ ಮಾಡುತ್ತಾರೆ. ಇವತ್ತು ಬೆಂಗಳೂರಿನಲ್ಲಿ ಯಾರಾದರೂ ಅಲ್ಪಸ್ವಲ್ಪ ಜಮೀನನ್ನು ಇಟ್ಟುಕೊಂಡಿರುವವರು ಟೆನ್‌ಶನ್‌ನಲ್ಲಿ ಜೀವನ ಮಾಡಬೇಕಾಗಿದೆ. ಯಾವತ್ತು ಬರುತ್ತಾರೋ, ಯಾವತ್ತು ನನ್ನ ಜಮೀನನ್ನು ಕಿತ್ತುಕೊಳ್ಳುತ್ತಾರೋ ಅಂತ ಹೇಳಿ ಅವರು ಆತಂಕದಲ್ಲಿ ಇದ್ದಾರೆ. ಸರ್, ಇಲ್ಲಿನೋಡಿ. ಕೋರ್ಟ್ ಆರ್ಡರ್ ನಾನು ಹೇಳುತ್ತೇನೆ.

ಅಧ್ಯಕ್ಷರು : ಬೇಗ ಮುಗಿಸಿ. ಬಹಳ ಜನ ಮಾತನಾಡುವವರು ಇದ್ದಾರೆ.

Sri J.C. MadhuSwamy : The acquisition of land by the state government in so far as it releases to the formation of peripheral road, link road as services road, inter changed in ramps are concerned, 60% of the land acquired or required. Writ petitions are dismissed. 60 ಪರ್ಸೆಂಟ್‌ಗೆ ಸೀಮಿತ ಮಾಡಿ ಹೈಕೋರ್ಟು ಆವತ್ತು ರಿಟ್ ಪಿಟಿಶನ್‌ನನ್ನು ಡಿಸ್‌ಮಿಸ್ ಮಾಡಿದೆ. ಏಕೆ? ನೀವೀ ಅಲ್ಲಿ ಹೇಳಿಕೊಂಡಿದ್ದೀರಿ. ನಮಗೆ ಇದು 60 ಪರ್ಸೆಂಟ್ ಸಾಕು ಅಂತ. In apprehensions expressed by the Board as seen from the records that in the event if Nandi abandons the work, there would be a burden on the Board and as

the lands are not required for immediate use by the Board, I feel Nandi should be put on certain terms. ನಿಮ್ಮ ಕೆಐಎಡಿಬಿ ಇಷ್ಟೊಂದು ಶ್ರೀಮಂತ ಆಗಿದೆಯಾ? 29 ಸಾವಿರವನ್ನು ಅಕ್ವೈರ್ ಮಾಡಿ ನಿಮ್ಮ ಲಾ ಸಕ್ರೆಟರಿಯವರು ತಮ್ಮ ಒಪಿನಿಯನ್‌ನ್ನು ಕೊಡುತ್ತಾರೆ. ಇವರು ಒಪಿನಿಯನ್ ಕೇಳಿದ್ದಾರೆ. ಇವರಿಗೆ ಗೊತ್ತಾಬಿಟ್ಟಿದೆ ಅದು ಏನಾಗುತ್ತದೆ ಎಂದು. ಸರ್ಕಾರ ಲಾ ಸೆಕ್ರೆಟರಿಯವರ ಒಪೀನಿಯನ್‌ನ್ನು ಕೇಳುತ್ತಾರೆ. ಇದನ್ನು ವಾಪಸ್ಸು ಕೊಟ್ಟರೆ whether this will be a agricultural land or an industrail land. ನಾವು ರಿಕನ್ವೇ ಮಾಡಿಬಿಟ್ಟರೆ what category the land lies ಅಂತ. ಪಾಪ ಅವರು ಹೇಳುತ್ತಾರೆ ಇದಕ್ಕೆ ನಾವೇನು ಹೇಳೋಣ ಅಂತ. ನೀವು ಅಕ್ವೈರ್ ಮಾಡಿರುವುದು ಅಗ್ರಿಕಲ್ಚರ್ ಲ್ಯಾಂಡನ್ನು, ವಾಪಸ್ಸು ನಾವು ಕೊಡಬೇಕು ಎಂದರೆ ಯಾವುದಕ್ಕೆ ಕೊಡೋದು? ಹೇಗೆ ಕೊಡುವುದು ಅಂತ ಒಂದು ಒಪೀನಿಯನ್ ಕೇಳಿದರು. ಅದರ ಉದ್ದೇಶ ಏನು? You know certainly that one day you have ro re-convey the land. Otherwise, what was the requirement of-asking the opinion? ಲಾ ಡಿಪಾರ್ಟ್‌ಮೆಂಟ್‌ನವರ ಒಪೀನಿಯನ್‌ನ್ನು ನೀವು ಏಕೆ ಸೀಕ್ ಮಾಡಿದಿರಿ ಎಂಬುದು ನನಗೆ ಗೊತ್ತಾಗಲಿಲ್ಲ. Secretary of Law Department is a clear. ನಾವು ಅಕ್ವೆರ್ ಮಾಡುವುದಕ್ಕೆ ಆಯಿತು, ಮಾಡಿದ್ದೇವೆ. ಇದು ಕನ್ವರ್ಟೆಡ್ ಲ್ಯಾಂಡ್? At what cost? ಎರಡು ಲಕ್ಷದಲ್ಲಿ ನೀವು ಒಂದು ಜಮೀನನ್ನು ತೆಗೆದುಕೊಂಡು ನನಗೆ ಹಣ ಖರ್ಚಾಗಿದೆ ಅಂತ ಹೇಳಿ 27 ಲಕ್ಷ ರೂಪಾಯಿಗೆ ರಿಕನ್ವೇ ಮಾಡುತ್ತೀರಾ?

ಶ್ರೀ ಕೆ.ಆರ್. ರಮೇಶ್ ಕುಮಾರ್ : ಒಂದು ಪರ್ಟಿಕ್ಯುಲರ್ ಲ್ಯಾಂಡ್‌ನ್ನು ಅಕ್ವೈರ್ ಮಾಡಲಿಕ್ಕೆ ನೋಟಿಫೈ ಮಾಡಲಿಕ್ಕೆ ಹೋದಾಗ ಆ ಸ್ಟೇಜ್‌ನಲ್ಲಿ ಅದರ ಸ್ಟೇಚರ್ ಅಗ್ರಿಕಲ್ಚರ್ ಲ್ಯಾಂಡ್ ಆಗಿರುತ್ತದೆ. Suppose, for some valid reason, the acquiring agency does not require a portion of the land proposes or some thing. If they drop the acquisition or de-notification whatever you call it; ಅದರ ಕ್ಯಾರೆಕ್ಟರ್ ಹೇಗೆ ಚೇಂಜ್ ಆಗುತ್ತದೆ? It gets back to again agricultural land, a ಅಲ್ಲವೇ ಅದು ಅಗ್ರಿಕಲ್ಚರ್ ಲ್ಯಾಂಡ್ ಅಲ್ವಾ? ಅದಕ್ಕೆ ಮತ್ತೆ ಒಪೀನಿಯನ್ ಏಕೆ ಬೇಕು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದು ಸರ್ಕಾರದವರು ಕೇಳಿದ್ದು. ಮಾಧುಸ್ವಾಮಿಯವರು ಕೇಳಿದ ಅಭಿಪ್ರಾಯ ಅಲ್ಲ. ಸರ್ಕಾರದವರೇ ಲಾ ಸೆಕ್ರೆಟರಿ ಹತ್ತಿರ ಕೇಳಿದ್ದು.

Sri J.C. MadhuSwamy : After I furnished the opinion dated 14.8.2003, the matter was discussed in the chamber of the Hon'ble Law Minister where the Hon'ble minister for Major and Medium Industries was also present; in consequences of the said discussion. two further questions have been referred to my opinion. Whether the scope of my earlier opinion extends only to the acquisition of land under the Karnataka Industrial Area Development Act-1966 and not to acquisition under any other enactment including the Land Acquisition Act of 1894. ಎರಡನೆಯದು In the event that the government decides to

restore the land acquired by the KIADB to the erstwhile owners, will the land continue to retain its character as industrial land or whether it regains its earlier nature as agricultural land? ಇದು ನಾನು ಕೇಳಿದ್ದಲ್ಲ. ಸರ್ಕಾರದವರು ಕೇಳಿದ ಒಪೀನಿಯನ್. ಸರ್ಕಾರ ನಡೆಸುವವರು ಲಾ ಡಿಪಾರ್ಟಮೆಂಟಿನ ಒಪೀನಿಯನ್‌ನ್ನು ಕೇಳಿದ್ದೀರಿ. ಒಪೀನಿಯನ್‌ನ್ನು ಸನ್ಮಾನ ಅಡ್ವೋಕೇಟ್ ಜನರಲ್ ಶ್ರೀ ಎ.ಎನ್. ಜಯರಾಮ್ ಅವರು ಕೊಟ್ಟಿದ್ದಾರೆ. I will not go into the details of this. ಅವರು ಹೇಳಿದ್ದಾರೆ, ಬಹಳ ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಆಗ ಮಾತನಾಡುವಾಗ ನಾನು ಇದ್ದೆ. ಅದನ್ನು ತಾವು ಕೇಳಬೇಕಿತ್ತು. ಎಂಟು ಜನ ಕಾಂಗ್ರೆಸ್ ಸದಸ್ಯರು ಮಾತನಾಡಲಿದ್ದಾರೆ. ತಾವು ಮಾತನಾಡುವುದಕ್ಕೆ ಪರವಾಗಿ ಅವರು ಮಾತನಾಡುವುದಾದರೆ ಮಾತನಾಡಲಿ.

Sri J.C. Madhuswamy : Under Section 95 of the Karnataka Land Revenue Act 1964, an occupant of agricular land who wishes to divert such land or any part thereof for any non agricultural purpose shall apply for permission to the Deputy Commissioner who may.. ಅವರು ಆ ಪ್ರಾವಿಷನ್‌ನ್ನೇ ಹಿಡಿದುಕೊಂಡು ಬಂದು Therefore there is no question of the government itselt applying for such permission as is contemplated under Section 95 as it is the government which has the power to grant permission for such conversion to Deputy Commissioner. ಅವರು ಡೆಪ್ಯುಟಿ ಕಮಿಷನರ್ ಕನ್ವರ್ಶನ್ ತೆಗೆದುಕೊಂಡು ಮಾಡುವುದಕ್ಕೆ ಲಾ ಇದೆ. ನೀವು ಅಕ್ವೈರ್ ಮಾಡಿಕೊಂಡು ಕೊಡುವುದಕ್ಕೆ ಇಲ್ಲವೆಂದು ಅವರು ಹೇಳುತ್ತಾರೆ. ನಾನು ಲ್ಯಾಂಡ್ ಓನರ್ ಆಗಿದ್ದು ಅವರ ಪರ್ಮಿಶನ್ ತೆಗೆದುಕೊಂಡು ಕನ್ವರ್ಶನ್‌ಗೆ ಕೇಳಿದ್ದರೆ ಸೆಕ್ಷನ್‌ನಲ್ಲಿ ಹೀಗಿದೆ ಅಂತ ಹೇಳಿಕೊಂಡು ಅವರು ಬರುತ್ತಾರೆ. If you examine similar enactments such as the Bangalore Development Authority Act, 1976, we note that provisions have been made for the acquisition of land either for the purpose of development schemes by the authorities self or to sanction a scheme for such developments made by others. Though the land upon acquisition vests in the government subsequently in the BDA there is no further provision for securing permisssion. ಪರ್ಮಿಶನ್ ತೆಗೆದುಕೊಳ್ಳುವುದು ಬೇಡ ಎನ್ನುತ್ತಾರೆ. ಮಾರುವುದರ ಬಗ್ಗೆ ಅವರು ಒಪೀನಿಯರ್ ಕೊಡಲೇ ಇಲ್ಲ. I am therefore of the opinion that when the land is returned to the erstwhile owners, it would continue to have the character of agriculture land and cannot be said to have acquired the nature of industrial land. How can you charge Rs. 27 lakhs? Where will you leave this developmental cost? Then why did you sell it at Rs. 27 lakhs to some companies? The question is, ನೀವು ನಾಳೆ ಇದನ್ನು ರಿಕನ್ವೆ ಮಾಡಿದರೆ,

ಅದೇ ರೇಟಲ್ಲಿ ಮಾಡುತ್ತೀರಾ? ಆವತ್ತಿನ ಮಾರ್ಕೆಟ್ ಪ್ರೈಸ್‌ನಲ್ಲೇ ಮಾಡುತ್ತೀರಾ? ಅದರ ಮೇಲೆ ಆಗಿರುವ ಡೆವಲಪ್ ಮೆಂಟ್ ಚಾರ್ಜ್‌ಸ್‌ನ್ನನು ನೀವು ಏನು ಮಾಡುತ್ತೀರಿ? ಈಗ ನೀವು ಡೆವಲಪ್‌ಮೆಂಟ್ ಮಡಿರುವುದರಿಂದ ತಾನೇ 27 ಲಕ್ಷ ರೂ ಗೆ ಮಾರುತ್ತಿರುವುದು?

Sri K.R. Ramesh Kumar : The fact is de-notification is done after all these formalities are observed.

Sri J.C. MadhuSwamy : No. Before observing the formalities, de-notifications are made at the whims and fancies. 28(4)ರ ಪ್ರಕಾರ ನೋಟಿಫಿಕೇಶನ್ ಆಗಿರುವುದನ್ನು ನೀವು ಅವರಿಗೆ ಹ್ಯಾಂಡ್ ಓವರ್ ಮಾಡುವುದಕ್ಕೆ ಮೊದಲೇ ಡೀನೋಟಿಫಿಕೇಶನ್ ಸ್ಟಾರ್ಟ್ ಮಾಡಿಬಿಟ್ಟಿದ್ದೀರಿ. ಈ ಕೆಐಎಡಿಬಿ ಅವರು ಫಾಂ ಮಾಡಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನೋಟಿಫಿಕೇಶನ್ ಇಶ್ಯೂ ಮಾಡಿ ಅಕ್ವಿಜಿಷನ್ ಇಂಟೆನ್‌ಶನ್‌ನ್ನು ನೀವು ಎಕ್ಸಪ್ರೆಸ್ ಮಾಡಿ, ಫಾರ್ಮಲಿಟೀಸ್‌ನ್ನು ಕಂಪ್ಲೀಟ್ ಮಾಡಿ ಆಮೇಲೆ ಬೇಡ ಎಂದು ಹೇಳಿ ಡಿನೋಟಿಫೈ ಮಾಡಿದಾಗ, ಲ್ಯಾಂಡ್ ಕ್ಯಾರೆಕ್ಟರ್ ಬದಲಾವಣೆಯಾಗಿರುತ್ತದೆ. You can impute or attribute motive.

Sri J.C. Madhu Swamy : Sir, If at all that is through revenue 4(1) ನೋಟಿಫಿಕೇಶನ್ ಆಗಿ 6(1) ಆಗುವ ಮಧ್ಯದಲ್ಲಿ ಈ ಗೊಂದಲಗಳು ರಿಲೀವ್ ಆಗಿಹೋಗಿಬಿಡುತ್ತಿದ್ದವು. This is not through that Act. ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಆಗಲಿಲ್ಲ. ನೀವು ನೇರವಾಗಿ ಲ್ಯಾಂಡ್‌ನ್ನು ಗ್ರ್ಯಾಬ್ ಮಾಡಿಕೊಂಡುಬಿಟ್ಟಿದ್ದೀರಿ....

ಶ್ರೀ ಕೆ.ಆರ್. ರಮೇಶ್ ಕುಮಾರ್ : ಈ ಕೆ.ಐ.ಎ.ಡಿ.ಬಿ. ಬೇರೆ ಇದೆ, ಸ್ಲಮ್ ಬೋರ್ಡ್ ಬೇರೆ ಇದೆ, ಜನರಲ್ ಅಕ್ವಿಜಿಶನ್ ಆಕ್ಟ್ ಇದೆ. ನಾನು ಏನು ಹೇಳುತ್ತಿದ್ದೇನೆ ಎಂದರೆ ಫಾರ್ಮಾಲಿಟೀಸ್‌ನ್ನು ಕಂಪ್ಲೀಟ್ ಮಾಡಿ, ಗವರ್ನಮೆಂಟ್ ಕಾಸ್ಟ್‌ನಲ್ಲಿ ಅವರಿಗೆ ಡೀನೋಟಿಫೈ ಮಾಡಿಕೊಡುವುದಿದ್ದರೆ ಆವಾಗ you can impute motives. The particular person who is the erstwhile owner, he has saved botheration of going through all these ordeals. You are handing him the land, the character of which is changed. Then you can impute. But, when the character of the land is not changed,...

Sri J.C. MadhuSwamy : That is not the point. Character of the land whether it is changed or not ಕೆಐಎಡಿಬಿ ಈಗ ಕಂಪನಿಗೆ ತೆಗೆದುಕೊಂಡು ಕೊಡುವುದಕ್ಕೆಂದು ಅಷ್ಟಕ್ಕೇ ಇದನ್ನು ಅಕ್ವೈರ್ ಮಾಡಿರುವುದು. Once it is handed over to the company...

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದೇ ಒಂದು ವಿನಂತಿ. ನಾನು ಒಳಗಡೆ ಬಂದಾಗ ತಮಗೆ ಹೇಳಿದ್ದೆ. ಐದು ಗಂಟೆಗೆ ವಿಶೇಷವಾಗಿ ಕಾರಣಕ್ಕೆ ನಮ್ಮಲ್ಲಿ ಎಲ್ಲಾ ಶಾಸಕರುಗಳು ಹೋಗಬೇಕಾಗಿದೆ. ದಯಮಾಡಿ ಅದನ್ನು ನೋಡಿಕೊಂಡು ಈ ಕಡೆ ಒಂದಷ್ಟು ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ಅವರಿಗೆ ಅವಕಾಶ ಮಾಡಿಕೊಡಬೇಕಾಗಿ ವಿನಂತಿ. ತಾವು ನಾಳೆ ಮುಂದುವರೆಸಿದರೂ ನಮ್ಮದೇನೂ ಅಭ್ಯಂತರ ಇಲ್ಲ.

ಅಧ್ಯಕ್ಷರು : ನಾನು ಹೇಳುತ್ತಿದ್ದೇನೆ. ಬೇಗ ಮುಗಿಸಿ. ಬಿ.ಜೆ.ಪಿ.ಯವರಿಗೆ ಅವರ ರಾಷ್ಟ್ರೀಯ ಅಧ್ಯಕ್ಷರು ಬರುತ್ತಾರಂತೆ. ಅವರಲ್ಲಿ ಕೆಲವರು ಮಾತನಾಡಬೇಕೆಂದು ಇಚ್ಛೆಪಟ್ಟಿದ್ದಾರೆ. ಇದರೊಳಗೆ ಮಾಣ್ಯ ಅಶೋಕ್‌ರವರೇ, ನಿಮ್ಮ ಕ್ಷೇತ್ರದಲ್ಲಿ ಬಹಳ ಅಕ್ವೈರ್ ಆಗಿದೆ. ಬೇಗ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಹೇಳುವುದಕ್ಕೆ ಹೊರಟಿದ್ದು ಇಷ್ಟೇ ಸರ್. ಆವತ್ತು ಡೀನೋಟಿಫೈ ಮಾಡುವ ಅಥಾರಿಟಿಗೆ-ವ್ಯಕ್ತಿಗೆ ನಾನು ಎಲ್ಲಿಯಾದರೂ ಒಂದು ಕಡೆ ಸಿಕ್ಕಿಹಾಕಿಕೊಳ್ಳುತ್ತೇನೆ ಎಂದು ಗೊತ್ತಾಯಿತು. ಅದಕ್ಕಾಗಿ ಲಾ ಡಿಪಾರ್ಟಮೆಂಟ್‌ನ ಒಪೀನಿಯನ್ನು ಅವರು ರೆಫರ್ ಮಾಡಿಸಿಕೊಂಡರು. My intention of putting things, the individual was prepared to de-notify lands, ಅವರು ಕನ್‌ಫ್ಯೂಶನ್ ಆಗಿಯೇ ಬಂದರು. ಅವರಿಗೇ ಗೊತ್ತಾಗಬೇಕಾಗಿತ್ತು....

ಶ್ರೀ ಆರ್.ವಿ. ದೇಶಪಾಂಡೆ : ತಾವು ಡೀನೋಟಿಫಿಕೇಶನ್ ಬಗ್ಗೆ ಕೆಲವು ವಿಚಾರ ಪ್ರಸ್ತಾಪ ಮಾಡಿದ್ದೀರಿ. 'ಡಿ' ನೋಟೀಫೈ ಮಾಡಬೇಕಾದರೆ ಕೆಲವು ಕಾಮನ್ ಜಿ.ಓ.ಗಳು ಇರುತ್ತವೆ, ಕೆಲವು ಕಡತಗಳು ಇವೆ. ನೀವು ಒಂದೂವರೆ ಸಾವಿರ ಎಕರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಹತ್ತು ಎಕರೆ ಇದ್ದರೆ ಹತ್ತು ಎಕರೆಯನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. Am I right? Do you agree with me? ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ. ಬಿಎಂಐಸಿ ಯಲ್ಲಿ ಎಷ್ಟು ಡೀನೋಟಿಫಿಕೇಶನ್ ಆಗಿದೆ, ಆ ಎಲ್ಲಾ ಫೈಲ್ಸ್‌ನ್ನು ಅವರು ನೋಡಿ ನಿಮಗೆ ಹೇಳಬೇಕಾಗುತ್ತದೆ. ನೀವು ಅದನ್ನು ಇನ್‌ಸ್ಪೆಕ್ಟ್ ಮಾಡಬೇಕು ನಾನು ಮಾತನಾಡಲು ಅವಕಾಶ ಸಿಕ್ಕಿದಾಗ ನಾನು ಹೇಳುತ್ತೇನೆ. ಈ ಪ್ರಾಜೆಕ್ಟ್‌ನಲ್ಲಿ 80 ಪರ್ಸೆಂಟ್ ನೋಟಿಫಿಕೇಶನ್ಸ್ ಆಗಿದ್ದು 1998 ಜನವರಿಯಿಂದ 10ನೇ ಅಕ್ಟೋಬರ್ 1999ರ ಒಳಗಾಗಿ. ಆಗ ನಾನು ಮತ್ತು ನೀವು ಜೆ.ಹೆಚ್. ಪಾಟೀಲ್‌ರ ಸರ್ಕಾರದಲ್ಲಿ ಎಂ.ಎಲ್.ಎಗಳಾಗಿ ಕೆಲಸ ಮಾಡುತ್ತಿದ್ದೆವು. 90 ಪರ್ಸೆಂಟ್ acquisition ಯಾವಾಗ ಆಯಿತು ಆಗ ನಾನೂ ಎಂ.ಎಲ್.ಎ. ಆಗಿದ್ದೆ. ಮಂತ್ರಿಯಾಗಿರಲಿಲ್ಲ. ಅವರೂ ಎಂ.ಎಲ್.ಎ. ಇದ್ದರು. ತಾವು ಕೇಳಿದಿರಿ de-notify ಎಷ್ಟಾಯಿತು ಎಂದು. ನಾನು ಮಂತ್ರಿಯಾದ ನಂತರ I observed 6,600 ಎಕರೆ excess land notify ಮಾಡಿದ್ದರು. I took very serious objection to this and I said how could it happen like this? ಪ್ರಾಜೆಕ್ಟ್‌ಗೆ ಬೇಕಾಗಿರುವುದು 21,000 ಎಕರೆ as per framework agreement, ನೀವು ಇದು ಮಾಡಿದ್ದು ತಪ್ಪು. ಅಂತ ಹೇಳಿ I authorised my Principal Secretary, Industries, immediately talk to PWD, get reports from them and whatever land is not required, you immediately de-notify. On that authority, the Principal Secretary on advise of PWD Department ಯಾವ land ಬೇಡ ಆ land ನ್ನು de-notify ಮಾಡಿದರು. Then the file came to me for ratification. ನನ್ನ ಲೆವೆಲ್‌ನಲ್ಲಿ ನೀವು ಹೇಳಿದಿರಲ್ಲಾ request ಮಾಡಿದರು ಎಂದು, ಯಾರು ಯಾರು request ಮಾಡಿದರು ಅವರ ಹೆಸರನ್ನು ಹೇಳುವುದಕ್ಕಾಗುವುದಿಲ್ಲ, ಶಾಸಕರಾಗಲಿ, ಮತ್ತೊಬ್ಬರಾಗಲಿ, ಎಲ್ಲರೂ ಸ್ನೇಹಿತರಿದ್ದಾರೆ. I don't want to tell. ನನ್ನ ಲೆವೆಲ್‌ನಲ್ಲಿ ಬಂದು de-notify ಆದ land 32 ಎಕರೆ 38 ಗುಂಟೆ. This is just for your information. ಎರಡನೆಯದು ತಾವೇನು Advocate General Opinion ಬಗ್ಗೆ raise ಮಾಡಿದ್ದೀರಲ್ಲಾ this was not asked in this file. ಏನಾಯಿತು ಎಂದರೆ Land Acquisition Act ನಲ್ಲಿ there is a provision to delete.

ಶ್ರೀ ಸಿ.ಟಿ. ರವಿ : ಅಧ್ಯಕ್ಷರೆ, ಈಗ ಉತ್ತರ ಹೇಳುತ್ತಿದ್ದಾರೆಯೇ?

ಶ್ರೀ ಆರ್.ವಿ. ದೇಶಪಾಂಡೆ : ದಯವಿಟ್ಟು co-operate ಮಾಡಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, Part of the Government ಅಲ್ಲ ಅವರು. ಸರ್ಕಾರ ಉತ್ತರ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : KIADB Act ನಲ್ಲಿ ಏನಿದೆ, Once 28(4) is issued... 28(4) is the final notification, 28(4) (1) is preliminary notification. 28(4) ತನಕ you can delete lands. After 28(4) the lands vest with the State Government. In that situation, whether we can return the lands ಎನ್ನುವ ಪ್ರಶ್ನೆ ಬಂದಾಗ not in this case. In some other matter opinion of the Advocate General was asked. In that he said under the Land Acquisition Act you can't do, but KIADB is ours, you can re-convey the lands provided you take stamp duty from the persons to whom you are re-conveying. To that extent Advocate Generals opinion was sought. This is just for your information.

ಶ್ರೀ ಜೆ.ಸಿ. ಮಾಧುಸ್ವಾಮಿ : 5,000 ಚಿಲ್ಲರೆ ಎಕರೆ ತಾವು de-notify ಮಾಡಿ it is in excess, I am shocked to know ಎಂದು ಬರೆದಿದ್ದೀರಿ. Acquisition ನಿಂತಿಲ್ಲ. Even after that it amounts to 29,000 acres. ನಾನು ಮಾತನಾಡಲೇಬಾರದೆಂದು ಇದ್ದೆ. I know, I am in possession of that note. ನನ್ನ ಹತ್ತಿರ ಇದೆ. ತಾವೇನು ಒಂದು ಕಾಲಕ್ಕೆ ಬರೆದಿದ್ದಿರಿ ``it is in excess" ಎಂದು ಏತಕ್ಕೆ ಅಲ್ಲಿಗೆ stick ಆಗಲಿಲ್ಲ ಎನ್ನುವುದೇ ನಮ್ಮ ಪ್ರಶ್ನೆ? when the then Hon'ble Industries Minister wrote it, I know 5,000 to 6,000 acres of land is acquired for infrastructure corridor, this is ridiculous stop this" ಎಂದು ಬರೆದವರು ಆಮೇಲೆ continue ಮಾಡಿದಿರಿ. Not that 5,000 or 6,000 acres were de-notified. Individual cases were brought to you. Individual cases were brought to the then industries Minister. ಒಂದರ ಮೇಲೆ ಒಂದು ನೋಟ್ ಬರೆದರು. No information was sought from any department. I challenge. ನೀವು ಯಾವುದೇ de-notification ನೀವು ಅರ್ಜಿಗಳ ಮೇಲೆ ಬರೆದಿರುವುದಕ್ಕೆ ಇಲಾಖೆಯಿಂದ ನೀವು ಪೂರಕ ಮಾಹಿತಿ ತರಿಸಲಿಲ್ಲ. ಇದು ದಂದೆಯಾಯಿತು ಬೆಂಗಳೂರಿನಲ್ಲಿ, ಯಾರು ಯಾರು ಬೇಕೋ ಅವರು Industries Minister ಹತ್ತಿರ ಬರುವುದು ನನ್ನ ಜಮೀನನ್ನು de-notify ಮಾಡಿ ಎಂದು ಕೇಳಿಕೊಳ್ಳುವುದಾಯಿತು. With all due respects to our Hon'ble Member, ಅವರು ಏನು ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ, ಆದರೆ ಮಧ್ಯ ದಂಧೆಯಂತೂ ಆಯಿತು. De-notification ವ್ಯವಹಾರದಲ್ಲಿ ದಂಧೆ ಬೇಕಾದಷ್ಟಾಯಿತು.

ಶ್ರೀ ಆರ್.ವಿ. ದೇಶಪಾಂಡೆ : ಆ details ನಿಮ್ಮ ಹತ್ತಿರ ಇದ್ದರೆ records ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು 33 ಎಕರೆ ಹೇಳಿದೆ ತಾವು 13 ಎಕರೆ ಹೇಳಿದ್ದೀರಿ Are you prepared to take a challenge from me? I will retire from this

House if you prove that 1300 acres were de-notified. I will retire. Tell me. Unnecessarily don't make reckless allegations.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಲಧ್ಯಕ್ಷರೆ, ತಾವು ನನ್ನ protection ಗೆ ಬರಬೇಕು. If I make an allegation which is not right ನೀವು ಶಿಕ್ಷೆ ಕೊಡುವವರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಾಧುಸ್ವಾಮಿಯವರೆ, ಅವರು ಸೂಚನೆ ಕೊಡುತ್ತಾರೆ ಅಷ್ಟೇ. ತಾವು de-notification 1,300 ಎಕರೆ ಆಯಿತು ಎಂದು ಹೇಳುತ್ತಿದ್ದೀರಿ. ಅವರಿಗೇನೂ ತಾವು notice ಕೊಟ್ಟಿಲ್ಲ.

Sri J.C. Madhu Swamy : I am sorry. ನಾನು ಅವರ ಸುದ್ದಿನೇ ಮಾತನಾಡಿಲ್ಲ. ಅವರಾಗಿ ಎದ್ದರು He asked me to yield and then he spoke.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಒಂದು ನಿಮಿಷ. please enlighten. ಆಯಿತು ತಾವು ಹೇಳಲಿಲ್ಲ. ಬಿಡಿ ಬೇಡ. ಅವರೇನು ಹೇಳುತ್ತಿದ್ದಾರೆ, ನಾನು ಈ ಸದನದಿಂದ ರಾಜಕೀಯದಿಂದ ನಿವೃತ್ತಿಯಾಗುತ್ತೇನೆ, ನೀವು 1,300 ಎಕರೆ de-notify ಆಗಿರುವುದಕ್ಕೆ record produce ಮಾಡಿ ನಾನು ಮಾಡಿರತಕ್ಕಂಥದ್ದು 33 ಎಕರೆ ವಿಚಾರವನ್ನು ಹೇಳುತ್ತಿದ್ದಾರೆ. ಆದುದರಿಂದ ಈ ಸದನಕ್ಕೆ ತಾವು ಈ 1,300 ಎಕರೆ de-notify ಮಾಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಬೆಂಗಳೂರು ಮೈಸೂರು ಕಾರಿಡಾರ್ ಪ್ರಾಜೆಕ್ಟ್‌ನಲ್ಲಿರತಕ್ಕಂಥದನ್ನು ತಮ್ಮ ಹತ್ತಿರ ಏನು ದಾಖಲೆ ಇದೆ ಅದನ್ನು ಕೊಟ್ಟರೆ ಅದನ್ನು ಪರಿಶೀಲಿಸಿ ಉತ್ತರ ಕೊಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಸರ್ಕಾರ ನಡೆಸಿಲ್ಲ. ಆದರೆ ನನ್ನ ಹತ್ತಿರ ಇರುವ ಮಾಹಿತಿ ಮೇಲೆ ಮಾತನಾಡುವ ಹಕ್ಕು ನನಗೆ ಇದೆ. I have every right to speak with the records, which are available to me. ನನಗಿರುವುದು ನಾನು ಹೇಳುತ್ತೇನೆ. ಇಲ್ಲದಿದ್ದರೆ ಸಂಪ್ರದಾಯ ಬದ್ಧವಾಗಿ ನೀವು ಉತ್ತರ ಕೊಡುವಾಗ ಹೇಳಿ. ಹೀಗಲ್ಲ ಹೀಗಿತ್ತು ಎಂದು. ನನಗೆ ಏಕೆ ಮಾತನಾಡುವಾಗಲೇ ಕಡಿವಾಣ ಹಾಕುವುದು? ಸರ್ಕಾರ ನಡೆಸಿರುವವರು ನೀವು, ಮಾಹಿತಿ ಇಟ್ಟುಕೊಂಡವರು ನೀವು. ಇಲ್ಲಿ ನಿಂತು ಮಾತನಾಡುವ ಸದಸ್ಯರು ಎಲ್ಲರೂ ಎಲ್ಲಾ ದಾಖಲೆಗಳನ್ನೂ ಸದನಕ್ಕೆ ಒದಗಿಸಿದ ದಿವಸ ನಾನೂ ತಂದು ಒದಗಿಸುತ್ತೇನೆ. ನನಗೆ ಇರುವ ಮಾಹಿತಿ ಮೇಲೆ ನಾನು ಮಾತನಾಡುವುದು ತಪ್ಪಾ? I am here to argue my case..Case argue ಮಾಡಿದವರಿಗೇ punishment ಕೊಡುವುಧು ಯಾವುದೇ law ನಲ್ಲಿ ಇನ್ನೂ prescribe ಆಗಿಲ್ಲ. For your information, ತಾವು ಇಲ್ಲಿ ಇರಲಿಲ್ಲ. Till now ನಾನು ಅವರ ಹೆಸರು ತೆಗೆದುಕೊಂಡಿರಲಿಲ್ಲ. ಅವರಾಗೆ ಎದ್ದು ಈಲ್ಡ್ ಆಗಿ ಎಂದು ಕೇಳಿದ್ದಕ್ಕೇ ನಾನು ಈಲ್ಡ್ ಆದಾಗ ಅವರು ಮಾತನಾಡುತ್ತಿದ್ದರು. ತಾವು ಬಂದಿರಿ. He was confused. ನಾನು charge ಮಾಡಿದೆ ನಿಮ್ಮನ್ನ ಎಂದು. I did't charge. ಸನ್ಮಾನ್ಯ ಹಿರಿಯ ಸದಸ್ಯರ ಬಗ್ಗೆ ನಾನು ಮಾತನ್ನೇ ಆಡಲಿಲ್ಲ. ನಾನು ಇನ್ನೂ ಹೇಳಿರಲ್ಲೇ ಇಲ್ಲ.0

ಅಧ್ಯಕ್ಷರು : ಮುಖ್ಯ ಅಂಶಗಳನ್ನು ಹೇಳಿ ಬೇಗನೆ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, The very point of de-notification is either favourism or corruption, whoever has done this.

Mr Speaker : You are generalising.

ಶ್ರೀ ಜೆ.ಸಿ. ಮಾಧುಸ್ವಾಮಿ : ಏಕೆಂದರೆ ಒಂದು ಭೂಮಿನ್ನು ನಾವು specific purposeಗೆ acquire ಮಾಡಿದ್ದೇವೆ ಎಂದು ತೆಗೆದುಕೊಂಡು ಯಾರಿಗೋ ವಹಿಸಿಕೊಡುವುದಕ್ಕೆ... it is not for Government purpose they acquired land. 28(4) ನಲ್ಲಿ ಸರ್ಕಾರ ತೆಗೆದುಕೊಂಡ ಭೂಮಿಯಲ್ಲ ಇದು. Nandi Infrastructure Corridor ನವರಿಗೆ ವಹಿಸಿಕೊಡಲು ತೆಗೆದುಕೊಂಡ ಭೂಮಿ ಇದು. We were just an agency fixed to acquire at the market price. ಆ ಭೂಮಿಯನ್ನು acquire ಮಾಡಿ ಅದರ ಅಗತ್ಯವಿರಲಿಲ್ಲ ಎಂದು ನಾವು de-notify ಮಾಡುತ್ತೇವೆ ಎಂದರೆ ನಾವು ಸರ್ಕಾರ ನಡೆಸುತ್ತೇವೆಯೇ ಎನ್ನುವುದು ಮೂಲಭೂತ ಪ್ರಶ್ನೆ. Alignment ಒಪ್ಪಿದ್ದರಾ? ರೋಡ್ ಎಲ್ಲಿಗೆ ಹೋಗುತ್ತದೆ ಎಂದು ನಿಮಗೆ ಗೊತ್ತಿತ್ತಾ? ಈ ಪೆರಿಫೆರಲ್ ರೋಡ್ ಎಲ್ಲಿತ್ತು ಎಂದು ಗೊತ್ತಿದ್ದಲ್ಲಿ acquisition proposal ಏಕೆ ತಾವು ಕೊಟ್ಟಿರಿ? Why did you go for acquiring land? ಯಾರ ಮನೆ ಹಾಲುಮಾಡಲು ಹೋದಿರಿ ಎಂದು ನಾನು ಕೇಳಬೇಕೇ ಬೇಡವೇ? Right or wrong. ನೀವು ಮೊದಲು Acquire ಮಾಡಿದ್ದು ಏತಕ್ಕಾಗಿ? ನಿಮಗೆ preipheral road, link road, service road ಎಲ್ಲಿಗೆ ಹೋಗುತ್ತದೆ ಎಂಬ ಮಾಹಿತಿ ಇಲ್ಲದೆ, ನಿಮ್ಮ ಹತ್ತಿರ ಒಂದು approved alignment ಇಲ್ಲದೆ why did you go there? Why did you re-convey the land? ಯಾವುದಕ್ಕಾಗಿ? Your acquisition is de-notified and you are free to take back ಎಂದು ಮಾಡಿದ್ದೀರಲ್ಲಾ, ಏತಕ್ಕಾಗಿ ಮಾಡಿದ್ದೀರಿ ಎಂಬುದು ನಮಗೆ ಗೊತ್ತಿಲ್ಲ. Why did you create this apprehension in the minds of people of Bangalore City? ಈ apprehension create ಮಾಡಿದ್ದು ಏತಕ್ಕಾಗಿ? ಯಾವ ಜಮೀನು ತೆಗೆದುಕೊಳ್ಳುತ್ತಾರೋ? Service road, link road, ತಂದಿಡಿ ಸ್ವಾಮಿ. ಇಷ್ಟೆಲ್ಲಾ ಮಾತನಾಡಿದ ತಾವು ಈ ಸದನದ ಮುಮದೆ ತಂದಿಡಿ Where is the approved document of this alignment? Nandi Infrastructure Corridor ಅವರಿಗೂ ನಿಮಗೂ ಆಗಿರುವ agreement ಪ್ರಕಾರ ಒಂದು approved sketch ಬೇಕಲ್ಲಾ? ಒಂದು alignment ಬೇಕಲ್ಲಾ. you must finally say this is the land required, where we are going to acquire land? ನೀವು notification ನೋಡಬೇಕೋ ಬೇಡವೋ? ಎಲ್ಲಿ ಬೇಕೋ ಅಲ್ಲಿ acquire ಮಾಡುತ್ತೀರಿ. ಮಾನ್ಯ ಕೈಗಾರಿಕಾ ಮಂತ್ರಿಗಳು ಆರು ಸಾವಿರ ಎಕರೆ ಜಾಸ್ತಿ acquire ಮಾಡಿದ್ದೇವೆ ಎಂದು ಒಪ್ಪಿಕೊಳ್ಳುತ್ತಾರೆ. ಏನು ಹುಡುಗಾಟವೇ? ಚಕ್ಕಂದವೇ ಸರ್ಕಾರ ನಡೆಸುವುದೆಂದರೆ. ಆರು ಸಾವಿರ ಎಕರೆ excess acquire ಮಾಡಿದ್ದೇವೆ ಎಂದು when the Hon'ble Industries Ex-Minister states before the Assembly, it was brought to my notice that 6,000 acres were excessively acquired ಎಂದಾಗ ಇಲ್ಲಿ ಏನು ನಡೆಯುತ್ತಿದೆ? ಅವರೇ ಹೇಳಿದ್ದಾರೆ. ನಾನು ಹೇಳಲಿಲ್ಲ. ನಾನು ಹೇಳಬಾರದೆಂದಿದ್ದೆ. when he himself admits, 'ನನ್ನ ಗಮನಕ್ಕೆ ಬಂತು 'ಹಾಗಾದರೆ ಅಲ್ಲಿಂದ ಮುಂದಕ್ಕೆ ಏಕೆ ನಿಲ್ಲಲಿಲ್ಲ? Even to this day, election notification ಆದಮೇಲೆ land acquisition ನಡೆದಿದೆ. I quote the letter of the Hon'ble PWD Minister. ಸನ್ಮಾನ್ಯ ರೇವಣ್ಣನವರು ಪಿಡಬ್ಲ್ಯೂಡಿ ಮಂತ್ರಿಯಾದ ನಂತರ ಒಂದು ಕಾಗದವನ್ನು ಬರೆದಿದ್ದಾರೆ. ನಾನು ಅಧಿಕಾರಕ್ಕೆ ಬಂದ ಮೇಲೆ 2400 ಎಕರೆ ಜಮೀನನ್ನು ನೀವು acquire ಮಾಡಿಕೊಳ್ಳುತ್ತಿದ್ದೀರಿ ಎಂದು ನನ್ನ ಗಮನಕ್ಕೆ ಬಂದಿದೆ ಈ ಮಾಹಿತಿಯನ್ನು ನನ್ನ ಮುಂದೆ ತಂದಿಡಿ

ಎಂದು. ಅವರು ಇಲ್ಲ ಎನ್ನಲಿ. I will show the copy. He was not aware why the land was acquired for. ಸರ್ಕಾರ ಚೇಂಜ್‌ಆದ ಮೇಲೂ ಅವರು ಕಾಗದ ಬರೆಯುತ್ತಾರೆ. 2400 ಎಕರೆ ಜಮೀನನ್ನು ನೀವು excess ಆಗಿ acquire ಮಾಡುತ್ತಿದ್ದೀರಿ. ಸನ್ಮಾನ್ಯ ದೇವೇಗೌಡರು ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಸನ್ಮಾನ್ಯ Governor ರವರಿಗೆ representation ಕೊಟ್ಟಿದ್ದಾರೆ.

3.50 ಪಿಎಂ

ನಾನು ಹೋದ ಕಡೆಗಳಲ್ಲಿ ಪ್ರೆಸ್‌ನವರು ಮತ್ತು ಜನರು ಕೇಳುತ್ತಿದ್ದಾರೆ. ಏನ್ರಿ ನೀವು ಸರ್ಕಾರ ಮಾಡಿ ಈ ಪರಿಸ್ಥಿತಿ ನಿರ್ಮಾಣ ಆಗಿದೆ ಅಂತ ಅದಕ್ಕೆ ನಾನು ಉತ್ತರ ಹೇಳುವುದಕ್ಕೆ ಶಕ್ತಿ ಇಲ್ಲ ಇವತ್ತು ನನಗೆ ಈ ರೆಕಾರ್ಡ್‌ನ್ನು ಒದಗಿಸತಕ್ಕಂಥದ್ದು ಅಂತ. He gives a three page note to the Secretary concerned. Why? when our Hon'ble Minister says ಆವತ್ತೆ 6 ಸಾವಿರ ಎಕರೆ ಜಮೀನು ಜಾಸ್ತಿ ಅಕ್ವೈರ್ ಆಗಿತ್ತು ಅಂತ. what was the requirement to acquire another 2,004 acres now? I demand a reply. ಆವತ್ತೇ ನಿಮ್ಮ ಹತ್ತಿರ 6 ಸಾವಿರ ಎಕರೆ ಜಸ್ತಿ ಆಯಿತು ಅಂತ ಒಪ್ಪಿಕೊಂಡು ಈಗಲೂ ಕೂಡ 2 ಸಾವಿರ ಎಕರೆ including those 6,000 acres, ಅದೇನೂ ಡೀನೋಟಿಫೈ ಆಗಲಿಲ್ಲ. ಕಾಗದ ಬರೆದರು. ಒಂದು ನೋಟ್ ಆಯಿತು ಅಷ್ಟೆ. ಎಕ್ಸೆಸ್ ಆಗಿ ಅಕ್ವೈರ್ ಆಗಿದೆ ಅಂತ ನಮ್ಮ ಗಮನಕ್ಕೆ ಬಂದಿದೆ ಅಂತ. There is no record to prove that, that land is de-notified. ಈಗ ನಾನು ಕೇಳುವುದು ಇವತ್ತೂ ನೀವು ಅಕ್ವೈರ್ ಮಾಡುತ್ತಿದ್ದೀರಿ. ಇವತ್ತೂ ನಿಮ್ಮ ಹತ್ತಿರ ಅಲೈನ್‌ಮೆಂಟ್ ಇದೆ. Today also you are creating confusion in the minds of Bangaloreans. ದುರುದ್ದೇಶದಿಂದ ಅಕ್ವೈರ್ ಮಾಡುತ್ತಿದ್ದೀರಿ. ಅಲೈನ್‌ಮೆಂಟ್ ಚೇಂಜ್ ಮಾಡುತ್ತಿದ್ದೀರಿ. ನಾನು ಅವತ್ತು ನಿಮಗೆ ಪೋನ್ ಕೋಟ್ ಮಾಡಿದೆ, ಒಂದು ರೆಜಸಾರ್ಟ್‌ನ್ನು ಸೇವ್ ಮಾಡಲಿಕ್ಕೆ ಬೇರೆ ಕಡೆಯಿಂದ ಅಲೈನ್‌ಮೆಂಟ್ ಮಾಡುತ್ತೀರಿ. what is that resort doing business? ಮಧ್ಯ ಮಧ್ಯೆ ನಾನು ರಿಪೀಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಿಮಗೆ ಇಷ್ಟ ಬಂದವರಿಗೆ ನೀವು ಡೀನೋಟಿಫೈ ಮಾಡಿಕೊಂಡು ಹೋಗಿ ಅಮಾಯಕರನ್ನು, ಬಡವರನ್ನು, ಕೇಳುವವರು ದಿಕ್ಕು ಇಲ್ಲದವರನ್ನು ದಲಿತರನ್ನು ಮತ್ತು ಆಶ್ರಯ ಮನೆ ಕಟ್ಟಿಕೊಂಡಿರುವವರನ್ನೆಲ್ಲಾ ಒಡೆದು ಕೊಂಡು ಹೋಗುತ್ತೀರಿ, They have acquired land by showing notification that it is required for industrial purpose which was earlier an industry. ಅದೇ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಅಕ್ವೈರ್ ಮಾಡಿ ಇಂಡಸ್ಟ್ರೀಯಲ್ ಸ್ಟೇಟಸ್ ಇರುವಂತಹ ಲ್ಯಾಂಡನ್ನೂ ಸಹ ಇವರು ಅಕ್ವೈರ್ ಮಾಡುತ್ತಾರೆ, ಇಂಡಸ್ಟ್ರೀಯಲ್ ಪರ್‌ಪಸ್‌ಗೆ. Is it not true? How can you acquire twice? Same authority ಎರಡು ಸಲ ಲ್ಯಾಂಡ್ ಅಕ್ವೈರ್ ಮಾಡುತ್ತಾ? when land is converted for industrial purpose once ಮತ್ತೆ ನೀವು ಅದನ್ನು ಕ್ವೈರ್ ಮಾಡುತ್ತೀರಿ. ಈ ಜಾಗ ಬಹಳ ಹಸನಾದ ಜಾಗ ಇದು ನಮಗೆ ಬೇಕು ಅಂತ. ಸಾರ್, ಇದಕ್ಕೆಲ್ಲಾ ಕಾರಣ ಬೇರೆ ಏನೂ ಇಲ್ಲ. ಇದಕ್ಕೆಲ್ಲಾ ಕಾರಣ ಪರ್ಸನಲ್ ಗೈನ್ Lot of transaction had taken place in these deals. ಬಹುಶ: with due respect to our opposition leader, ಸಂಗ್ರಾಮ್, ಗಿಂಗ್ರಾಮ್ ಏನೂ ಇಲ್ಲ ಸಾರ್ ಇದರ ಮುಂದೆ. ಪಾಪದವನ ವಿಷಯ ತಂದು, ನಾವು ಇಲ್ಲಿ ಕುಳಿತುಕೊಂಡು ಆ ಇಶ್ಯೂವನ್ನು ಚರ್ಚೆ ಮಾಡಿ ಹೀರೋ ಮಾಡುತ್ತಿದ್ದೇವೆ. ನ್ಯಾಷನಲ್ ಲೆವೆಲ್‌ನಲ್ಲಿ ಆಗಿರುವಂತಹ ಸ್ಕ್ಯಾಂಡ್ ಅನ್ನು

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಈ ಯೋಜನೆಗೆ ಎಂ.ಓ.ಯು ಗೆ ಸಹಿಯಾಗುವ ದಿವಸ ಸಹಿಯಾಗುವುದಕ್ಕಿಂತ ಮುಂಚೆ ನಾನು ಹರಾಜ್ ಹಾಕಿದೆ, ಇದನ್ನು ಮುಟ್ಟಬೇಡ ಅಂತ. ಈಗ ಹೈಕೋರ್ಟ್, ಸುಪ್ರೀಂ ಕೋರ್ಟ್ ಎಲ್ಲಾ ರಕ್ಷಣೆ ಕೊಟ್ಟು ಎಲ್ಲಾ ಜಮೀನುಗಳನ್ನು ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು ಈ ಬಗ್ಗೆ ಸರ್ಕಾರ ಹೇಳಬೇಕು ಉತ್ತರ ಕೊಡುವ ಸಮಯದಲ್ಲಿ ಅವರು ಎಷ್ಟು ಪರಿಹಾರ ಕೊಟ್ಟಿದ್ದಾರೆ ಎಂದು ನಮ್ಮ ಕನ್‌ಸರ್ನ್ಸ್ ಇರುವುದು, ಮಾನ್ಯ ಮಾಧುಸ್ವಾಮಿಯವರು ಬಹಳ ರೆಲೆವೆಂಟ್ ಪಾಯಿಂಟ್ ಎತ್ತಿದ್ದಾರೆ. ಬಹಳ ಸುದೀರ್ಘವಾಗಿ ಮಾತನಾಡುತ್ತಿದ್ದಾರೆ. ನನ್ನ ಕನ್‌ಸರ್ನ್ಸ್ ಅಂದ್ರೆ ಅಭಿವೃದ್ಧಿಗೆ ನಾವು ಅಡ್ಡಿ ಮಾಡುವವರಲ್ಲ. ಆದರೆ ಅಗತ್ಯಕ್ಕಿಂತ ಹೆಚ್ಚು ಜಮೀನು ಕೊಡಬಾರದು ಎನ್ನುವುದು ನಮ್ಮ ಮೊದಲ ಅರ್ಗ್ಯುಮೆಂಟ್. ಎರಡನೆಯದು ಯಾವ ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತೀರಿ ಆ ರೈತನಿಗೆ ಸರಿಯಾದಂಥ ಬೆಲೆ ಸಿಗಬೇಕು. ಅವನಿಗೆ ಅನ್ಯಾಯವಾಗಬಾರದು. ಇದಕ್ಕೆ ನಾವು ಕನ್‌ಸರ್ನ್ಸ್ ಇದರ ಜೊತೆ ಜೊತೆಗೆ ಮಾನ್ಯ ಮಾಧುಸ್ವಾಮಿಯುವರು ಮಾತನಾಡುತ್ತಿರುವಂತಹ ಕಾಲದಲ್ಲಿ ಬೆಂಗಳೂರು ಸುತ್ತಮುತ್ತ ಬಿ.ಡಿ.ಎ.ಗೆ ನೀವು ತೆಗೆದುಕೊಂಡು ಎಲ್ಲಾ ಕೆಲಸಗಳನ್ನು ಮುಗಿಸಿ ಅಮೇಲೆ ನೀವು ಡೀನೋಟಿಫೈ ಮಾಡಿ, ಸಾವಿರಾರು ಕೋಟಿ ರೂಪಾಯಿಗಳ ಹಗಲು ದರೋಡೆ ಯಾಗಿರುವ ಬಗ್ಗೆ ಸಾರ್ವಜನಿಕರು ಮಾತನಾಡುತ್ತಿರುವುದರ ಬಗ್ಗೆ ನಾವು ದಾಖಲೆಗಳನ್ನು ಕೊಡುತ್ತೇವೆ. ತಾವು ಯಾವ ರೀತಿ ತನಿಖೆ ಮಾಡಿತುತ್ತೀರೋ ಮಾಡಿಸಿ. I am concerned about that. ರಾಜ್ಯದ ಅಭಿವೃದ್ಧಿಗೆ ನಾವು ಅಡ್ಡಿ ಮಾಡಬೇಕೆಂದು ಇಲ್ಲ. ಆದರೆ ರೈತರು ಸುಲಿಗೆಯಾಗಬಾರದು. ಅಲ್ಲಿ ನೀವು ಟೌನ್‌ಶಿಪ್ ಮಾಡಿದರೆ ಅಲ್ಲಿ ಎಷ್ಟರ ಮಟ್ಟಿಗೆ ನಮ್ಮ ಗ್ರಾಮೀಣ ಜನತೆಗೆ ಸೌಲಭ್ಯಗಳು ಸಿಗುತ್ತದೆ. ಆ ಬಗ್ಗೆ ಏನು ಯೋಚನೆ ಮಾಡಿದ್ದೀರಿ. ಹಾಗಾದರೆ ಕಣ್ಣು ಮುಚ್ಚಿ ಕೊಂಡು ಎಂ.ಓ.ಯು.ಗೆ ಸಹಿ ಮಾಡಿದಿರಾ? ಮುಂದಿನ ನೂರು ವರ್ಷಗಳ ನಿಮ್ಮ ಕಲ್ಪನೆ ಇರಬೇಕಲ್ಲಾ ಸಹಿ ಮಾಡುವಂತಹವರಿಗೆ. ಮೂರು ಸರ್ಕಾರಗಳು ಬಂದು ಹೋದವು. ಸಂಗ್ರಾಮ್ ಸಿಂಗ್ ಅಷ್ಟೇ-ಮುಖ್ಯ. ಅದೇ ರೀತಿ ಇಲ್ಲಿ ಜಮೀನು ಲೂಟಿ ಮಾಡುವುದು ಅಷ್ಟೇ ಮುಖ್ಯ. ಇದು ಒಂದಕ್ಕೊಂದು ಕಂಪೇರ್ ಮಾಡುವುದಕ್ಕೆ ಬರುವುದಿಲ್ಲ. ನರಹಂತಹ ವೀರಪ್ಪನ್‌ದ್ದು ಬೇರೆ ವಿಷಯ. ಸಂಗ್ರಾಮ್ ಸಿಂಗ್‌ದ್ದು ಬೇರೆ ವಿಷಯ. ಈ ನೆಲಗಳ್ಳತನದ್ದೇ ಬೇರೆ ವಿಷಯ. ನಾಳೆ ಚರ್ಚೆಯಾಗುವಾಗ ಈ ರಆಜ್ಯದ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡದೇ ಅವರು ಕಣ್ಣೀರಿಟ್ಟರೂ, ಈಗ ಆಲ್ಮಟ್ಟಿ ಅಣೆಕಟ್ಟು ತುಂಬುತ್ತಿದೆ ಅದಕ್ಕೆ ನೀರು ಬಿಡುತ್ತಿದ್ದೇವೆ, ಕಾಲುವೆ ಮಾಡಿ ಆ ಜಮೀನುಗಳಿಗೆ ನೀರು ಕೊಡುವಂತಹ ಯೋಗ್ಯತೆ ಇಲ್ಲ. ಆ ಕೆಲಸ ಪೂರ್ತಿ ಮಾಡಲಿಲ್ಲ. ಒಂದೊಂದು ಬೇರೆ ಬೇರೆ ವಿಷಯ. ಆದ್ದರಿಂದ ಆದ್ಯತೆ ಸಿಗಬೇಕು. ನಾವು ಇಷ್ಟು ಕಂತ ಶೋಷಣೆ ಮಾಡಿಕೊಂಡಿದ್ದಕ್ಕೆ ಪರಿಹಾರ ಏನು? ಅದಕ್ಕೆ ನಾನು ಪ್ರಾರಂಭದಲ್ಲಿ ಕೇಳಿದ್ದು, ನೀವು ಹೇಳಿದ್ದಿರಲ್ಲಾ ಜನತೆಯ ಮುಂದೆ ಇದಕ್ಕೊಂದು ಸ್ಪೆಷಲ್ ಕೋರ್ಟ್ ಮಾಡುತ್ತೇವೆಂದು, ಆದೇಶ ಮಾಡಿ ಕೊಡಿ ನಾಳೆ ಬೆಳಿಗ್ಗೆ ನಾವು ಎಲ್ಲಾ ವಿವರಗಳನ್ನು ಕೊಡುತ್ತೇವೆ. ಡಿಟೇಲ್ಸ್ ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್ ಇದು ಇನ್ನೂ ಎಲ್ಲಿಗೆ ಹೋಗುತ್ತೋ; ಈ ತಿಪ್ಪಗೊಂಡನಹಳ್ಳಿ ಬಗ್ಗೆ ಮಾತನಾಡುವಾಗ ನಾನು ಹೇಳಿದೆ. ತೋಟಗುಂಡನಹಳ್ಳಿ 76 ನಂಬರ್ ಮದನಾಯಕನಹಳ್ಳಿ ನಂಬರ್ 74ಅನ್ನು ಇವರು ಅಕ್ವಿಜಿಶನ್‌ಗೆ ಪ್ರೊಪೋಸ್ ಮಾಡಿದರು. ಅಡಿಕೆ ತೋಟವನ್ನು ಒಡೆದು ಜಮೀನು ತೆಗೆದುಕೊಂಡರು. Though there is a High Court

ban order. In one PIL ಮೇಲೆ ಹೈಕೋರ್ಟ್‌ನಲ್ಲಿ ಇಂಟರೀಯಂ ಆರ್ಡರ್ ಪೆಂಡಿಂಗ್ ಇದ್ದರೂ ಮಾಡುತ್ತಾರೆ There is a case against them in the High Court. ಈಗಲೂ ಇದೆ, ಅದು. ನಿಲ್ಲಿಸಲಿಲ್ಲ. ಜೆ.ಸಿ.ಬಿ. ತೆಗೆದುಕೊಂಡು ಹೋಗಿ ಅಡಿಕೆ ತೋಟವನ್ನು ಒಡೆದರು. ಏನು ಮಾಡುತ್ತೀಯೋ ಮಾಡಿಕೋ ಹೋಗು ಅಂತ ಹೇಳಿ. ರೈತರು ಬದುಕಬೇಕಾ ಸಾರ್ ಈ ರಾಜ್ಯದಲ್ಲಿ? ಕೋರ್ಟಿಗೆ ಹೋಗಿ ನಾವು ರೆಮಿಡಿ ಕೇಳಿ ಕೋರ್ಟ್‌ನವರು ಇಂಟರೀಯಂ ಆರ್ಡರ್ ನೀಡಿದರೂ ನಿಮಗೆ ಸಮಾಧಾನ ಇಲ್ಲ ಅಂದ್ರೆ ನಾವು ಎಲ್ಲಿಗೆ ಹೋಗಬೇಕು? ನನಗೆ ಅರ್ಥವಾಗುತ್ತಿಲ್ಲ. ತಾವು ನಿಲ್ಲಿಸಿ ಅಂತ ಹೇಳುತ್ತೀರಿ. I am concluding ಇದೆಲ್ಲಾ ಎಲ್ಲಿಗೆ ಹೋಗುತ್ತಿದೆ ಅಂದ್ರೆ ಯಾರನ್ನು ಬೇಕಾದರೂ, ಇಡೀ ದೇಶದಲ್ಲಿ ಸಿ.ಡಿ.ಪಿ.ಯಲ್ಲಿ ಪಾರ್ಕ್ ಎನ್ನುವುದನ್ನು ವೈಲೇಟ್ ಮಾಡಿ ಹೌಸಿಂಗ್ ಪರ್‌ಪಸ್‌ಗೆ ಅಕ್ವೈರ್ ಮಾಡಿರುವ ಇನ್ನೊಂದು ನಿದರ್ಶನವಿದ್ದರೆ ನಾವೇನು ಶಾಸಕಗಿರಿ ಮಾಡಬೇಕಾಗಿಲ್ಲ. ನಾವು ಹಳ್ಳಿಯಲ್ಲಿ ಬೇಸಾಯ ಮಾಡುವವರು ನಾವು ಇಲ್ಲಿಗೆ ಬಂದು ಮಿಂಚಬೇಕು ಎನ್ನುವ ಅಗತ್ಯವಿಲ್ಲ. ಮಿಂಚುವವರು ಮಿಂಚಿಕೊಳ್ಳಲಿ. ಈ ಸರ್ಕಾರ ಸಿ.ಡಿ.ಪಿ ಪ್ಲಾನ್‌ನಲ್ಲಿ ಪಾರ್ಕ್ ಎಂದು ಇರುವುದನ್ನು ಇವತ್ತು ಹೌಸಿಂಗ್ ಪರ್‌ಪಸ್‌ಗೆ ಒಂದಲ್ಲ ಎಂಟೈರ್ ಲಾಟ್ ಯಾರೋ ಹಿಂದೆ ಪುಣ್ಯಾತ್ಮರು ಪಾರ್ಕ್‌ಗಳಿಗೆ ಅಂತ ಪ್ಲಾನ್ ಮಾಡಿಕೊಂಡು ಬಂದಿದ್ದರು ಅದನ್ನೆಲ್ಲಾ ಕನ್‌ವರ್‌ಷನ್ ಮಾಡಿದ್ದರೆ. ಮಾಜಿ ಮಂತ್ರಿಗಳು ಅವರು ಇಲ್ಲ ಅಂತ ಹೇಳಲಿ? I will give records. ಸುಪ್ರೀಂಕೋರ್ಟ್ ಆದೇಶಕ್ಕೆ ವಿರುದ್ಧ ಹೋಗಿದ್ದಾರೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. It is against Supreme Court decision. ಇಷ್ಟೆಲ್ಲಾ ಮಾಡಿದರೂ ಬೆನಿಫಿಟ್ ಯಾರಿಗೆ? ಸಾರ್, ಎಲೆಕ್ಷನ್ ನೋಟಿಫಿಕೇಶನ್ ಆದ ಮೇಲೂ ಸಹ ಲ್ಯಾಂಡ್ ಅಕ್ವಿಜಿಶನ್ ಆಗಿದೆ, ಡೀ-ನೋಟಿಫಿಕೇಶನ್ ಆಗಿದೆ. when there was no Government absolutely. They were in the mercy of some....

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಈ ಸರ್ಕಾರ ಬಂದ ಮೇಲೂ ಆಗುತ್ತಿದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ದೇವೇಗೌಡ ಕಾಗದ ಬರೆದಿದ್ದಾರಲ್ಲಾ. 2400 ಎಕರೆ ಜಮೀನು ನನಗೆ ಗೊತ್ತಿಲ್ಲದಂತೆ ಅಕ್ವೈರ್ ಮಾಡಿದ್ದೀರಿ ಅಂತ. ನಾನು ತಮಗೆ ಲೆಟರ್ ಕಳುಹಿಸಿಕೊಡುತ್ತೇನೆ. He has stated in his letter. ನನ್ನ ಗಮನಕ್ಕೆ ಬರದಂತೆ 2400 ಎಕರೆ ಜಮೀನನ್ನು ಬೆಂಗಳೂರು ಸುತ್ತ ನೀವು ಪರ್‌ದರ್ ಅಕ್ವಿಜಿಶನ್ ಮಾಡುತ್ತಿದ್ದೀರಿ it has to be stoped and relevant records ನನಗೆ ಕೊಡಿ ಅಂತ ಒಂದು ಮೂರು ಪೇಜ್ ನೋಟನ್ನು ಅವರು ಅವರ ಸೆಕ್ರೆಟರಿಗೆ ಕೊಟ್ಟಿದ್ದಾರೆ. ಈಗಲೂ ಆಗುತ್ತಿದೆ. ಅದು ನಿಂತಿಲ್ಲ. ಹೌಸಿಂಗ್ ಪರ್‌ಪಸ್‌ಗೆ ಪಾರ್ಕ್‌ಗಳನ್ನು ಕನ್‌ವರ್ಟ್ ಮಾಡುತ್ತಿದ್ದಾರೆ. ತಾವು ಏನಾದರೂ ಈ ಶಾಸನ ಸಭೆಯಿಂದ ಒಂದು ಸೂಚನೆ ಕೊಟ್ಟು ನಿಲ್ಲಿಸದೇ ಹೋದರೆ another 35,000 acres of land will be acquired for some individual gain. ನಾನು ಸ್ಪಷ್ಟವಾಗಿ ಚಾರ್ಜ್ ಮಾಡುತ್ತಿದ್ದೇನೆ. 35 ಸಾವಿರ ಎಕರೆ ಜಮೀನನ್ನು ಪರ್‌ದರ್ ಅಕ್ವೈರ್ ಮಾಡು ಯಾರ್‍ಯಾರೊ ಹಂಚಿಕೊಳ್ಳಬೇಕೆಂಬ ಹುನ್ನಾರ ನಡೆಯುತ್ತಿದೆ. ಅದಕೋಸ್ಕರ ಎಂಟೈರ್ ಸಇ.ಡಿ.ಪಿ. ಪ್ಲಾನ್ ಅನ್ನು ಕುಳಿತುಕೊಂಡು ವೈಲೇಟ್ ಮಾಡಿ ಇವತ್ತು ಅದನ್ನೆಲ್ಲಾ ಕನ್‌ವರ್ಟ್ ಮಾಡಿ ಇಂಡಷ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಮುಖಾಂತರ ನಮಗೆ ಕೊಡಿ ಅಂತ ಮಾಡಿಸುತ್ತಿದ್ದಾರೆ. Where will we land up? ಎಲ್ಲಿಗೆ ಹೋಗಿ ನಿಲ್ಲುತ್ತದೆ

ಬೆಂಗಳೂರು? ಅದನ್ನು ಯಾರಿಗೆ ಬೇಕಾದರೂ ಕನ್‌ವೇ ಮಾಡಬಹುದು. ನೈಸ್ ಕಂಪನಿಯವನಿಗೆ ಪೆರಿಫೆರಿಯಲ್ ರೋಡನ್ನು ಕೊಟ್ಟು ಈ ಕಡೆಯಿಂದ ಯಾರಿಗಾದರೂ ಕೊಡಬಹುದು ಸಾರ್ ಇವತ್ತು. ಇದರ ಮೇಲೆ ಒಂದು ಥರೋ ಎನ್‌ಕ್ವೈರಿ ಆಗಲೇಬೇಕು. ಈಗ ಅವರು ಹೇಳಿದ್ದಾರೆ. I am prepared to quit ಎಂದು ನನಗೆ ಸಂಬಂಧವಿಲ್ಲ. ನಾನು ಆವತ್ತು ಬಾಯಿ ತಪ್ಪಿ ಅವರ ಹೆಸರನ್ನು ತೆಗೆದುಕೊಂಡಿದ್ದಾರೆ ರಿಗ್ರೇಟ್ ಎಕ್ಸ್‌ಪ್ರೆಸ್ ಮಾಡಿದಂತಹ ಮನುಷ್ಯ. ಇವತ್ತು ಬಹಳ ಹುಷಾರಾಗಿ ಅವರ ಹೆಸರು ತೆಗೆದುಕೊಂಡು ನಾನು ಭಾಷಣ ಮಾಡಿದ್ದೇನೆ ನೋಟಿಸ್ ಕೊಟ್ಟಿಲ್ಲ. Still when he prefers that, better he prefers some enquiry. If he come out for an enquiry, if he is prepared for the coming out of the truth, nothing prevents the member. Let him openly say that he is prepared for the CBI enquiry for all the deeds he has done as Minister. If he is right, we will apreciate. If he has done something wrong, let him regret. He is senior to me ನನಗೆ ಅವರೊಬ್ಬರು ವೆಲ್‌ವಿಷರ್ ನಾನು ಅವರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಭಾಷಣ ಮಾಡಿಲ್ಲ. I always say he is my good friend. But, I can not tolerate this torture to the poor people of Karnataka. That is my concern as a opposition member. That is my desire. ನಾನು ಈ ಸಭೆಗೆ ಬರಲಿಕ್ಕೆ ನಾವು ಹಳ್ಳಿಯಿಂದ ಬಂದಿರುವವರು ಸಾರ್. ಇಲ್ಲಿ ನಾವೆಲ್ಲಾ ಮಾತನಾಡುತ್ತಿದ್ದೆವು ಏನು ಇಷ್ಟೊಂದು ಮಾತನಾಡುತ್ತಿದ್ದೀರಿ, ಒಬ್ಬೊಬ್ಬ ಎಂ.ಎಲ್.ಎ.ಗೆ ಒಂದೊಂದು ಸೈಟ್ ಕೊಡಲಾರದ ಸರ್ಕಾರ ಇಷ್ಟೊಂದು ಲ್ಯಾಂಡ್ ಅಕ್ವೈರ್ ಮಾಡಿದ್ದಾರಾ ಅಂತ. ಯಾರಾದರೂ ಹಾಗೆ ಅಂದು ಬಿಟ್ಟರೆ ಮರ್ಯಾದೆ ಹೋಗುತ್ತದೆಯಪ್ಪಾ ಅದಕೋಸ್ಕರ ಭಾಷಣ ಮಾಡುತ್ತೇವೆಂದು ಆಗುತ್ತದೆಂದು ನಾನು ಹೇಳಿದೆ. ನಾನು ಆಶ್ರಯ ಸಮಿತಿಯಲ್ಲಿ ಕುಳಿತುಕೊಂಡು ಸೈಟ್ ಕೊಡುವುದಕ್ಕೆ ಆಗಲಿಲ್ಲ. ಇಷ್ಟೊಂದು ಹಗರಣ ಮಾಡಿ ಇದಕ್ಕೇನು ಮಿತಿ ಬೇಡವೇ? ಕೋರ್ಟ್‌ಗಳ ಆದೇಶಗಳ ಪಾಲನೆ ಇಲ್ಲ. ಅಲೈನ್‌ಮೆಂಟ್ ಅನ್ನು ಚೇಂಜ್ ಮಾಡುವುದು. ಎಲ್ಲೆಲ್ಲಿ ಬೇಕು ಅಲ್ಲಲ್ಲಿ ಚೇಂಜ್ ಮಾಡವುದು The entire thing ನನಗೆ ಗೊತ್ತು ಸಾರ್. he will be the happiest man on earth ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ನವರು ಕೆಲಸ ನಿಲ್ಲಿಸಿ ಅಂತ ಹೇಳಿದರೆ ಅವರಷ್ಟು ಸಂತೋಷ ಪಡುವವರು ಯಾರೂ ಇಲ್ಲ ಇವತ್ತು. ಏಕೆ? he knows ನೀವೇನು 7 ರಿಂದ 5 ಸೆಟ್‌ಲೈಟ್ ಟೌನ್‌ಶಿಫ್ ಟೌನ್‌ಗಳನ್ನು ಹೊರಗಡೆ ಕಟ್ಟಿ ಅಂತ ನೀವು ಏನಾದರೂ ಇಂಪೋಜಿಷನ್ ತಂದರೆ ಅವರಿಗೆ ವರ್ಕ್‌ಔಟ್ ಆಗುವುದಿಲ್ಲ. ಅದನ್ನೆಲ್ಲಾ ಒಂದು ಸಾವಿರ ಹೆಕ್ಟೇರ್, 4–5 ಸಾವಿರ ಹೆಕ್ಟೇರ್ ಎಕರೆನಲ್ಲಿ ಒಂದೊಂದು ಹ್ಯಾಬಿಟೇಶನ್‌ಗೆ ಒಂದೊಂದು ಸೆಟಲೈಟ್ ಟೌನ್‌ಗೆ ಪ್ಲಾನ್ ಮಾಡಿದ್ದನ್ನು 400 ಎಕರೆಗೆ ರೆಡ್ಯೂಜ್ಸ ಮಾಡಿದ್ದಾರೆ. They have reduced it to 400 acres to see that so much amount of land is acquired in and around Bangalore. ನೀವು ಇಲ್ಲಿಂದ ಮದ್ದೂರು ಮಾಗಡಿಯಿಂದ ಮುಂದೆ ಹೋಗಬೇಕಾಗಿತ್ತಲ್ಲಾ ನೀವು ರಾಮನಗರದವರೆಗೆ ಅಲ್ಲಿ ಎಲ್ಲಾ ಜಾಗದ ವಿಸ್ತೀರ್ಣವನ್ನು ಇವರು ಕಡಿಮೆ ಮಾಡಿಕೊಮಡು ಬಂದಿರುವುದು. ಏಕ ಒರಿಜಿನಲ್ ಪ್ಲಾನ್‌ನಲ್ಲಿರುವಷ್ಟು ಜಮೀನು ಅಕ್ವೈರ್ ಆಗಬೇಕು. ಅಲ್ಲಿ ಆಗುವುದು ನಿಲ್ಲಬೇಕಲ್ಲಾ 'No, no. In accordance with the object, we have acquired land. ಎಂದು

ಹೇಳಬಹುದಲ್ಲಾ, ಈ ಫೆರಿಫೆರಲ್ ರೋಡ್, ಲಿಂಕ್ ರೋಡ್ ಇವರ ವ್ಯವಹಾರವೇ ಅಲ್ಲ. That is the business of the BDA or the Corporation. ಅವರು ಎಲ್ಲೆಲ್ಲಾದರೂ ಹುಡುಕಿಕೊಂಡು ಲಿಂಕ್ ಕೊಟ್ಟುಕೊಳ್ಳುವವರು, ಈ ಕಲ್ಯಾಣಿ ಗ್ರೂಪ್‌ನವರನ್ನು ಇಲ್ಲಿಗೆ ಏಕೆ ತಂದಿರಿ ಎಂಬುದು ಗೊತ್ತಾಗಲಿಲ್ಲ. ಈ ಕಂಪನಿ ಎಸ್ಟೇಟ್ ಬಿಸಿನೆಸ್ ಮಾಡುವುದು ಬಿಟ್ಟರೆ, ರೋಡ್ ಮಾಡುವುದಕ್ಕಲ್ಲ, ಆ ಎಸ್ಟೇಟ್ ಬಿಸಿನೆಸ್‌ಗೆ ಪಾರ್ಟನ ಯಾರ್‍ಯಾರು ಎಂಬುದು ಗೊತ್ತಾಗಬೇಕು. ಅದಕ್ಕೆ ನಾಣು ಇಲ್ಲಿ ಹೇಳಿದೆ, ನಮ್ಮಲ್ಲಿ ಎಂಒಯುಗೆ ಸೈನ್ ಮಾಡುವವರು, ಫ್ರೇಂವರ್ಕ್ ಅಗ್ರಿಮೆಂಟ್‌ನಲ್ಲಿ ಕುಳಿತುಕೊಂಡು ಸರ್ಕಾರದ ಪರವಾಗಿದ್ದ ಪಿಡಬ್ಲ್ಯುಡಿ ಕಾರ್ಯದರ್ಶಿ ಇವತ್ತು ಅವರು ಪೇರೋಲ್‌ನಲ್ಲಿದ್ದಾರೆ. ನಮ್ಮಲ್ಲಿದ್ದ ಸನ್ಮಾನ್ಯ ವಿಶ್ವನಾಥ್ ಎನ್ನುವ ಅಧಿಕಾರಿಗಳು ಅವರಿಗೆ ಕನ್ಸಲ್ಟೆಂಟ್ ಆಗಿದ್ದಾರೆ, ನಮ್ಮಲ್ಲಿದ್ದ ವೆಂಕಟರಾಮನ್ ಎನ್ನುವವರು, ಮುಂದಿನ ತಿಂಗಳು ರಿಲೀವ್ ಆದ ತಕ್ಷಣ ಆ ಕಂಪನಿಗೆ ಸೇರಿಕೊಳ್ಳುತ್ತಾರೆ. ಹಾಗಾದರೆ ಅಲ್ಲಿಗೆ ಹೋಗುತ್ತೇವೆ ಎನ್ನುವ ಉದ್ದೇಶದಿಂದ ಇಲ್ಲಿ ಫೇವರ್ ಮಾಡಿದ್ದಾರೆಂದು ನಾನು ಹೇಳುತ್ತಿದ್ದೇನಲ್ಲಾ, I am prepared to charge. They have shown favouritism as officers of this State to join that company. ಅಧ್ಯಕ್ಷರೆ, ಸೀದಾ ಅಲ್ಲಿಗೆ ಹೋಗಿ ಸೇರಿಕೊಂಡಿದ್ದಾರೆ, ಸರ್ಕಾರದ ಸೇವೆ ಮುಗಿಯಿತು, ಆ ಕಂಪನಿಯ ಕನ್ಸಲ್ಟೆಂಟ್ಸ್, ಎಂಪ್ಲಾಯರ್ಸ್ ಅಥವಾ ಪಾರ್ಟನರ್ಸ್ ಆಗಿ ಸೇರಿಕೊಂಡಿ ಬಿಟ್ಟಿದ್ದಾರೆ, ಇದರ ಜೊತೆಗೆ the then Chief Secretary of Karnataka, Oh God, ನನಗೆ ಮಾತನಾಡುವುದಕ್ಕೆ ತಾವು ಅಲೋ ಮಾಡಬೇಕಾಗಿತ್ತು, ಮೀಟಿಂಗಳಲ್ಲಿ ಡೈರೆಕ್ಟ್ ಮಾಡುತ್ತಾರೆ, Every decision is in the Company's favour; every decision. ಸರ್ಕಾರದ ಪರವಾಗಿ ಆಗೇ ಇಲ್ಲ, ಎಲ್ಲಾ ಡಿಸೀಷನ್ಸ್, `Do this, that, that.' ಗೊತ್ತಲ್ಲಾ, ಆ Style of functioning. ಎಲ್ಲಾ ಡಿಸಿಷನ್, where he has chaired the meeting, all the decisions of those meetings are in favour of the company. Why? what is his asset in Bangalore to-day? Let them come out with some figures. ಬೆಂಗಳೂರು ನಗರದಲ್ಲಿ ಇವರ ಸ್ವತ್ತುಗಳು ಎಷ್ಟಿವೆ ಎಂದು ದಯಮಾಡಿ ಇಲ್ಲಿ ರಿವೀಲ್ ಆಗಲಿ, ಭಾಷಣವನ್ನು ಯಾರು ಬೇಕಾದರೂ ಮಾಡಬಹುದು ನಾವು ಬೇಕಾದರೆ ಮಾಡುತ್ತೇವೆ, ಇದು ಯಾರದ್ದು, ಎಲ್ಲಿಂದ ಬಂತು? Let them come out with the assets in Bangalore City. Is he not accountable for the State? ಈ ಸ್ವತ್ತು ಎಲ್ಲಿಂದ ಬಂತು, ಯಾರಿಂದ ಬಂತು ಹೇಗೆ ಬಂತು ಎಂಬುದರ ವಿವರ ಇಲ್ಲಿ ಕೊಡಬೇಕು. ಎಲ್ಲರೂ ನಂಬರ್ 1, 2, 3 ಯಿಂದ ಹಿಡಿದು ರಾಜ್ಯವನ್ನು ಹೀಗೆ ಮಾರಿಬಿಟ್ಟು, ನಮ್ಮನ್ನಲ್ಲಾ ಹೋಗಿ ಬೆತ್ತಲೆಯಾಗಿ ನಿಲ್ಲಿಸಬೇಕೆಂದರೆ, ಸರ್ಕಾರ ನಡೆಸಿದ್ದೇವೆಂದು ಮಾತನಾಡುವುದಕ್ಕಾಗುತ್ತದೆಯೇ? ತಾವು ಮಾತನಾಡುವುದಕ್ಕೆ ಇಷ್ಟೊಂದು ಮಾನ್ಯ ಅಧ್ಯಕ್ಷರು ಕೊಟ್ಟಿದ್ದೀರಿ, ಇನ್ನ ಸಣ್ಣ ವಿಷಯ ಅದು ಏಟ್ರಿಯಾ ಹೋಟಲ್ ಬಗ್ಗೆ ನಾನು ಮಾತನಾಡಲೇಬೇಕಾಗಿದೆ. ಇಲ್ಲಿ ದೊಡ್ಡ ಕೃತ್ಯ ಇಲ್ಲಿ ನಡೆದಿದೆ. ಸರ್ಕಾರಿ ಜಾಗವನ್ನು ದಿವಾನರ ಕಾಲದಿಂದ ಹಿಡಿದು, ಪಾಪ, ಇಲ್ಲಿ ಹರೀಶ್‌ಗೌಡರು ಎಷ್ಟು ಒಳ್ಳೆಯ ಅಧಿಕಾರಿಗಳು ಇಲ್ಲಿ ಕುಳಿತಿದ್ದಾರೆ, One has to pat those officers who take risk and do that job rightfully. ಸರ್ಕಾರಿ ಜಾಗವನ್ನು ಅಕ್ವೈರ್ ಮಾಡಿಕೊಂಡಿದ್ದಲ್ಲದೆ, ಸರ್ಕಾರಿ ಕಟ್ಟಡ ಕಟ್ಟುವುದಕ್ಕೆ ಹೋದರೆ ಸರ್ಕಾರಕ್ಕೆ ನೊಟಿಸ್ ಕೊಡುವಂತಹ ಸ್ಥಿತಿ ಕರ್ನಾಟಕದಲ್ಲಿ ನಿರ್ಮಾಣವಾಗಿದೆ, where there is no rightful ownership. ಸರ್,

ದಿವಾನರ ಕಾಲದಿಂದ, he has rightly written ಅವರೇನು ಸಾವಿರದೊಂಬೈನೂರ ಚಿಲ್ಲರೆ ಇಸವಿಯಲ್ಲಿದ್ದರು, ಆವತ್ತಿದ್ದ ದಿವಾನ್ ಶೇಚಾದ್ರಿ ಐಯ್ಯರ್, ಈ ದಿವಾನರ್ ಹೆಸರಿಗಲ್ಲ ಅದಾಗಿರುವುದು, ಗೌರ್ನಮೆಂಟ್‌ಗೆ ಜಾಗಕೊಟ್ಟಿದ್ದನ್ನು ಅವರ ವಂಶಸ್ಥರದ್ದೆಂದು ದುರುಪಯೋಗ ಮಾಡಿಕೊಂಡು ಇವತ್ತು ಉಪಯೋಗ ಮಾಡಿಕೊಂಡಿದ್ದಾರೆ, It is the government's land. ಕಾರ್ಪೊರೇಷನಲ್ಲಿ ಫೇಕ್ ಆಗಿ ಎಂಟ್ರಿ ಮಾಡಿ, ಈ ವಿಧಾನಸೌಧದ ಎದುರಗಡೆಯ ಜಾಗವನ್ನು ತಿಂದು ಹಾಕಿದ್ದಾರೆ ಕೆ.ಆರ್. ಸರ್ಕಲ್ ಮತ್ತು ವಿಧಾನಸೌಧ ನಡುದೆ ಇದ್ದ 20 ಚಿಲ್ಲರೆ ಎಕರೆ ಸರ್ಕಾರಿ ಜಮೀನು ಇವತ್ತು ಯಾರದ್ದೋ ಸ್ವತ್ತಾಗಿದೆ, ನಾವೇನು ಇಲ್ಲಿ ಸರ್ಕಾರ ನಡೆಸಲೇ ಇಲ್ಲವೇ? ಸರ್ಕಾರಗಳೇ ನಡೆದಿಲ್ಲವೇ? The then Chief Secretary Sri Shankaranarayanan, such a respectful man in involved in this. He was the DC when the titles were transferred without registration. ಮಿನಾಕ್ಷಿ ಎಂಬುವರಿಗೆ ಜಾಗ ಹೇಗೆ ವರ್ಗವಾಯಿತೋಗೊತ್ತಿಲ್ಲ. The entire area of 4-22 Acres where the Atria Hotel stands today is a government property. ಸರ್ಕಾರ ನಡೆಸುವವರು ನಾವು ಅಲ್ಲಿ ಮೀಟಿಂಗ್ ಮಾಡುತ್ತೇವೆ, We take his blessing. We take his courteousness. ಹಾಗಾದರೆ ಇಲ್ಲಿ ನಮ್ಮ ಅಧಿಕಾರಿಗಳೇಕೆ ಇರಬೇಕು? ಒಬ್ಬ ಅಧಿಕಾರಿ ಈ ಜಾಗದ ಬಗ್ಗೆ ಡಿಸ್ಪೂಟ್ ಇದೆ, ಇದು ಸರ್ಕಾರಕ್ಕೆ ಸೇರಿದ್ದು ಎಂದರೆ, ಸರ್ಕಾರ ನಡೆಸುವವರು ಅಲ್ಲಿ ಹೋಗಿ ನಾವು ಪಾರ್ಟಿ ಮಾಡುತ್ತೇವೆಂದರೆ, what is the protection given to the officer who has raised the issue? ತಾವು ನಾಳೆ ನಾಡಿದ್ದು ಇಲ್ಲಿ ಕುಳಿತಿದ್ದರೆ ಇದನ್ನೇ (ವಿಧಾನ ಸೌಧ) ಇವರು ಹಿಂದೆ ಯಾರಿಗಾದರು ಮಾರಿಕೊಂಡಿದ್ದಾರೋ ಇಲ್ಲವೋ ಗೊತ್ತಾಗುವುದಿಲ್ಲ. ಈ ವಿಧಾನಸೌಧ ನಮ್ಮ ಪೋಸಿಷನಲ್ಲಿ ಇದೆಯಾ, ಅಥವಾ ಯಾವತ್ತಾದರೂ ಕಾರ್ಪೋರೇಷನ್ ರೆಕಾರ್ಡ್‌ನಲ್ಲಿ ಇನ್‌ಕಾರ್ಪೊರೇಟ್ ಆಗಿ ಹೋಗಿ ಕೇಳದಂತೆ ಸಮ್ಮನಿದ್ದಾರಾ ಎಂದು ಯೋಚನೆ ಮಾಡುವ ಸ್ಥಿತಿಗೆ ನಾವು ಬಂದಿದ್ದೇವೆ. ವಿಧಾನಸೌಧ ಮುಂದುಗಡೆ ಇರುವ ಕೆಪಿಎಸ್‌ಸಿ ಹಿಂದುಗಡೆ ಇರುವ ಜಾಗವನ್ನು ಯಾರೋ ಖಾತೆ ಮಾಡಿಸಿಕೊಂಡಿದ್ದಾರೆಂದರೆ, ಇದನ್ನು ಏಕೆ ಮಾಡಿಸಿಕೊಳ್ಳಬಾರದು? ಆಮೇಲೆ he may claim rent. ನನಗೆ ಇಷ್ಟು ಬಾಡಿಗೆ ಕೊಡಬೇಕಾಗಿದೆ, ಅದು ನನ್ನ ಸ್ವತ್ತು ಎಂದು ಕೇಳಿದರೂ ಕೇಳಬಹುದು. ಅದಕ್ಕೋಸ್ಕರ ನಾವು ಇಲ್ಲಿ ಯಾರನ್ನೋ ವಿಂಡಿಕ್ಟ್ ಮಾಡುವುದಕೋಸ್ಕರ ಮಾತನಾಡಿಲ್ಲ, ರಾಜ್ಯಕ್ಕೆ ಗುರುತರವಾದ ಅಪರಾಧವಾಗಿದೆ, ಈ ರಾಜ್ಯದ ರೈತರಿಗೆ ಅದರಲ್ಲೂ ಬಡವರಿಗೆ ಬೆಂಗಳೂರು ಸುತ್ತಮುತ್ತಲಿನ ದಲಿತರಿಗೆ, ಬಕರ್‌ಹುಕ್ಕುಂ ಜಮೀನು ಮಾಡುತ್ತಿದ್ದವರಿಗೆ, ಆಶ್ರಯ ಜಮೀನಿನಲ್ಲಿದ್ದವರಿಗೆ, ಯಾರು ನಿಜವಾಗಿ ಆ ಮಾಲೀಕರಿದ್ದರೋ ಅವರಿಗೆ ದೊಡ್ಡ ಎಕ್ಸಾಪ್ಲಾಯಿಟೇಷನ್ ಮಾಡಿರುವವರ ವಿರುದ್ಧ, I demand a C.B.I enquiry ನಿಜವಾಗಿ ಯಾರಿಗಾದರೂ ನಾನು ಮಾಡಿಲ್ಲವೆಂದು ಹೇಳುವ ಧಮ್ ಇದ್ದರೆ, they must come out openly for the enquiry. That is the morale. ನನಗೆ ಚಾಲೆಂಜ್ ಮಾಡುವುದಲ್ಲ, moralist they must challenge to facce an enquiry. ಅಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಮಾನ್ಯ ಅಶೋಕ್‌ರವರು ಮೊದಲು ಮಾತನಾಡಲಿ ಏಕೆಂದರೆ, ಅವರ ಪಕ್ಷದ ಅಧ್ಯಕ್ಷರು ಬರುತ್ತಾರಂತೆ, ಇವರ ಕ್ಷೇತ್ರಕ್ಕೆ ಹೆಚ್ಚು ಈ ವಿಚಾರ ಸಂಬಂದಿಸಿದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಚರ್ಚೆಯನ್ನು ನಾಳೆ ಮುಂದುವರೆಸುವ ಹಾಗಿದ್ದರೆ ಮಾತನಾಡಲಿ ನನ್ನದೇನೂ ತಕರಾರಿಲ್ಲ.

†**ಶ್ರೀ ಆರ್. ಅಶೋಕ್(ಉತ್ತರಹಳ್ಳಿ)** : ಮಾನ್ಯ ಅಧ್ಯಕ್ಷರೇ, ಎರಡು ಸಲ ಸದಸ್ಯನಾಗಿ ಆರಿಸಿ ಬಂದು ಇಲ್ಲಿದ್ದೇನೆ, ಕಾರಿಡಾರ್ ರಸ್ತೆ ಯೋಜನೆ ಪ್ರಾರಂಭವಾಗಿದ್ದೇ ನನ್ನ ಕ್ಷೇತ್ರದಲ್ಲಿ. ಈ ಕಾರಿಡಾರ್ ರಸ್ತೆ ಪ್ರಾರಂಭವಾದಾಗಿನಿಂದ ಒಂದು ರೀತಿಯ ಶನಿಕಾಟ ಈ ರಾಜ್ಯಕ್ಕೆ ಪ್ರಾರಂಭವಾಗಿದೆ. ಕಳೆದ ವಿಧಾನಸಭೆಯಲ್ಲೂ ಕೂಡ ನಾನು ಮತ್ತು ಮಾಜಿ ಶಾಸಕರಾದ ಸುರೇಶ್‌ಕುಮಾರ್ ಈ ಕಾರಿಡಾರ್ ರಸ್ತೆ ಬಗ್ಗೆ ಪ್ರಶ್ನೆ ಮಾಡಿದ್ದೆವು, ನಾವಷ್ಟೇ ಅಲ್ಲ, ಸಾಕಷ್ಟು ಸಂಘಸಂಸ್ಥೆಗಳು, ಪರಿಸರವಾದಿಗಳು ಈ ರಸ್ತೆಯಾಗಬಾರದು, ಇರುವ ರಸ್ತೆಯನ್ನು ನಾಲ್ಕು ಪಥವನ್ನಾಗಿ ಮಾಡಬೇಕು, ಇರುವ ರೈಲ್ವೆ ಲೈನ್ ಅನ್ನು ಡಬಲ್ ಲೈನ್ ಆಗಿ ಮಾಡಬೇಕು ಹೀಗೆ ನಾನಾ ಸಲಹೆಗಳನ್ನು ಕೊಟ್ಟಿದ್ದೇವೆ ನಾನು ಇವತ್ತೇನು ಈ ಪ್ರಶ್ನೆಯನ್ನು ಕೇಳುತ್ತಿಲ್ಲ, ಅಂದು ಅಂದಿನ ಮುಖ್ಯಮಂತ್ರಿಗಳಾದ ದಿ: ಜೆ.ಹೆಚ್. ಪಾಟೀಲರು ನನ್ನ ಕ್ಷೇತ್ರದಲ್ಲಿ ಅದನ್ನು ಪ್ರಾರಂಭ ಮಾಡಿದಾಗಲೂ ನಾನು ಬಹಿಷ್ಕಾರ ಮಾಡಿದೆ, ಅವತ್ತೇ ಅದಕ್ಕೆ ನಾನು ವಿರೋಧ ವ್ಯಕ್ತ ಮಾಡಿದೆ. ಏಕೆಂದರೆ, ಇದರಿಂದ ನಮ್ಮ ರೈತರಿಗೆ, ಅನ್ಯಾಯಾವಾಗುತ್ತದೆ, ದ್ರೋಹವಾಗುತ್ತದೆ ಎನ್ನುವ ದೃಷ್ಟಿಯಿಂದ ಅಂದು ನಾನು ವಿರೋಧ ಮಾಡಿದ್ದೆ. ನಮ್ಮ ಮಾಜಿ ಮಂತ್ರಿಗಳು, ನಾವು ಯಾವುದನ್ನೂ ಬಿಟ್ಟಿಲ್ಲ ಹಾಗೆ ಹೀಗೆಂದು ಹೇಳಿದರು. ನಾನು ಯಾರ ಮೇಲೂ ವ್ಯಯಕ್ತಿಕವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಹಿಂದಿನ ಸರ್ಕಾರದಲ್ಲಿ ಹಿಂದಿನ ಲೋಕೋಪಯೋಗಿ ಇಲಾಕೆಯ ಕಾರ್ಯದರ್ಶಿಗಳಾದ ಶ್ರೀ ಎಲ್. ನೇಗಿಯವರು ನವೆಂಬರ್ 13,2003 ಒಂದು ಪತ್ರ ಬರೆಯುತ್ತಾರೆ, ಅದೇನೆಂದರೆ, ಭೂಸ್ವಾಧೀನಕ್ಕೆ ಅಧಿಸೂಚನೆಯನ್ನು ಹೊರಡಿಸುವುದು ನಂತರ ಕೆಲವು ಜಮೀನುಗಳನ್ನು ಅಧಿಸೂಚನೆಯಿಂದ ಕೈಬಿಡುವುದು ಇದರ ಮರ್ಮವೇ ನನಗೆ ಅರ್ಥವಾಗುತ್ತಿಲ್ಲ, ಇದರ ಬಗ್ಗೆ ನಮಗ್ರ ತನಿಖೆಯ ಅಗತ್ಯವಿದೆ. ಇದನ್ನು ನಾವು ವಿರೋಧಪಕ್ಷದವರು ಹೇಳುತ್ತಿಲ್ಲ, ಸರ್ಕಾರ ಹೇಳುತ್ತಿರುವುದು. ಕರ್ನಾಟಕದ ನ್ಯಾಯಾಲಯದಲ್ಲಿ ಈ ಪ್ರಕಾರಣ ವಿಚಾರಣೆಗೆ ಬಂದಾಗ ಕೆಐಎಡಿಬಿ ನ್ಯಾಯಾಲಯದ ಮುಂದೆ ಒಂದು ಹೇಳಿಕೆಯನ್ನು ನೀಡಿ ಭೂಸ್ವಾಧೀನ ಪ್ರಕ್ರಿಯೆ ಮತ್ತು ಡಿನೋಟಿಫೀಕೇಷನ್ ಪ್ರಕ್ರಿಯೆಯಲ್ಲಿ ಯಾವುದೇ ಪ್ರಭಾವಿ ವ್ಯಕ್ತಿಗಳಿಗೆ ಪುರಸ್ಕಾರ ನೀಡಿಲ್ಲ, ತಾರತಮ್ಯ ಎಸಗಿಲ್ಲವೆಮದು ಹೇಳಿದೆ, ಆದರೆ ಹದಿನೆಂಟು ಎಕರೆ ನಾಲ್ಕು ಗುಂಟೆ ಜಮೀನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವುದು ಸ್ಪಷ್ಟವಾಗಿ ತಾರತಮ್ಯದಿಂದ ಕೂಡಿದೆ ಮತ್ತು ಉಚ್ಚನ್ಯಾಯಾಲಯಕ್ಕೆ ನೀಡಿದ ಹೇಳಿಕೆಯ ಉಲ್ಲಂಘನೆಯಾಗಿದೆ. ಈ ಸರ್ಕಾರ ಜನರಿಗೆ ಮಾತ್ರವಲ್ಲ ನ್ಯಾಯಾಲಯಕ್ಕೂ ಮೋಸ ಮಾಡುವಂತಹ ಒಂದು ವ್ಯವಸ್ಥಿತ ಪಿತೂರಿ ಇದಾಗಿದೆ. ಅವರು ಇನ್ನೂ ಮುಂದುವರೆದು ಏನು ಹೇಳುತ್ತಾರೆಂದರೆ, ಕೆಐಎಡಿಬಿ ಕಾಯಿದೆ 28(4) ಸೆಕ್ಷನ್ ಅಡಿಯಲ್ಲಿ ಹೊರಡಿಸಲಾದ ಅದಿ ಸೂಚನೆಗಳಲ್ಲಿ ಅನೇಕ ನ್ಯೂನ್ಯತೆಗಳಿದ್ದು ಶೇಕಡ 65 ರಷ್ಟು ಅಧಿಸೂಚನೆಗಳು ಮಾರ್ಪಾಡುಗಳಾಗಬೇಕಾಗಿದೆ ಇದು ಖಂಡಿತವಾಗಿ ಸರ್ಕಾರಕ್ಕೆ ಗೌರವ ತರುವಂಥದ್ದು ಆಗಿಲ್ಲ. ಸರ್ಕಾರದ ಸೆಕ್ರೆಟರಿ ಹೇಳಿರುವುದು ಅಂದರೆ ಇಲ್ಲಿ ಕೆಲವರಿಗೆ ಇರಬಹುದು ನಾವೇನೂ ಡೀನೋಟಿಫೈ ಮಾಡಿಲ್ಲ ಅಂತ. ಆದರೆ ಸರ್ಕಾರದ ಅಧಿಕಾರಿ ಹೇಳುತ್ತಾರೆ ಇದರ ಹಿಂದೆ ಮರ್ಮ ಇದೆ ಅಂತ, ನನ್ನ ಪ್ರಶ್ನೆ ಇದೆ ಅಧ್ಯಕ್ಷರೇ. ಇದೊಂದೇ ಅಲ್ಲ, ಹೈಕೋರ್ಟ್ ಸಹ ಇವರಿಗೆ ಛೀಮಾರಿ ಹಾಕಿದೆ. ಕಾವೇರಿ ನೀರು ಬಿಟ್ಟರಲ್ಲಾ, ಸುಪ್ರೀಂ ಕೋರ್ಟ್ ಛಿಮಾರಿ ಹಾಕಿತಲ್ಲಾ, ಆ ರೀತಿ ಇದರಲ್ಲಿ ಛೀಮಾರಿ ಹಾಕಿದೆ. ಬಡವರು ಬಗರ್‌ಹುಕುಂ ಭೂಮಿಯಲ್ಲಿ 30–40 ವರ್ಷದಿಂದ

ಕೃಷಿ ಮಾಡುತ್ತಿದ್ದರು ಪಾಪ ಕಷ್ಟಬಿದ್ದು ಉಳುಮೆಮಾಡಿ ಅದನ್ನು ಮಟ್ಟಾ ಮಾಡಿ ಒಂದು ತಲೆಮಾರು ಮುಗಿದುಹೋಗಿದೆ ಇನ್ನೊಂದು ತಲೆಮಾರು ಮುಂದುವರಿಸಿಕೊಂಡು ಮಾಡುತ್ತಾ ಇದ್ದರು. ಅದನ್ನೆಲ್ಲಾ ನೀವು ಅಕ್ವಿಜಿಶನ್ ಮಾಡಿದ್ದೀರಿ, ಹೈಕೋರ್ಟ್ ಏನು ನಿಮಗೆ ಆದೇಶ ಕೊಟ್ಟಿತು? ಅದನ್ನು ಯಾವುದೂ ಮಾಡಬಾರದು ಅಂತ ಹೈಕೋರ್ಟ್ ಆದೇಶ ಕೊಟ್ಟಿತು. ಕಳೆದ ಸಭೆಯಲ್ಲಿ ನಾನು ಪ್ರಸ್ತಾಪ ಮಾಡಿದಾಗ ಹೈಕೋರ್ಟ್ ಆದೇಶ ಇದೆಯಲ್ಲಾ ಅಂತ ಕೇಳಿದಿರಿ, ಅದೇ ಆದೇಶ ಕೊಟ್ಟಿರುವುದು ಮಾಡಬಾರದು ಇದನ್ನು ಅಂತ. ಇಷ್ಟೆಲ್ಲಾ ಗೊತ್ತಿದ್ದರೂ ಸಹ ಎಲ್ಲಿ ಬಡವರು ಬಗರ್‌ಹುಕ್ಕುಂ ಸಾಗುವಳಿ ಮಾಡುತ್ತಿದ್ದಾರೆ ಎಲ್ಲಿ ಆಶ್ರಯ ಮನೆ ಇದೆ, ಇದೆಲ್ಲಾ ಇದ್ದರೂ ಸಹ ಬೇಕು ಅಂತ ಪರ್ಪಾಸಾಗಿ ಇಷ್ಟೊಂದು ಜಮೀನನ್ನು ಅಕ್ವೈರ್ ಮಾಡುವುದು, ಮತ್ತೆ ಕಂಡೂ ಕಾಣದಂತೆ ಬಿಡುತ್ತಾ ಇರುವುದು, ಇದನ್ನು ವ್ಯವಸ್ಥಿತವಾಗಿ ರಾಜ್ಯಕ್ಕೆ ಒಂದು ರೀತಿಯ ದ್ರೋಹ ಬಗೆದಿದ್ದಾರೆ ಅಂತ ಹೇಳಿದರೆ ತಪ್ಪಾಗಲಾರದು. ಇನ್ನೊಂದು, ನೈಸ್ ಕಂಪನಿ ಎಷ್ಟೊಂದು ನೈಸಾಗಿ ಮ್ಯಾನೇಜ್ ಮಾಡಿದೆ ಅಂದರೆ ಇದು ಮೂರನೇ ಸರ್ಕಾರ. ನೋಡಿ ಎಲ್ಲರನ್ನೂ ಮ್ಯಾನೇಜ್ ಮಾಡಿಕೊಂಡು ಬರುತ್ತಿದ್ದಾರೆ. ಎಷ್ಟು ಚಾಣಕ್ಯರು. ಮೊದಲು ದಳದ ಸರ್ಕಾರ ಇತ್ತು, ಆಮೇಲೆ ಕಾಂಗ್ರೆಸ್ ಬಂತು, ಈಗ ಇವೆರಡೂ ಕೋಆರ್ಡಿನೇಶನ್, ಇಲ್ಲ ಕಾಂಬಿನೇಶನ್, ನೈಸ್‌ನವರು ಇಷ್ಟೊ ಜನರನ್ನು ನೈಸಾಗಿ ಕೋಆರ್ಡಿನೇಟ್ ಮಾಡಿದ್ದಾರೆ, ಬಹಳ ಯಶಸ್ವಿಯಾಗಿ. ಎಷ್ಟು ಅವರಿಗೆ ಫೆಸಿಲಿಟೀಸ್ ಕೊಟ್ಟಿದ್ದಾರೆ? ನಾವೆಲ್ಲಾ ಬಜೆಟ್ ಮೇಲೆ ಭಾಷಣ ಮಾಡುವಾಗ ಹೇಳಿದರು, ಆಶ್ರಯ ಮನೆಗಳಿಗೆ ಏನು ಬಡ್ಡಿ ಹಾಕುತ್ತಿದ್ದೀರಾ ಸರ್ವೀಸ್ ಚಾರ್ಜ ಅಂತ ಒಂದೇ ಒಂದು ಪರ್ಸೆಂಟ್, ಅದನ್ನು ಬಿಡಿ ಅಂದಿದ್ದಕ್ಕೆ, ಇಲ್ಲ ಬಜೆಟ್‌ನಲ್ಲಿ ನಮಗೆ ಕೊರತೆ ಇದೆ, ಆಗುವುದೇ ಇಲ್ಲ, ಯಾವ ಕಾರಣಕ್ಕು ಮುಲಾಜು ಕೊಡುವುದೇ ಇಲ್ಲ ಅಂತ, ಆದರೆ ನೈಸ್ ಕಂಪೆನಿಗೆ ಅಧ್ಯಕ್ಷರೆ, ಪತ್ರ ಬರೆಯುತ್ತಾರೆ, ಏನಂತ ಹೇಳಿದರೆ ಜೂನ್ 29, 2003, ಕೃಷ್ಣ ಅವರ ಸರ್ಕಾರದಲ್ಲಿ ಬೆಂಗಳೂರು ಮೈಸೂರು ಕಾರಿಡಾರ್ ಯೋಜನೆಗೆ ಸಂಯೋಜಕರಾಗಿರುವ ಬಸವರಾಜ್ ಎಂಬ ಅಧಿಕಾರಿ ನೈಸ್ ಕಂಪೆನಿಗೆ ಪತ್ರ ಬರೆದು " ಯೋಜನೆಯ ದಾಖಲೆಗಳು ಜಮೀನು ಮತ್ತಿತರ ಯೋಜನಾ ಸವಲತ್ತುಗಳನ್ನು ನೈಸ್ ಕಂಪನಿಯು ಸಾಲ ಎತ್ತಲು ಹಣಕಾಸು ಸಂಸ್ಥೆಗಳಿಗೆ ಅಡವಿಡಲು ಒತ್ತೆ ಇಡಲು ಚಾರ್ಜ್ ಸೃಷ್ಟಿಸಲು ಸರ್ಕಾರದ ಅಭ್ಯಂತರವಿರುವುದಿಲ್ಲ ಹಾಗೆಯೇ ಒಂದುವೇಳೆ, ನೋಟ್ ಮಾಡಿಕೊಳ್ಳಿ, ಅಧ್ಯಕ್ಷರೆ, ಯೋಜನೆ ಅರ್ಧದಲ್ಲೇ ನಿಂತಲ್ಲಿ ಆಗ ಸಾಲ ನೀಡಿದ ಸಂಸ್ಥೆಗಳಿಗೆ ಸರ್ಕಾರವೇ ನೇರವಾಗಿ ಸಾಲ ತೀರುವಳಿ ಮಾಡುತ್ತದೆ." ಅಂದರೆ ಎಲ್ಲಾ ಜವಾಬ್ದಾರಿಯನ್ನೂ ಸರ್ಕಾರ ಕೊಡುತ್ತದೆ, ಅವರು ಏನು ಬೇಕಾದರು ಮಾಡಿ, ನಾವಿದ್ದೇವೆ ಶೂರಿಟಿ ನೀವು ಮುಚ್ಚಿಕೊಂಡು ಹೋಗಿ ಅರ್ಧಕ್ಕೆ, ನಾವಿದನ್ನು ಕಾಪಾಡುತ್ತೇವೆ ಎಂಬ ಒಂದು ತಿಳಿವಳಿಕೆ ಪತ್ರವನ್ನು ನೈಸ್ ಕಂಪೆನಿಗೆ ಕೊಟ್ಟಿದ್ದಾರೆ. ಅಂದರೆ ಎಷ್ಟು ಅವರ ಪರವಾಗಿ, ಸರ್ಕಾರ ಒಬ್ಬರ ಮೇಲೊಬ್ಬರು ಸ್ಪರ್ಧೆ ಮೇಲೆ, ಆ ಸರ್ಕಾರ ಹೋಯಿತು, ಈ ಸರ್ಕಾರ ಬಂತು, ಇದು ಹೋಗಿ ಮತ್ತೆ ಹೊಸ ಕಾಂಬಿನೇಷನ್ ಸರ್ಕಾರ ಬಂತು, ಇಷ್ಟೆಲ್ಲಾ ಇದ್ದರೂ ಸಹ ಒಂದು ರೀತಿಯ ಗುಲಾಮೀತನ ಅವರಿಗೆ, ಪೂರ್ತಿ ಬೆಂಡಾಗಿಬಿಟ್ಟಿದ್ದಾರೆ ಅವರಿಗೆ. ಅದನ್ನು ಮುಂದುವರೆಸಿ' ಎಂಬ ಸ್ಪಷ್ಟ ಭರವಸೆಯ ಪತ್ರವನ್ನು ಬರೆದಿದ್ದಾರೆ. ಸರ್ಕಾರದ ಈ ಒತ್ತಾಸೆಯಿಂದ ಉತ್ತೇಜನಗೊಂಡಂತಹ ನೈಸ್ ಕಂಪೆನಿ ಈ ಸರ್ಕಾರಿ ಜಮೀನನ್ನು ಬ್ಯಾಂಕಿಗೆ ಅಡ ಇಡುತ್ತದೆ. ತಮಗೆ ಗೊತ್ತಿದೆ. ಅವರ ಹತ್ತಿರ 10 ಪೈಸೆ ದುಡ್ಡಿಲ್ಲ ಅಧ್ಯಕ್ಷರೇ, ಇಲ್ಲೇನಾಗಿಬಿಟ್ಟಿದೆ ಅಂದರೆ ಯಾರದೋ ದುಡ್ಡು ಯಲ್ಲಮ್ಮನ ಜಾತ್ರ, ಅವರ ಹತ್ತಿರ ಕಾಸೇ ಇಲ್ಲ, ಸರ್ಕಾರ ದುಡ್ಡು

ಕೊಡುವುದು ಜಾತ್ರೆ ಅವರು ಮಾಡುವುದು! ಅವರ ಹತ್ತಿರ ಹತ್ತು ಪೈಸೆ ಇಲ್ಲ, ಸಾಲ ತೆಗೆದುಕೊಂಡಿದ್ದಾರೆ ನೂರೈವತ್ತು ಕೋಟಿ ರೂ ಈ ಸರ್ಕಾರಿ ಜಮೀನಿನ್ನೆಲ್ಲಾ ಅಡವಿಟ್ಟು, ಕರ್ನಾಟಕ ರಾಜ್ಯ ಸರ್ಕಾರದ ಜಮೀನು ಅಡವಿಟ್ಟು 150 ಕೋಟಿ ರೂ ಸಾಲ ತಗೊಂಡು ಕೆಐಎಡಿಬಿಗೆ ಕಟ್ಟಿರುವುದೆಷ್ಟು 30 ಕೋಟಿ ರೂ ಮಾತ್ರ. 120 ಕೋಟಿ ರೂ ಎಲ್ಲಿ ಹೋಯಿತು ಇನ್ನೂ ಗೊತ್ತಿಲ್ಲ. ಅಂದರೆ ಅವರ ಹತ್ತಿರ ದುಡ್ಡಿದ್ದಿದ್'ದರೆ ಅವರು ಸಾಲ ಯಾಕೆ ತೆಗೆದುಕೊಳ್ಳಬೇಕಾಗಿತ್ತು. ಮತ್ತೆ ಸರ್ಕಾರ ಯೋಚನೆ ಮಾಡಬೇಕಾಗಿತ್ತು ಕಾರಿಡಾರ್ ಸಂಸ್ಥೆಗೆ ಅನುಮತಿ ಕೊಡಬೇಕಾದರೆ ಅವರ ಬ್ಯಾಂಕ್ ಬ್ಯಾಲೆನ್ಸ್ ಎಷ್ಟಿದೆ ಅಂತ ಯೋಚನೆ ಮಾಡಬೇಕಾಗಿತ್ತು, ಮಾಜಿ ಪ್ರಧಾನಿ ಸನ್ಮಾನ್ಯ ದೇವೇಗೌಡರು ಧರಣಿ ಮಾಡಿದ್ದಾರೆ. ರಾಜ್ಯಪಾಲರಿಗೆ ಮನವಿ ಕೊಟ್ಟಿದ್ದಾರೆ, ಬುಕ್ ಕೊಟ್ಟಿದ್ದಾರೆ, ಚಾರ್ಜ್‌ಶೀಟ್ ಹಾಕಿದ್ದಾರೆ. ಈಗಲೂ ಹೊರಗಡೆ ಹೇಳುತ್ತಿದ್ದಾರೆ ಅವರ ಮೇಲೆ ತನಿಖೆ ಮಾಡಬೇಕು ಅಂತ. ಸರ್ಕಾರದ ಭಾಗ ಅಂತ ನಾನು ತಿಳಿದುಕೊಂಡಿದ್ದೇನೆ, ಯಾಕೆ ತನಿಖೆ ಮಾಡುತ್ತಾ ಇಲ್ಲ. ಯಾಕೆ? ಆಚೆ ಕಡೆ ಒಂದು ಹೇಳಿಕೆ ಒಳಗಡೆ ಒಂದು ಹೇಳಿಕೆ ಆಗೋಲ್ಲ ಅಧ್ಯಕ್ಷರೇ,. ಇದರ ತನಿಖೆ ಆಗಲೇಬೇಕು. ಇದನ್ನು ಸಮಗ್ರವಾಗಿ ತನಿಖೆ ಮಡಬೇಕು ಅನ್ನುವುದೇ ನನ್ನ ಅಗ್ರಹ. ಈಗಾಗಲೇ ಮಾನ್ಯ ಮಾಧ್ಯಸ್ವಾಮಿಯವರು ಹಾಗೂ ಮಾನ್ಯ ಯಡಿಯೂರಪ್ಪನವರು ಮಾತನಾಡಿರುವುದರಿಂ ಕಾಡಿಡಾರ್ ರಸ್ತೆ ಬಗ್ಗೆ, ಸದನ ಸಮಿತಿ ಆಗಬೇಕು ಆ ಸದನ ಸಮಿತಿ ಪೂರ್ತಿಯಾಗಿ ವರದಿ ಕೊಡಬೇಕು. ವೈಯಕ್ತಿಕವಾಗಿ ನನ್ನದೇನು ಇಲ್ಲ, ಯಾರು ಅಪರಾಧಿಗಳಿದ್ದಾರೆ ನಿಷ್ಪಕ್ಷಪಾತವಾಗಿ, ಮಾಜಿ ಮಂತ್ರಿಗಳು ಎಂಎಲ್‌ಎಗಳು ಅಂತ ನನ್ನದೇನೂ ಇಲ್ಲ, ಈ ತರಹ ವ್ಯವಸ್ಥೆ ಏನಿದೆ ಯಾರು ತಪ್ಪು ಮಾಡಿದ್ದಾರೆ ಅಧಿಕಾರಿಗಳು ಯಾರು ಶಾಮೀಲಾಗಿದ್ದಾರೆ ಇದರಲ್ಲಿ ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಇಲ್ಲಿನ ಅಧಿಕಾರಿಗಳು ಇಲ್ಲಿ ಕೆಲಸ ಮಾಡುವುದು ರಿಟೈರಾದ ತಕ್ಷಣ ಅಲ್ಲಿ ಹೋಗುವುದು. ನಮ್ಮ ದೇಶಧಲ್ಲಿ ಇದೊಂದೇ ಅಂತ ಅಲ್ಲ, ಬೇಕದಷ್ಟು ಸಂಸ್ಥೆ, ಫ್ಯಾಕ್ಟರಿಗಳನ್ನು ನಾವು ನೋಡುತ್ತಿದ್ದೇವೆ. ಇಲ್ಲಿ ಜನರಲ್ ಮ್ಯಾಜೇಜರ್ ಆಗಿರುತ್ತಾರೆ, ರಿಟೈರಾದ ತಕ್ಷಣ ಬೇರೆ ಫ್ಯಾಕ್ಟರಿಯಲ್ಲಿ ಪ್ರೈವೇಟ್‌ನಲ್ಲಿ ಜನರಲ್ ಮ್ಯಾನೇಜರ್. ಅಂದರೆ ಏನು ಇಲ್ಲಿ ಉತ್ಪನ್ನ ತಯಾರಿಸುತ್ತಾರೆ ಅದೇ ಉತ್ಪನ್ನ ಪ್ರೈವೇಟ್‌ನವರು ತಯಾರಿಸುತ್ತಾರೆ ಅಲ್ಲಿಗೆ ಹೋಗಿ ಜನರಲ್ ಮ್ಯಾನೇಜರ್, ಎಂ.ಡಿ.ಗಳಾಗುತ್ತಾರೆ. ಇವರಿಗೆಲ್ಲ ಕಡಿವಾಣ ಹಾಕಬೇಕು. ಈ ಕಾರಣದಿಂದ ಈ ಕಾರಿಡಾರ್ ರಸ್ತೆಯಲ್ಲಿ ಯಾರು ಅಪರಾಧಿಗಳಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು, ಸದನ ಸಮಿತಿ ಮೂಲಕ ಇದರ ತನಿಖೆ ಯಾಬೇಕು ಎಂಬ ಒಂದು ಅಗ್ರಹವನ್ನು ನಾನು ಮಾಡುತ್ತಿದ್ದೇನೆ.

ಇದೇ ರೀತಿ ಬಿಡಿಎ, ಬಿಡಿಎ ಈಗಾಗಲೇ ಬೆಂಗಳುರು ಸುತ್ತಾ ಅಕ್ವೈರ್ ಮಾಡಿಕೊಂಡಿರುವ ಭೂಮಿ ಬಡವರಿಗೆ ಹಿಂದುಳಿದವರಿಗೆ ಹಂಚುತ್ತೇವೆ ಅಂತ ಹೇಳಿಕೊಂಡು ಸಾಕಷ್ಟು ಭೂಮಿ ಅಕ್ವೈರ್ ಮಾಡಿದ್ದಾರೆ. ಎಲ್ಲೆಲ್ಲಿ ಮಾಡಿದ್ದಾರೆ ಹೇಗೆಹೇಗೆ ಮಾಡಿದ್ದಾರೆ ಎಂಬುದು ಗೊತ್ತು. ನನಗೆ ತಿಳಿದಂತೆ ಪ್ರತಿಯೊಂದು ಬಡಾವಣೆಯಲ್ಲೂ ಒಂದೋಂದೂ ಡೀಟೈಲ್ ಬೇಕಾದರೆ ನಾನು ಹೇಳುತ್ತೇನೆ, ಶ್ರೀಗಂಧದಕಾವಲ್‌ನಲ್ಲಿ 468 ಎಕರೆ 12 ಗುಂಟೆ ಅಕ್ವೈರ್ ಮಾಡಿದರು. ಅಧಿಸೂಚನೆ ಆಯಿತು, ಆಮೇಲೆ ಗೆಜೆಟ್‌ನಲ್ಲಿ 468 ಎಕರೆ 12 ಗುಂಟೆ ಡೀನೋಟಿಫಿಕೇಶನ್ನೂ ಆಗಿಹೋಯಿತು. ಗೆಜೆಟ್‌ನಲ್ಲಿ ಬಂದಿದೆ, ನಾನೇನೂ ಅದರಲ್ಲಿ ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಹೊಸೂರು ರಸ್ತೆ–ಸರ್ಜಾಪುರ ಬಡಾವಣೆಗೆ 748 ಎಕರೆ 29 ಗುಂಟೆ, ಆ ಯೋಜನೆಯೇ ರದ್ದು, ಅಕ್ವಿಜಿಶನ್ ಆಯಿತು, ಡೀನೋಟಿಫಿಕೇಶನ್ ಆಯಿತು. ಯಾಕಾಯಿತು ಅಂತ ಮುಂದೆ ಹೇಳುತ್ತೇನೆ. ಅದೇ ರೀತಿ ಉತ್ತರಹಳ್ಳಿ ಹೋಬಳಿ ಬೆಂಗಳೂರು ದಕ್ಷಿಣ ತಾಲ್ಲೂಕು ಅಂಜನಾಪುರ ಟೌನಶಿಫ್‌ನಲ್ಲಿ ಪ್ರಾಥಮಿಕ ಅಧಿಸೂಚನೆ

634 ಎಕರೆ 06 ಗುಂಟೆ ಡೀನೋಟಿಫೀಕೇಶನ್ 176 ಎಕರೆ 02 ಗುಂಟೆ. ಅದೇ ರೀತಿ ಬನಶಂಕರಿ 6ನೇ ಹಂತ ಅಕ್ವಿಜಿಶನ್ 2138 ಎಕರೆ 04 ಗುಂಟೆ, ಡೀನೋಟಿಫಿಕೇಶನ್ 540 ಎಕರೆ. ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, 827 ಎಕರೆ 17 ಗುಂಟೆ ಅಕ್ವಿಜಿಶನ್, 340 ಎಕರೆ ಡೀನೋಟಿಫಿಕೇಶನ್. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ 773 ಎಕರೆ 18 ಗುಂಟೆ ಅದರಲ್ಲಿ 263 ಎಕರೆ ಗುಂಟೆ ಡೀನೋಟಿಫಿಕೇಶನ್. ಇದರಲ್ಲೆಲ್ಲಾ ಒಂದು ರೀತಿ ಜಾಲ ಅಧ್ಯಕ್ಷರೇ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಮಲ್ಲತ್ತಹಳ್ಳಿ ಅಂತ ಬರುತ್ತದೆ. ಅದನ್ನು 1992ನೇ ಇಸವಿಯಲ್ಲೇ ಬಿಡಿಎ ಅಕ್ವೈರ್ ಮಾಡಿತ್ತು, 2002ರಲ್ಲಿ ಅದನ್ನು ಡೀನೋಟಿಫಿಕೇಷನ್ ಮಾಡಿ ಬಿಟ್ಟರು. ಏಕೆ ಮಾಡಿದರೋ ಗೊತ್ತಿಲ್ಲ, ಅವರೇ ಮಾಡಿದರು. ಅದಾದ ಒಂದೇ ತಿಂಗಳಲ್ಲಿ ಮತ್ತೆ ಅದನ್ನು ವಿಶ್ವೇಶ್ವರಯ್ಯ ಬಡಾವಣೆಗೆ ಅಕ್ವಿಜಿಶನ್ ಮಾಡಿದರು. ಅಲ್ಲಿ ಸಾವಿರಾರು ಮನೆಗಳಿವೆ. ಈಗ ಕಟ್ಟಿರುವ ಮೆನಗಳಲ್ಲ. 15–20 ವರ್ಷಗಳಿಂದ ಕಟ್ಟಿರುವ ಮನೆಗಳು. ಇವರು ಹುಡುಕುತ್ತಾರೆ ಅಧ್ಯಕ್ಷರೇ. ಬಿಡಿಎನವರು ಹೇಗೆ ಹುಡುಕುತ್ತಾರೆ ಅಂದರೆ ಬಡಾವಣೆ ಆಗಿರಬೇಕು ಮನೆಗಳು ಕಟ್ಟಿರಬೇಕು, ಅಲ್ಲಿ ಬಡಾವಣೆಯಾಗಿರಬೇಕು. ಆಗ ಡೀನೋಡಿಫಿಕೇಶನ ಮಾಡಿದರೆ ಬಹಳ ಹಣ ಬರುತ್ತದೆ ಹಾಗೆ ಖಾಲಿ ಇದ್ದರೆ ಅದಕ್ಕೆ ಎರಡು ಲಕ್ಷ ಮೂರು ಲಕ್ಷ, ಮನೆಗಳು ಕಟ್ಟಿಕೊಂಡುಬಿಟ್ಟಿದ್ದರೆ ಸ್ಕೇರ್ ಫೀಟ್ ಲೆಕ್ಕದಲ್ಲಿ ಮೇಲೆ ಮೇಲೇ ಜಾಸ್ತಿ ಹೋಗುತ್ತದೆ.

ಅಧ್ಯಕ್ಷರು : ಎಷ್ಟಿರುತ್ತದೆ ರೇಟ್ ಅದಕ್ಕೆ. ಒಂದು ಅಂದಾಜು , ಯಾಕೆಂದರೆ ಈ ವ್ಯವಹಾರಗಳೆಲ್ಲಾ ನಿಮಗೆ ಗೊತ್ತಾಗುತ್ತದಲ್ಲಾ.

ಶ್ರೀ ಕೆ.ಆರ್. ರಮೇಶ ಕುಮಾರ್ : ಮಾನ್ಯ ಅಧ್ಯಕ್ಷರೆ, ಅದು ನಿಮಗೆ ಗೊತ್ತೂ ಇಲ್ಲ ನಿಮಗೆ ಅರ್ಥವೂ ಆಗುವುದಿಲ್ಲ. ನೀವು ಇನ್ನೊಂದು ಜನ್ಮ ಎತ್ತಿ ಬರಬೇಕು. ಅದರ ವಿಷಯ ಏನಿದ್ದರೂ ಅಶೋಕ್‌ಗೆ ಗೊತ್ತಾಗಬೇಕು ಅದು ಬಿಟ್ಟರೆ ಶ್ರೀನಿವಾಸ್‌ಗೆ ಗೊತ್ತಾಗಬೇಕು.

ಅಧ್ಯಕ್ಷರು : ಮಾನ್ಯ ರಮೇಶಕುಮಾರ್‌ರವರೇ, ಇದೆಲ್ಲಾ ಒಂದು ತರಹ ಕಥೆ ಕೇಳಿದ ಹಾಗೆ ಆಗುತ್ತಾ ಇದೆ. ಅದಕ್ಕೆ ಸ್ವಲ್ಪ ಮಾಹಿತಿ ಪಡೆಯುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಅದರ ವಿಷಯ ಬಹಳ ಜನಕ್ಕೆ ಗೊತ್ತಿದೆ, ಹಾಗಾಗೇ ಇವೆಲ್ಲಾ ನಡೆಯುತ್ತಿರುವುದು. ಪಾಪ ಅಧ್ಯಕ್ಷರಿಗೇನು ಗೊತ್ತು?

ಶ್ರೀ ಆರ್. ಅಶೋಕ್ : ನೋಡುತ್ತಾರೆ ಹುಲ್ಲುಗಾವಲು, ಸಣ್ಣಸಣ್ಣ ಹುಲ್ಲಿದ್ದರೆ ಇಲ್ಲ, ಹುಲ್ಲು ಹುಲುಸಾಗಿ ಬೆಳದಿರಬೇಕು, ಮೇವು ಚೆನ್ನಾಗಿರಬೇಕು. ಚೆನ್ನಾಗಿ ಬೆಳೆದಿರುವ ಕಡೆ ನುಗ್ಗುತ್ತಾರೆ ಗೂಳಿಗಳ ತರಹ.

4.20 ಪಿಎಂ

particular ಆಗಿ ಬೇಕು ಎಂದು ಹೇಳಿದರೆ ಉತ್ತರಹಳ್ಳಿ ಹೋಬಳಿ ಇರಬಹುದು, ಮಲ್ಲತ್ತಹಳ್ಳಿ ಭಾಗದಲ್ಲಿ ಇರಬಹುದು, ವಿಶ್ವೇಶ್ವರಯ್ಯ ಬಡಾವಣೆ ಇರಬಹುದು, ಬನಶಂಕರಿ ಇರಬಹುದು, ಈ ಕಡೆ ಗೊತ್ತಿದ್ದೂ ಗೊತ್ತಿದ್ದೂ ಅಲ್ಲಿ ಬಡಾವಣೆ ಬಂದಿದೆ ಎಂದು ಗೊತ್ತಿದ್ದೂ ನೋಟೀಫಿಕೇಷನನ್ನು ಮಾಡುವುದು, ಅದರ ಮುಖಾಂತರ ಹಣ ಮಾಡತಕ್ಕ ವ್ಯವಸ್ಥಿತವಾದ ಒಂದು ದಂಧೆಯನ್ನು ಬಿಡಿಎ ನವರು ಮಾಡುತ್ತಿದ್ದಾರೆ. ಈ ರೀತಿ ಒಟ್ಟು ಬಿಡಿಎ ಮುಖಾಂತರ ನನಗನ್ನಿಸುತ್ತದೆ, ಬೆಂಗಳೂರು ಸುತ್ತಮುತ್ತ ನಾಲ್ಕು ಸಾವಿರ ಎಕರೆಗೂ ಮೇಲ್ಪಟ್ಟು ಕಳೆದ ನಾಲ್ಕು ವರ್ಷದಿಂದ ಡೀ–ನೋಟಿಫಿಕೇಷನ್ ಆಗಿದೆ. ಲೆಕ್ಕ ಹಾಕಿ ಎಷ್ಟು ಕೋಟಿ ಎಂದು. ಬಎಂಗಳೂರಿನಲ್ಲಿ ಒಂದು ಕೋಟಿ ರೂಪಾಯಿ ಆಗುತ್ತದೆ. ಈ ನೋಟೀಫಿಕೇಷನನ್ನು ಏನಾದರೂ ಬಿಟ್ಟರೆ, ಬಿಡಿಎ ನವರೇನಾದರೂ ಅದನ್ನು ಕೈಬಿಟ್ಟರೆ

ಅದರ ಬೆಲೆ ಎಕರೆಗೆ ಒಂದು ಕೋಟಿ ರೂಪಾಯಿ. ಬಿಡಿಎ ನವರೇನಾದರೂ ಅದನ್ನು ಕೈಬಿಟ್ಟರೆ ಅದರ ಬೆಲೆ ಎಕರೆಗೆ ಒಂದು ಕೋಟಿ ರೂಪಾಯಿ. ಬಿಡಿಎ ಅಕ್ವಿಜಿಷನನ್ನು ಮಾಡುವುದು 10–12 ಲಕ್ಷಕ್ಕೆ ಮಾಡುತ್ತಾರೆ. ಅಕಸ್ಮಾತ್ ಅದನ್ನೇನಾದರೂ ಬಿಟ್ಟುಬಿಟ್ಟರೆ ಪ್ರಭಾವವನ್ನು ಬೀರಿ, ರೆಕಮೆಂಡೇಷನನ್ನು ಮಾಡಿ ಎಲ್ಲೆಲ್ಲಿವರೆಗೆ ಶಿಫಾರಸ್ ಹೋಗುತ್ತದೆ ಎನ್ನುವುದು ಅದು ಬೇರೆ ಪ್ರಶ್ನೆ. ಅದನ್ನು ಬಿಟ್ಟರೆ ಅದರ ಬೆಲೆ ಒಂದು ಕೋಟಿ ರೂಪಾಯಿ. ಅದರಲ್ಲಿ ಸ್ಕೀಮುಗಳು ಇದೆ. 50:50 ಸ್ಕೀಮುಗಳನ್ನು ಕೆಲವರೆಲ್ಲಾ ಮಾಡಿಕೊಳ್ಳುತ್ತಾರೆ. ನೀವು ಹತ್ತು ಎಕರೆ ಬಿಡಿಸಿಕೊಟ್ಟರೆ ಐದು ಎಕರೆ ನಿಮಗೆ ಎಂದು ಹೇಳುತ್ತಾರೆ. ಸೀರೆ ಅಂಗಡಿಯಲ್ಲಿ ಹಾಕಿರುತ್ತಾರಲ್ಲಾ ಒಂದು ಸೀರೆ ತೆಗೆದುಕೊಂಡರೆ ಇನ್ನೊಂದು ಸೀರೆ ಫ್ರೀ, ಸೀರೆ ತೆಗೆದುಕೊಂಡರೆ ಜಾಕೆಟ್ ಫ್ರೀ. ಓಲೆ ತೆಗೆದುಕೊಂಡರೆ ಮೂಗುಬೊಟ್ಟು ಫ್ರೀ, ಆ ರೀತಿ ಈ ಸ್ಕೀಮುಗಳಿವೆ. ನಿಜವಾಗಿಯೂ ನಾನು ಹೇಳುತ್ತಿರುವುದು. it is not a joke. ಇವೆಲ್ಲಾ ರಿಯಲ್ ಆಗಿ ನಡೆದಿರುವ ಘಟನೆಗಳು ಇವೆಲ್ಲಾ,

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾಣ್ಯ ಸದಸ್ಯರು ಸೀರೆ ತೆಗೆದುಕೊಂಡರೆ ಜಾಕೆಟ್ ಫ್ರೀ ಎಂದೇನು ಹೇಳಿದರು, ಸೀರೆ ತೆಗೆದುಕೊಂಡರೆ ಬಂಗಾರ ಫ್ರೀ, ನೀವು ಹೇಳಿದ ಪ್ರಕಾರ 5–10 ಲಕ್ಷ ಇರುವ ಅಕ್ವೇರ್ ಮಾಡಿದ ಜಾಗದಲ್ಲಿ ಏಳೆಂಟು ಎಕರೆ ಜಾಗವನ್ನು ಬಿಟ್ಟರೆ ಒಂದು ಕೋಟಿ ರೂಪಾಯಿ ಬಾಳುತ್ತದೆ ಎಂದರೆ ಬಂಗಾರದ ಬೆಲೆಯೋ? ಸೀರೆ ಬೆಲೆಯೋ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದು ಆಡನ್ನು ತೆಗೆದುಕೊಂಡರೆ ಆಕಳನ್ನು ಫ್ರೀ ಕೊಡುವುದು, ಮೇಕೆ ತೆಗೆದುಕೊಂಡರೆ ಹಸು ಫ್ರೀ.

ಅಧ್ಯಕ್ಷರು : ಮಾನ್ಯ ಅಶೋಕ್‌ರವರೆ, ಬೇಗ ಮುಗಿಸಿ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಈ ರೀತಿಯ ಒಂದು ಸಂಚು ಬೆಂಗಳೂರು ಸುತ್ತಮುತ್ತ ಈ ಒಂದು ಸಂಚು ವ್ಯವಸ್ಥಿತವಾಗಿ ನಡೆಯುತ್ತಿದೆ. ಖೋಟಾ ನೋಟನ್ನು ಪ್ರಿಂಟ್ ಮಾಡುವುದು ಬೇಕಾಗಿಲ್ಲ. ಅದಕ್ಕಿಂತ ದೊಡ್ಡ ದಂಧೆ ಇದು. ಛಾಪಾ ಕಾಗದಕ್ಕಿಂತ ದೊಡ್ಡ ದಂಧೆ ಇದು. ಅದೂ ಬಹಳ ದೊಡ್ಡ ದಂಧೆಯೇ. ಅದು ಇಡೀ ದೇಶ ವ್ಯಾಪ್ತಿ ಇದೆ. ಇದೂ ಕೂಡ ಆ ರೀತಿಯಾದ ಒಂದು ದಂಧೆಯನ್ನು ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಛಾಪಾ ಕಾಗದ ಹಗರಣ ದೇಶದ್ರೋಹಿ ಚಟುವಟಿಕೆಗೆ ಉಪಯೋಗವಾಗಿದೆ. ಈ ರೀತಿ ದುಡ್ಡು ಬಂದಂಥದ್ದು ಸ್ವಂತಕ್ಕೆ, ರಾಜಕಾರಣವನ್ನು ಮಾಡುವುದಕ್ಕೆ ಆ ಬಡಪಾಯಿಗಳು ಯಾರು ಹಳ್ಳಿಯಿಂದ ಬಂದವರು ಅವರ್‍ಯಾರಾದರೂ ಚುನಾವಣೆಗೆ ನಿಂತರ ಅವರ ವಿರುದ್ಧ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಗೆಲ್ಲುವುದಕ್ಕೆ, ಈ ರೀತಿ ಸಹಾಯವನ್ನು ಮಾಡುವವರಿಗೆ ಉಪಯೋಗವಾಗುತ್ತದೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಈ ರೀತಿ ಡೀ–ನೋಟೀಫಿಕೇಷನ್ ಮಾಡುವ ದಂಧೆ ಇದು ನಿಲ್ಲಬೇಕು. ಸರ್ಕಾರದ ಉದ್ದೇಶವೇನು? ಹಿಂದೆ ಬಿಡಿಎ ಮಾಡಿದ ಉದ್ದೇಶವೇನೆಂದರೆ ಬಡವರಿಗೆ, ಹಿಂದುಳಿದ ವರ್ಗದವರಿಗೆ ಯಾರು ಬೆಂಗಳೂರಿನಲ್ಲಿ ಬಾಡಿಗೆ ಮನೆಗಳಲ್ಲಿ ವಾಸ ಮಾಡುತ್ತಿರುತ್ತಾರೆ, ಅವರಿಗೊಂದು ಸೂರನ್ನು ಕೊಡಬೇಕು, ಅವರಿಗೆ ಕಡಿಮೆ ಬೆಲೆಯಲ್ಲಿ ಬಿಡಿಎ ಸೈಟು ಸಿಗಬೇಕೆನ್ನುವುದು ಉದ್ದೇಶ. ಆದರೆ ಬಿಡಿಎ ಯಲ್ಲೂ ಕಡಿಮೆ ಬೆಲೆ ಇಲ್ಲ. ಅವರು 180 ರೂಪಾಯಿ ಚದರಡಿಗೆ ಏರಿಸಿಬಿಟ್ಟಿದ್ದಾರೆ. ನಾವು ಅದನ್ನು ಕಡಿಮೆ ಎಂತಲೇ

ಕೊಡಬೇಕು. ಸರ್ಕಾರ ಬಿಡಿಎಗೆ ಎಷ್ಟು ಅನುಮತಿಯನ್ನು ಕೊಟ್ಟಿದೆ ಗೊತ್ತೇ ಅಧ್ಯಕ್ಷರೇ? ನಾವೆಲ್ಲಾ ಭೂಪರಿವರ್ತನೆ ಮಾಡಿದರೆ ರೆವಿನ್ಯೂ ಲ್ಯಾಂಡನ್ನು ಕನ್‌ವರ್ಟ್ ಮಾಡಿದರೆ ಸುಮಾರು 60 ಸಾವಿರ ರೂ ಎಕರೆಗೆ ಕಟ್ಟಬೇಕು. ಇವರಿಗೆ ಬಿಡಿಎ ನವರಿಗೆ 60 ಸಾವಿರ ರೂಪಾಯಿ ಇಲ್ಲ. ಫ್ರೀ. ಏಕೆ, ಬಡವರಿಗೆ ಕೊಡಿ ಎಂದು. ಇವರು ಬಡವರಿಗೆ ಕೊಟ್ಟಿದ್ದಾರಾ? ಎಷ್ಟು ಕೊಟ್ಟಿದ್ದಾರೆ? ಇದೊಂದು ರೀತಿ ಈ ಡೀ–ನೋಟೀಫಿಕೇಷನ್ ಎಂದರೆ ಹಗಲುದರೋಡೆ ಮಾಡತಕ್ಕ ವ್ಯವಸ್ಥೆಗೆ ಎಲ್ಲಾದರೂ ಒಂದು ಕಡೆ ಕಡಿವಾಣವನ್ನು ಹಾಕಬೇಕು. ಇದರ ಜೊತೆಗೆ ಇನ್ನೊಂದು ಮಾರಕವಾದ ಒಂದು ವ್ಯವಸ್ಥೆ ಬಿಡಿಎ ಒಳಗಡೆ ಅಧಿಕಾರಿಗಳು, ಇವರೆಲ್ಲಾ ದೊಡ್ಡ ದೊಡ್ಡ ಲೆವೆಲ್‌ನಲ್ಲಿ ಇದನ್ನೆಲ್ಲಾ ಮಾಡಿಕೊಳ್ಳುತ್ತಾರೆ ಡೀ–ನೋಟೀಫಿಕೇಷನನ್ನು. ಸಣ್ಣಸಣ್ಣ ಲೆವೆಲ್‌ನಲ್ಲಿ ಇನ್ನೊಂದು ವ್ಯವಸ್ಥೆ ಇದೆ ಬೆಂಗಳೂರಿನಲ್ಲಿ ಹಿಂದೆ ಖಾಸಗಿ ಸೊಸೈಟಿಗಳಿದ್ದವು. ಬೇರೆ ಬೇರೆ ನೂರಾರು ಸೂಸೈಟಿಗಳಿದ್ದವು. ಅವರೆಲ್ಲಾ ಲೇಔಟ್‌ಗಳನ್ನು ಮಾಡಿದ್ದಾರೆ. ಹತ್ತು ವರ್ಷದ ಹಿಂದೆ ಸೊಸೈಟಿಯಾಗಿರುತ್ತದೆ. ಪ್ಲಾನ್ ಸ್ಯಾಂಕ್ಷನ್ ಮಾಡಿರುತ್ತಾರೆ. ಆಮೇಲೆ ಅದರಲ್ಲಿ ಉಳಿದಿರುತ್ತದಲ್ಲಾ, ಹತ್ತು ಎಕರೆ ಸಿಎ ಜಾಗ ಉಳಿದಿರುತ್ತದೆ. ಪಾರ್ಕ್ ಜಾಗ ಉಳಿದಿರುತ್ತದೆ. ಸಿವಿಕ್ ಅಮೇನಿಟೀಸ್ ಜಾಗ ಉಳಿದಿರುತ್ತದೆ. ಅದರ ಬೆಲೆ ಸುಮಾರು ಇವತ್ತು ಒಂದು ಎಕರೆಗೆ ಅಲ್ಲಿ ನಿಮಗೆ ಇವತ್ತು ಮೂರರಿಂದ ನಾಲ್ಕು ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಇವೆಲ್ಲಾ ಸರ್ಕಾರದ ಆಸ್ತಿ. ಇದೇನೂ ಯಾರದ್ದೂ ಅಲ್ಲ. ಇದೆಲ್ಲಾ ಸರ್ಕಾರದ ಆಸ್ತಿ. ಅವತ್ತೇ ಬಿಡಿಎ ಅದನ್ನು ಪ್ಲಾನ್ ಸ್ಯಾಂಕ್ಷನ್ ಮಾಡಿದ ತಕ್ಷಣ ಅವರಿಂದ ಅಗ್ರಿಮೆಂಟನ್ನು ತೆಗೆದುಕೊಂಡುಬಿಡುತ್ತಾರೆ. ಈ ಸ್ವತ್ತು ಪೂರ್ತಿ ಸರ್ಕಾರದ್ದು ಎಂದು ಹೇಳಿ ಸರ್ಕಾರದ ಲೆವೆಲ್‌ನಲ್ಲೇ ಇದನ್ನು ಖಾತೆ ಮಾಡಿಬಿಟ್ಟಿರುತ್ತಾರೆ. ಆ ಸಿಎ ಸೈಟುಗಳು, ಪಾರ್ಕುಗಳು, ಇವತ್ತೇನು ನೀವು ಬೆಂಗಳೂರಿನಲ್ಲಿ ನೋಡುತ್ತಿದ್ದೀರಿ, ಕೆಲವೆಲ್ಲಾ ಕಣ್ಣಿಗೆ ಕಾಣಿಸುತ್ತಿದೆ ಅಷ್ಟೆ. ಅಂಥ ಒಂದು ದಂಧೆ ಹೇಗೆ ಮಾಡಿದ್ದಾರೆ ಎಂದರೆ ವಿನಾಯಕ ಹೌಸಿಂಗ್ ಸೊಸೈಟಿ ಎಂದು ನಾಗರಭಾವಿಯಲ್ಲಿದೆ. 1992 ನೇ ಇಸವಿಯಲ್ಲಿ ಅವರಿಗೆ ಪ್ಲಾನ್ ಸ್ಯಾಂಕ್ಷನ್ ಆಗಿತ್ತು. 1992 ನೇ ಇಸವಿಯಲ್ಲಿ ಆರು ನೂರು ಸೈಟುಗಳನ್ನು ಮಾಡುವುದಕ್ಕೆ ಬಿಡಿಎ ನವರು ಅವರಿಗೆ ಅಕ್ವಿಜಿಷನನ್ನು ಮಾಡಿಕೊಟ್ಟು ಅವರ ಪರವಾಗಿ ಬಡವರಿಗೋಸ್ಕರ ಸೈಟುಗಳನ್ನು ಹಂಚಿ ಎಂದು ಹೇಳಿ ನಾಗರಭಾವಿಯಲ್ಲಿ ಅವರಿಗೆ ಕೊಡುತ್ತಾರೆ. ಅದು ಬಹಳ valuable ಜಾಗ. ಬಹಳ ಒಳ್ಳೆಯ ಜನರು ವಾಸ ಮಾಡತಕ್ಕದ್ದು. ಬೆಲೆ ಬಾಳುವ ಜಮೀನು ನಾಗರಭಾವಿಯದು. ಅಲ್ಲಿ 92ನೇ ಇಸವಿಯಲ್ಲಿ ಒಂದು ಪ್ಲಾನನ್ನು ಮಾಡಿಕೊಡುತ್ತಾರೆ. 2003 ನೇ ಇಸವಿಯಲ್ಲಿ ಸರ್ಕಾರದ ಚರಿತ್ರೆಯಲ್ಲೇ ಕೇಳಿಲ್ಲ. 2003ನೇ ಇಸವಿಯಲ್ಲಿ ರೀ–ಪ್ಲಾನನ್ನು ಮಾಡಿಕೊಡುತ್ತಾರೆ. ಸಾಧ್ಯನಾ ಅಧ್ಯಕ್ಷರೇ? ಹತ್ತು ವರ್ಷ ಆದಮೇಲೆ. ಈಗ ಯಾರು ಮಾರಿಕೊಂಡಿರುತ್ತಾರೋ, ಯಾರು ಸೈಟುಗಳನ್ನು ತೆಗೆದುಕೊಂಡವರು ಮಾರಿಕೊಂಡು ಮನೆಗಳನ್ನು ಕಟ್ಟಿರುತ್ತಾರೆ, ಎಲ್ಲಾ ಮುಗಿದುಹೋಗಿರುತ್ತದೆ, ಸೂಸೈಟಿಯವನೂ ಪತ್ತೆ ಇರುವುದಿಲ್ಲ., ಮತ್ತೆ ಆ ಸೊಸೈಟಿಯವರೆಲ್ಲಾ active ಆಗಿಬಿಟ್ಟಿದ್ದಾರೆ. ಏನು ಪಾರ್ಕ್‌ಗೆಂದು ಜಾಗವನ್ನು ಬಿಟ್ಟಿದ್ದರು, ಅದಕ್ಕೆ ಬಿಡಿಎ ನವರು ಲೇಔಟ್ ಮಾಡುವುದಕ್ಕೆ ಮತ್ತೆ ಅನುಮತಿಯನ್ನು ಕೊಡುತ್ತಾರೆ. ನನ್ನ ಹತ್ತಿರ ಎರಡೂ ಪ್ಲಾನ್‌ಗಳು ಇವೆ. ಎರಡಕ್ಕೂ ಬಿಡಿಎ ಸೀಲ್ ಇದೆ. 1992 ನೇ ಇಸವಿಯಲ್ಲಿ ಹಾಕಿರುವ ಪ್ಲಾನ್ ಇದು. ಬಿಡಿಎ ನವರು ಅಪ್ರೂವ್ ಮಾಡುತ್ತಾರೆ. 2003ನೇ ಇಸವಿಯಲ್ಲಿ ಈ ಪ್ಲಾನನ್ನು ಮಾಡಿದ್ದಾರೆ. ಅದಕ್ಕೂ ಬಿಡಿಎ ಸೀಲನ್ನು ಹಾಕಿದ್ದಾರೆ. ಪಾರ್ಕ್‌ಗಳ ಜಾಗ ಏನು ಇತ್ತು ಸುಮಾರು ಎಂಟರಿಂದ ಹತ್ತು ಎಕರೆ, ಅಷ್ಟಕ್ಕೂ ಸುಮಾರು 80–90 ಸೈಟುಗಳನ್ನು ಮಾಡುವುದಕ್ಕೆ ಅನುಮತಿಯನ್ನು

ಕೊಟ್ಟಿದ್ದಾರೆ. ನಾನು ಕಳೆದ ವಿಧಾನಸಭೆಯಲ್ಲೂ ಕೇಳಿದೆ. ಮಾಜಿ ಮುಖ್ಯಮಂತ್ರಿಗಳು ಹೇಳಿದರು. ಎಸ್.ಎಂ. ಕೃಷ್ಣ ಅವರು ಹೇಳಿದರು, ನನ್ನ ಇತಿಹಾಸದಲ್ಲೇ ರೀ–ಪ್ಲಾನ್ ಮಾಡುವಂಥ ಅಧಿಕಾರ ಬಿಡಿಎ ಗೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆ ಅಧಿಕಾರವೇ ಇಲ್ಲ.

ಅಧ್ಯಕ್ಷರು : ಮಾಡಿರುವುದಂತೂ ನಿಜ.

ಶ್ರೀ ಆರ್. ಅಶೋಕ್ : ಎರಡೂ ಪ್ಲಾನ್‌ಗಳು ಇಲ್ಲೇ ಇವೆ. ಅದನ್ನು ಕೊಡುತ್ತೇನೆ. ಎರಡಕ್ಕೂ ಅವರೇ ಸೀಲನ್ನು ಹಾಕಿದ್ದಾರೆ. 2003ರಲ್ಲಿ ಮಾಡಿಫಿಕೇಷನನ್ನು ಹೇಗೆ ಮಾಡುವುದಕ್ಕೆ ಸಾಧ್ಯ ಅಧ್ಯಕ್ಷರೇ? ಒಂದು ಸಾರಿ ಲೇಔಟ್ ಮಾಡಿ ಅಪ್ರೂವ್ ಮಾಡಿ ಹತ್ತು ವರ್ಷಗಳಾದ ಮೇಲೆ ಸಿಎ ಸೈಟುಗಳನ್ನು ಪಾರ್ಕ್‌ಗಳನ್ನು ಸೈಟುಗಳನ್ನಾಗಿ ಮಾಡಬಹುದೇ? ಸುಮಾರು ಐವತ್ತು–ಅರವತ್ತು ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಒಂದು ಸೈಟ್ ಅಲ್ಲಿ ಹನ್ನೆರಡು ಲಕ್ಷ ರೂ. 30X40 ಸೈಟು ಇವತ್ತು ಅಲ್ಲಿ ಹನ್ನೆರಡು ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. 30X40 ಸೈಟುಗಳನ್ನು ಮಾಡುವುದಕ್ಕೆ ಸುಮಾರು ಅರವತ್ತು ಸೈಟುಗಳನ್ನು ಮಾಡುವುದಕ್ಕೆ ಮಾರುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಆ ಸೊಸೈಟಿಯವರು ಎಂಥ ಬುದ್ಧಿವಂತರು ಎಂದರೆ ಇವರು ಬಿಡಿಎ ನವರನ್ನೇ ಕಾಯಲಿಲ್ಲ ಅವರು. 1992ನೇ ಇಸವಿಯಲ್ಲಿ ಪ್ಲಾನ್ ಆಯಿತಲ್ಲಾ, ಆಮೇಲೆ ಐದು–ಆರು ವರ್ಷ ಸುಮ್ಮನೆ ಇದ್ದರು. ಏಳನೇ ವರ್ಷ ಏನು ಮಾಡಿದರು, ಆ ಪಾರ್ಕ್‌ಗಳು ಏನು ಇದ್ದವು, ಅವುಗಳನ್ನೆಲ್ಲಾ ರಿಜಿಸ್ಟರ್ ಮಾಡಿದರು. ನನ್ನ ಹತ್ತಿರ ರಿಜಿಸ್ಟರ್ ಕಾಪಿ ಇದೆ. ಬೆಂಗಳೂರು ನಾರ್ತ್ ಸಬ್ ರಿಜಿಸ್ಟ್ರಾರ್‌ರವರ ಆಫೀಸ್‌ನಲ್ಲಿ ಪಾರ್ಕ್‌ನ್ನೇ ರಿಜಿಸ್ಟರ್ ಮಾಡಿದರು. ಈ ಬಿಡಿಎ ಪ್ಲಾನನ್ನು ಮಾಡಿಕೊಡುವುದಕ್ಕೆ ಮುಂಚೆಯೇ ಎಷ್ಟು ಅಡ್ವಾನ್ಸ್ ಆಗಿ ಅವರಿಗೆ ಗೊತ್ತಿತ್ತು. ಬಿಡಿಎ ಹತ್ತಿರ ಹೋದರೆ ನಾವು ಕಾಸು ಕೊಟ್ಟರೆ ಗ್ಯಾರಂಟಿ ಮಾಡಿಸಿಕೊಂಡು ಬರುತ್ತೇನೆ ಎಂಬ ನಂಬಿಕೆಯ ಮೇಲೆ ಬಿಡಿಎ ಬಗ್ಗೆ confidence ಇತ್ತು. ನಮಗೆ ಅವರು ಗ್ಯಾರಂಟಿ ಅವರು ಪ್ಲಾನ್‌ನ್ನು ಮಾಡಿಕೊಡುತ್ತಾರೆ. ಹಣ ಕೊಟ್ಟರೆ ಎಲ್ಲಾ ನಡೆಯುತ್ತದೆ ಎಂದು ಹೇಳಿ ಬೆಂಗಳೂರು ನಾರ್ತ್ ರಿಜಿಸ್ಟ್ರಾರ್‌ರವರ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸಿಕೊಡುತ್ತಾರೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಅಧ್ಯಕ್ಷರೆ, ಏನು ಮಾಡಿಫೈಡ್ ಪ್ಲಾನನ್ನು ಮಾಡುತ್ತಾರೆ, ಹೌಸಿಂಗ್ ಸೊಸೈಟಿಯವರು ಮೊದಲು 250–300 ಎಕರೆಯನ್ನು ಅಕ್ವೈರ್ ಮಾಡುತ್ತಾರೆ. 30 ಪರ್‌ಸೆಂಟ್ ರಸ್ತೆ ಮತ್ತೆ ಸಿಎ ಲ್ಯಾಂಡ್ ಎಲ್ಲಾ ಸೇರಿ 40 ಪರ್‌ಸೆಂಟ್ ಏನು ಬಿಡುತ್ತಾರೆ, ಆ ರೀತಿ ಬಿಟ್ಟಮೇಲೆ ಏನು ಮಾಡುತ್ತಾರೆ, ಕೊರಚಲು ಮತ್ತೊಂದು ಮಗದೊಂದು ತೋರಿಸಿ ಇದೆಲ್ಲಾ ಮಾಡಿ ಮಾರಿಬಿಟ್ಟು ರಿಜಿಸ್ಟರ್ ಮಾಡಿಕೊಟ್ಟುಬಿಡುತ್ತಾರೆ. ಅದಾದಮೇಲೆ ಮತ್ತೊಂದು ಅರ್ಜಿಯನ್ನು ಕೊಡುತ್ತಾರೆ. ನಮ್ಮ ಜಾಗ ಅಷ್ಟು ಇಷ್ಟು ಇತ್ತು. ಅದು ಹೊರಟುಹೋಗಿದೆ, ಆದ್ದರಿಂದ ಇದೇನು ಕೊಟ್ಟಿದ್ದೇವೆ, ಇದರಲ್ಲಿ ಸಿಎ ಲ್ಯಾಂಡ್ ಇದೆ, ಇದನ್ನು ದಯಮಾಡಿ ನಮಗೆ ಮತ್ತೆ ಮಾಡಿಫೈಡ್ ಪ್ಲಾನನ್ನು ಮಾಡಿಕೊಡಿ ಎಂದು ಕೊಡುತ್ತಾರೆ. ಒಬ್ಬರು ಡೆಪ್ಯುಟಿ ಕಮಿಷನರ್, ಟೌನ್ ಪ್ಲಾನಿಂಗ್ ಡೈರೆಕ್ಟರ್ ಅವರ ಸಹಿಯನ್ನು ಅವರೇ ಹಾಕಿದ್ದರು. ಕಮಿಷನರ್ ಸಹಿಯನ್ನೂ ಅವರೇ ಹಾಕಿದ್ದರು. ಚೀಫ್ ಇಂಜಿನಿಯರ್ ಸಹಿಯನ್ನೂ ಅವರೇ ಹಾಕಿದ್ದರು. ಎಲ್ಲಾ ಹಾಕಿದ್ದರು. ನಾನು ನಾಲ್ಕೈದು ತಿಂಗಳ ಕಾಲ ಮಂತ್ರಿಯಾದಾಗ ಅದನ್ನು ಹಿಡಿದು ಸಸ್ಪೆಂಡ್ ಮಾಡಿ ಎಲ್ಲಾ ಆಯಿತು. ಇವತ್ತು ಅವರು ಇಲ್ಲ. ಅದಾದಮೇಲೆ ಅದನ್ನು ಲೋಕಾಯುಕ್ತಕ್ಕೆ ಕೊಟ್ಟೆವು. ಆಮೇಲೆ

ಅದು ಸತ್ತುಹೋಯಿತು. ಈ ದಂಧೆ ಕೇವಲ ಒಂದು ಸೂಸೈಟಿಯಲ್ಲಿ ನಡೆಯುತ್ತಿಲ್ಲ, ಬೆಂಗಳೂರು ನಗರ ವ್ಯಾಪ್ತಿಯಲ್ಲಿರತಕ್ಕ ಸುಮಾರು ಹೌಸಿಂಗ್ ಸೊಸೈಟಿಗಳಲ್ಲಿ ಇಂಥವುಗಳು ನಡೆದಿವೆ. ನಾವು ಕ್ಲೀನ್ ಆಗಿ ಒಂದು ಕಡೆಯಿಂದ ಪರಿಶೀಲನೆ ನಾವು ಮಾಡಿದರೆ ಗೊತ್ತಾಗುತ್ತದೆ. ಇದು 25–30 ವರ್ಷದಿಂದ ನಡೆದುಕೊಂಡು ಬಂದಿರತಕ್ಕ ಸಾರೋದ್ಧಾರವಾದ ಒಂದು ಬೆಳವಣಿಕೆ. ಏನು ಸನ್ಮಾನ್ಯ ಅಶೋಕ್‌ರವರು ಹೇಳುತ್ತಿದ್ದಾರೆ, ಈ ದಂಧೆಯಲ್ಲಿ ದುಡ್ಡು ಮಾಡುವುದಕ್ಕೆ ಇದು ಎರಡನೇ ಮುಖ. ಅವರೇನು ಇವತ್ತು ಮಾಡಿಫೈಡ್ ಪ್ಲಾನ್ ಮಾಡಿದ್ದಾರೆ, ಅದಕ್ಕೆಲ್ಲಾ ಕಾರಣ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿರುವ ಅಧಿಕಾರಿಗಳು. ಅವರೇ ಹೇಳುತ್ತಾರೆ, ಇದು ಸಿಎ ಲ್ಯಾಂಡ್ ಎಂದು, ಅದಾದಮೇಲೆ ತಕ್ಷಣ ಹೇಳುತ್ತಾರೆ, ಇಲ್ಲಾ ನಾವು ಕೊಡುವಾಗ ಎಲ್ಲೋ ಒಂದು ಅಜಾಗರೂಕತೆಯಿಂದ ಅವರ ಜಾಗವನ್ನು ನಾವು ಜಾಸ್ತಿ ಮಾಡಿಬಿಟ್ಟಿದ್ದೇವೆ, ಇದನ್ನು ಮತ್ತೆ ಮಾಡಿಫೈ ಮಾಡಬಹುದು ಎಂದು ಹೇಳುತ್ತಾರೆ. ನನ್ನ ಹೈಕೋರ್ಟಿನಲ್ಲಿ ನಾಲ್ಕು ಕೇಸ್ ನಡೆಯುತ್ತಿದೆ. ಒಂದು ಸಿಪಿಡಬ್ಲ್ಯುಡಿ ಕ್ವಾಟರ್ಸ್ ಹಿಂದುಗಡೆ ನಾಲ್ಕೂವರೆ ಎಕರೆ ಜಾಗ. ನಾನೇ ಮಂತ್ರಿಯಾಗಿದ್ದಾಗ, ಆ ಜಾಗಕ್ಕೆ ಅಧಿಕಾರಿಗಳನ್ನೆಲ್ಲಾ ಕರೆದುಕೊಂಡು ಹೋಗಿ ಇದು ಆಟದ ಮೈದಾನ ಎಂದು ಡಿಕ್ಲೇರ್ ಮಾಡಿದರೆ, ಒಬ್ಬ ಯಾರೋ ಖಾಸಗಿ ವ್ಯಕ್ತಿ 28, 30 ವರ್ಷದ ದಿಂದ ಹಿಂದೆ ತೆಗೆದುಕೊಂಡಿದ್ದ ಎಂದು ಅರ್ಜಿ ಹಾಕಿಸಿ ಹೈಕೋರ್ಟಿನಿಂದ ಒಂದು ಡೈರೆಕ್ಷನ್ ಕೊಡಿಸುತ್ತಾರೆ. ಮರು ಪರಿಶೀಲನೆ ಮಾಡಿ ಎಂದು ಡೈರೆಕ್ಷನ್ ಕೊಡಿಸುತ್ತಾರೆ. ತಿರುಗಿ ಮರು ಪರಿಶೀಲನೆ ಮಾಡುವಾಗ ಬರೆಯುತ್ತಾರೆ, ಒಂದು ಮಹಜರ್ ಬರೆಯುತ್ತಾರೆ. ನಾವು ಸ್ಥಳಕ್ಕೆ ಭೇಟಿ ನೀಡಲಾಗಿ ಇದು ಖಾಲಿ ಇರುವುದರಿಂದ ಇವರಿಗೆ ಮತ್ತೆ ನಾವ್ಯಾಕೆ ಕೊಡಬಾರದು ಎಂದು ಬರೆಯುತ್ತಾರೆ. ಆಟದ ಮೈದಾನ ಮಾಡುವವರೂ ಇವರೇ. ಪಾರ್ಕ್ ಎಂದು ತೋರಿಸುವವರೂ ಇವರೇ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಾಯಶಃ ಒಂದು ಮುಖವನ್ನು ನಾವು ನೋಡಿದ್ದೇವೆ. ಇನ್ನೊಂದು ಮುಖವನ್ನು ನಾವ್ಯಾರೂ ನೋಡುವುದಕ್ಕೆ ಆಗಲಿಲ್ಲ. ಆ ಇನ್ನೊಂದು ಮುಖದಲ್ಲಿ ಈ ರೀತಿ ಹೌಸಿಂಗ್ ಸೋಸೈಟಿಯವರ ದಂಧೆ ಕೋಟ್ಯಾಂತರ ರೂಪಾಯಿಯಷ್ಟು ಆಗಿದೆ. ಕೇವಲ ಇದು ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ, ಇನ್ನೊಬ್ಬರ ಕಾಲದಲ್ಲಿ ಎನ್ನುವುದಕ್ಕಿಂತ ಹೆಚ್ಚಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆದಾಗಿನಿಂದ ಇಲ್ಲಿಯವರೆಗೂ ಅವರಿಗೆ ಏನಾಗಿದೆ ಕೆಳಗಡೆ ಇರತಕ್ಕಂಥ ಅಧಿಕಾರಿಗಳಿಗೆ ಟ್ರಾನ್ಸ್‌ಫರ್ ಇಲ್ಲ. ಈ ಛೇರ್‌ನಿಂದ ಆ ಛೇರ್‌ನಲ್ಲಿ ಇರುತ್ತಾರೆ. ನಾಣು ನಾಲ್ಕು ತಿಂಗಳೂ ಕೂಡ ಪಬ್ಲಿಕ್ ಗ್ರೀವೆನ್ಸ್ ಮಾಡಿದೆ. 28–30, 40 ವರ್ಷದ ಕಡತಗಳೆಲ್ಲಾ ಒಂದು ಕಡೆ ಕೊಳೆಯುತ್ತಿದ್ದವು. ಅಲ್ಲೇ ಕುಳಿತುಕೊಂಡು ಪರಿಶೀಲಿಸಿದೆ. ಆದ್ದರಿಂದ ದಯಮಾಡಿ, ಈ ದಂಧೆ ನಿಲ್ಲಬೇಕು ಎಂದರೆ ಅಲ್ಲಿರತಕ್ಕಂಥ ಕೆಳ ಹಂತದಿಂದ ಮೇಲಿನವರೆಗೆ ವ್ಯವಸ್ಥಿತವಾಗಿ ಮಾಡಬೇಕಾಗುತ್ತದೆಯೇ ವಿನಹ, ಒಂದು ಹಂತ ಸಾರ್ವಜನಿಕರಿಗೆ ಗೊತ್ತಾಗುವುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತುಂಬಾ ಚೆನ್ನಾಗಿದೆ. ಇನ್ನೊಂದು ಕಡೆ ಇದೊಂದು ದೊಡ್ಡ ತಿಮಿಂಗಲದ ಕೋಟೆ. ಆದ್ದರಿಂದ ಏನು ಈ ಹೌಸಿಂಗ್ ಸೊಸೈಟಿಗಳು ಇವೆ ಈ ಹೌಸಿಂಗ್ ಸೊಸೈಟಿಗಳವರು ಮಾಡಿರತಕ್ಕ ದಂಧೆ ಏನು ಇದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕಿಂತ ವಿಭಿನ್ನವಾಗಿದೆ. ಇಂತಹದು ನೂರೆಂಟು ಕೇಸುಗಳು ಇವೆ. ದಯಮಾಡಿ ಏನಾದರೂ ಮಾಡಿ ಇದಕ್ಕೆ ಒಂದು ಮುಕ್ತಿ ಕಾಣಿಸದೇ ಹೋದರೆ ಇದು ನಡೆದುಕೊಂಡು ಹೋಗುತ್ತಲೇ ಇರುತ್ತದೆ. ಇದಕ್ಕೆ ಯಾವುದೇ ಕೊನೆಯೇ ಇರುವುದಿಲ್ಲ.

ಅಧ್ಯಕ್ಷರು : ಈಗ ಮಾನ್ಯ ಸೋಮಣ್ಣವರು ಮಂತ್ರಿ ಆಗಿದ್ದವರು. ಮಂತ್ರಿ ಆಗಿದ್ದಾಗ ಕೆಲವು ಪ್ರಕರಣಗಳನ್ನು ಹೊರಗೆಡವಿದ್ದಾರೆ. ಅವರಿಗೆ ಪೂರ್ಣ ಮಾಹಿತಿ ಇದೆ. ಈಗ ಏನಾದರು ಮುಕ್ತಿ ಕಾಣಿಸುವುದಕ್ಕೆ ಅವಕಾಶ ಇದೆಯಾ? ಪ್ರಜಾಪ್ರಭುತ್ವದ ವ್ಯವಸ್ಥೆಯ ಕೆಳಗಡೆ ಏನಾದರೂ ಮಾಡಬಹುದಾ? ನಿಮ್ಮ ಅನುಭವದಲ್ಲಿ ಎರಡು ಮಾತು ಹೇಳಿ. ನೋಡೋಣ, ಈ ದೇಶದ ಜನಕ್ಕೆ ಅರ್ಥ ಆಗಲಿ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ನಾನು ಸತ್ಯ ಹೇಳುತ್ತೇನೆ. ಈ ಸದನದಲ್ಲಿ ನಾನು ಪಕ್ಷಾತೀತವಾಗಿ ಮಾತನಾಡಬೇಕಾದರೆ ಇದೊಂದು ರೀತಿ ಬೆಂಗಳೂರು ನಗರದಲ್ಲಿ ಎಲ್ಲರಿಗೂ ಕೂಡ ಏನೋ ಇದು ಒಂದು ದೊಡ್ಡ ಜಾಲ ಇದೆ. ಈ ಜಾಲವನ್ನು ಸರಿ ಮಾಡಬಹುದು. ಯಾವಾಗ ಎಂದರೆ ಎಲ್ಲೋ ಒಂದು ಕಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿರತಕ್ಕಂಥ ಕೆಳಹಂತದ ಎಲ್ಲಾ ಅಧಿಕಾರಿಗಳನ್ನು ಬದಲಾವಣೆ ಮಾಡಬೇಕು. ಮತೆ ಕಡತಗಳೇ ಇಲ್ಲ. ನಾನು ನಾಲ್ಕು ತಿಂಗಳು ಅಲ್ಲಿ ನನ್ನ ಕಲಿತ ಸಾಹಸ ಖರ್ಚು ಮಾಡಿ ಏನೆಲ್ಲಾ ಒಂದಷ್ಟು ಮಾಡಿದೆವು. ಇದು ಮಾಡಬೇಕಾದರೆ ಖಚಿತವಾದ ಕ್ರಮ ತೆಗೆದುಕೊಳ್ಳುವಾಗ ಯಾರದ್ದೂ ಕೂಡ ಬೇರೆ ಬೇರೆ ರೂಪದ ಪ್ರೋರ್ಸ್‌ಗಳು ಅಧಿಕಾರಿಗಳ ಮೇಲೆ ಬೀಳದೇ ಹೋದರೆ ಏನೆಲ್ಲಾ ಮಾಡುವುದಕ್ಕೆ ಸಾಧ್ಯ ಇದೆ ಅಧ್ಯಕ್ಷರೆ, ಯಾವುದೂ ದೊಡ್ಡದೇನೂ ಅಲ್ಲ. ಮಾಡಬಹುದು ಯವಾಗ, ಇವನು ನಮ್ಮವನು, ಇವನು ನಮ್ಮ ಅಣ್ಣ ಮಗ, ನಮ್ಮ ಚಿಕ್ಕಪ್ಪನ ಮಗ, ನಮ್ಮ ಮಾವನ ಮಗ, ನಮ್ಮ ನೆಂಟ ಎಂದು ಹೇಳುವುದನ್ನು ಬಿಟ್ಟರೆ ಈ ತಿಮಿಂಗಿಲಗಳನ್ನು ಬಲಿ ಹಾಕುವಂತಹದು ದೊಡ್ಡದೇನೂ ಅಲ್ಲ. ಈ ಒಂದು ಕೂಪ ಮಂಡೂಕಗಳು 25-30 ವರ್ಷದಿಂದ ಇದೆ. ಇದನ್ನು ಸರಿ ಮಾಡಬೇಕಾಗಿದೆ.

ಅಧ್ಯಕ್ಷರು : ಇಂಟರ್‌ಫಿಯರೆನ್ಸ್.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದೇ ಒಂದು ವಿಚಾರ ಅಧ್ಯಕ್ಷರೆ, ಮಾನ್ಯ ಸೋಮಣ್ಣನವರೇ ಬಿಡಿಎ ಮಂತ್ರಿಯಾಗಿದ್ದಾಗ ಇಲ್ಲಿ ಬಿಲ್ ಇಂಟ್ರಡ್ಯೂಸ್ ಮಾಡುವಾಗ ನಾನು ಹೇಳಿದೆ. ರೀ-ಕನ್ವೆ ಮಾಡುವ ಪ್ರಾವಿಷನ್ ತರಬೇಡಿ ಅಮೆಂಡ್ ಮೆಂಟ್ ಮಾಡಿ ಎಂದೆ...

ಶ್ರೀ ವಿ. ಸೋಮಣ್ಣ : ಅದೇ ತಪ್ಪು ತಿಳಿದುಕೊಂಡಿರುವುದು. ನಾವು ಮಾಡಿದ ಬಿಲ್ಲಿನಿಂದ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬಿಡಿಎ ಆಕ್ಟ್ ಅಮೆಂಡ್ ಆಯಿತಲ್ಲಾ, ರೀ-ಕನ್ವೆ ಮಾಡಬಹುದು ಎಂದು.

Sri V. Somanna : I am so sorry, You have mistaken. ನಾನು ಮಾಡಿದ ಬಿಲ್, ಇವತ್ತು ಲಕ್ಷಾಂತರ ಬಡವರಿಗೆ ಅನುಕೂಲ ಆಗಿದೆ. ಮಾನ್ಯ ಅಶೋಕ್ ಅವರು ಇಲ್ಲಿದ್ದಾರೆ. ಲಕ್ಷಾಂತರ ಬಡವರಿಗೆ ಏನು ಬೆಂಗಳುರು ಅಭಿವೃದ್ಧಿ ಪ್ರಾಧಿಕಾರದವರು ಹಿಂಸೆ ಕೊಡುತ್ತಿದ್ದರು ಹತ್ತು ವರ್ಷದ ಹಿಂದೆ ಡಿಲೀಟ್ ಮಾಡುತ್ತಾರೆ, ಮತ್ತೆ ಸೇರಿಸುತ್ತಾರೆ. ಅಕ್ವಿಜಿಷನ್ ಮಾಡುವುದಕ್ಕೆ ಮೂವ್ ಮಾಡುತ್ತಾರೆ, ಮತ್ತೆ ಹಾಳು ಮಾಡುತ್ತಾರೆ. ಇವೆಲ್ಲಕ್ಕೂ ಒಂದು ಮೋಕ್ಷ ಕಾಣಿಸಬೇಕು ಎಂದು 20:30, 30:40, 40:60ರಲ್ಲಿ ಮನೆ ಕಟ್ಟಿಕೊಂಡಿರತಕ್ಕಂಥ ಬಡವರು ಯಾರು ಇದ್ದಾರೆ, ಮಧ್ಯಮ ವರ್ಗದವರು ಯಾರು ಇದ್ದಾರೆ ಇಂತಹವರಿಗೋಸ್ಕರ ಆ ಬಿಲ್ಲನ್ನು ತಂದಿದ್ದು ಮಾನ್ಯ ಮಾಧುಸ್ವಾಮಿಯವರೇ. ಈ ಬಿಲ್ಲಿನಿಂದ ಲಕ್ಷಾಂತರ ಜನರಿಗೆ ಇವತ್ತು ಅನುಕೂಲ ಆಯಿತು. ಇದು ಮಾಡಿದ್ದು ತಪ್ಪು ಏನು ಅಂದರೆ; ಏನು ತಪ್ಪಾಯಿತು, ಅಧ್ಯಕ್ಷರೇ, ಎಂದರೆ ಕೋಆಪರೇಟಿವ್

ಸೊಸೈಟಿಯವರಿಗೂ, ಈ ಬಿಲ್‌ಗೂ ಸಂಬಂಧ ಇಲ್ಲ. ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯವರಿಗೂ ಈ ರೀತಿ ನಡೆದಿದೆಯಲ್ಲಾ ಈ ಜಾಲ. ಈ ಜಾಲದಲ್ಲಿ ಸಣ್ಣ ಪುಟ್ಟ ಬಡವರದ್ದು ಯಾರದ್ದೂ ಇಲ್ಲ ಇದರಲ್ಲಿ. ಆದ್ದರಿಂದ ದಯಮಾಡಿ ಮಾನ್ಯ ಮಾಧುಸ್ವಾಮಿಯವರು ಆ ಬಿಲ್ಲಿನ ಒಂದು ಆದ್ಯತೆ ಎಷ್ಟು ಎಂದು ಚಿಂತನೆ ಮಾಡಬೇಕಾಗಿದೆ. ನಾವು ಕೊಟ್ಟಂತಹ ಬಿಲ್ಲು, ಈ ಸದನ ಮಂಡಿಸಿದ ಬಿಲ್ಲು, ಕೇವಲ ಬಡವರಿಗೋಸ್ಕರ, ಮನೆ ಕಟ್ಟಿಕೊಂಡಿದ್ದವರಿಗೋಸ್ಕರ. ಇದು ಹತ್ತು ಎಕರೆ, 20 ಎಕರೆ, 50 ಎಕರೆ ಕೊಡುವುದಕ್ಕೆ ಬಿಲ್‌ನಲ್ಲಿ ಪ್ರಾವಿಜನ್ ಇಲ್ಲ. ಅದನ್ನು ಮಾಡಿಯೂ ಇಲ್ಲ. ಆವತ್ತಿನ ಬಿಲ್, ಇವತ್ತು ಏನು ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸಮಂಜಸ ಮಾಡಿ ಬಡವರಿಗೆ ಸಹಾಯ ಮಾಡಿದ್ದಾರೆ?, ಆ ಬಿಲ್ ಸಮಗ್ರವಾಗಿದೆ, ಸರಿಯಾಗಿದೆ. ಆದರೆ ಹೌಸಿಂಗ್ ಸೊಸೈಟಿಯವರು ಏನು ಮಾಡಿದ್ದಾರೆ; ಈ ಪಾಪದ ಕೂಸು ಹೌಸಿಂಗ್ ಸೊಸೈಟಿಯವರದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರದ್ದು. ಇದು ಸಣ್ಣ ಪುಟ್ಟ ಬಡವರದ್ದು ಅಲ್ಲ.

ಶ್ರೀ ಅಗರ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸಾರ್ ಇಷ್ಟು ದಿವಸ ಈ ಬೆಂಗಳೂರು ಸಿಂಗಾಪುರ ಆಗುತ್ತದೆ ಎಂದು ಹೇಳಿ ನಾವೆಲ್ಲಾ ಭಾವಿಸಿಕೊಂಡಿದ್ದೆವು. ಈ ಕಥೆಗಳನ್ನೆಲ್ಲಾ ಬೆಳಿಗ್ಗೆಯಿಂದ ಇಷ್ಟು ಹೊತ್ತು ಕೇಳುತ್ತಿದ್ದೇವಲ್ಲಾ, ನನಗೆ ಅನಿಸಿದ್ದು ಏನೆಂದರೆ ಬೆಂಗಳೂರು ಜನರನ್ನೂ, ನಮ್ಮನ್ನು ನಿಮ್ಮನ್ನೂ ಎಲ್ಲಾ ಸೇರಿ ಮಂಗಾಪುರ ಮಾಡಿ ಇಟ್ಟಿದ್ದಾರೆ.

ಅಧ್ಯಕ್ಷರು : ನನಗೇನು ಅನಿಸುತ್ತದೆ ಮಾನ್ಯ ಜ್ಞಾನೇಂದ್ರ ಅವರೇ, ಇದು ಚರ್ಚೆ ಆಗುತ್ತಿದೆ. ಇದು ಒಂದು ರೀತಿ ಕಥೆ , ಏನು ನಡೆಯುತ್ತಿದೆ, ಏನು ಎಂದು ನಮಗೆ ಅರ್ಥ ಆಗುವುದಿಲ್ಲ. ಈ ಚರ್ಚೆಯಿಂದ...

ಶ್ರೀ ಆರ್. ಅಶೋಕ್ : ನಿಜವಾದ ಘಟನೆ ಇದು.

(ಗೊಂದಲ)

ಅಧ್ಯಕ್ಷರು : ಈ ಚರ್ಚೆಯಿಂದ ಈ ಅವ್ಯವಹಾರ ಏನು ಇದೆ. ಈ ಚರ್ಚೆಯಿಂದ ಬೆಂಗಳೂರು ಜನತೆಗೆ ಈ ನಾಡಿನ ಜನರಿಗೆ ಅನುಕೂಲ ಆಗುವುದಾದರೆ ಮುಂದೆ ಇಂತಹ ಅಕ್ರಮಗಳು ಯಾವುದೇ ಸರ್ಕಾರ ಇರಲಿ, ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇರಲಿ, ನಡೆಯದ ಹಾಗೆ ಏನಾದರೂ ಬಿಗಿ ಕಾನೂನುಗಳು, ಹಾಗೆಲ್ಲಾ ಮಾಡುವುದಾದರೆ, ಸದನಕ್ಕೆ ಒಂದು ದೊಡ್ಡ ಗೌರವ ಬರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾಡಬಹುದು ಸಾರ್.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಕಥೆ ಅಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ಮಾನ್ಯ ಸೋಮಣ್ಣನವರು ಏನು ಹೇಳುತ್ತಾರೆ ಈಗ ಬಿಡಿಎ ಹುಟ್ಟಿದಾಗಿನಿಂದಲೂ ದಂಧೆ ನಡೆದಿದೆ ಎಂದು ಹೇಳುತ್ತಾರೆ. ಆ ಸರ್ಕಾರ, ಈ ಸರ್ಕಾರ, ಆ ಪಕ್ಷ, ಈ ಪಕ್ಷ ಎಂದಲ್ಲ. ಯಾರೇ ಬಂದರೂ ಸಹ ದಂಧೆ ನಡೆಸತಕ್ಕವರು ಇರುತ್ತಾರೆ. ದಂಧೆ ನಡೆಸತಕ್ಕವರಿಗೆ ಸರ್ಕಾರ ನಡೆಸುವವರ ಪ್ರೋತ್ಸಾಹ, ರಕ್ಷಣೆ ಇದೆ ಎನ್ನತಕ್ಕ ಮಾತು ಬೇರೆ ಹೇಳಿದ್ದಾರೆ. ಇದನ್ನು ನಿಲ್ಲಿಸುವುದು ಹೇಗೆ ಎಂಬುದನ್ನು ತಾವು ದಯಮಾಡಿ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನೀವು ಆದೇಶ ಮಾಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾಳೆ ಈ ಚರ್ಚೆ ಕಂಟಿನ್ಯೂ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ತಾವೇ ಅಸಹಾಯಕರಾದರೆ ನಮ್ಮ ಗತಿ ಏನು?

ಅಧ್ಯಕ್ಷರು : ಅಸಹಾಯ ಎಂದಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಕಥೆಯಲ್ಲ, ವಾಸ್ತವ, ಸದನದಲ್ಲಿ ಇದಕ್ಕೆ ಒಂದು ಭದ್ರವಾದ ಕಾನೂನು ಆಗಬೇಕು, ತನಿಖೆ ಆಗಬೇಕು. ಇದು ಕಥೆಯಲ್ಲ, ವಾಸ್ತವ. ನಿಮಗೆ ಇದು ಕಥೆ ಎಂದು ಕೇಳುತ್ತಿರಬಹುದು.

ಅಧ್ಯಕ್ಷರು : ಸರ್ಕಾರಕ್ಕೆ ಸಲಹೆ ಕೊಡಿ. ಸರ್ಕಾರಕ್ಕೆ ಸಲಹೆ ಕೊಡಿ. ಸರ್ಕಾರ ಇನ್ನು ಮುಂದಾದರೂ ಅದನ್ನು ಬಿಗಿ ಮಾಡಲಿ ಎಂದು ಹೇಳುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಒಂದು ಮಾತು ಕೇಳಿದಿರಿ. ಇದನ್ನು ತಡೆಯುವುದಕ್ಕೆ ಏನು ಮಾಡಬೇಕು ಎಂದು ಸಲಹೆ ಕೇಳಿದಿರಿ. ಇದರ ರುಚಿ ನೋಡದೇ ಇದ್ದವರನ್ನು ನಗರಾಭಿವೃದ್ಧಿ ಸಚಿವರನ್ನಾಗಿ ಬಿಡಿಎಗೆ ಇಡಬೇಕು.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನಾರಾಯ ಪಟ್ಟಣ) : ಮೇಯುವವರಿಗೆ ಹೇಗೆ ಮೇಯುವುದು ಎಂದು ಚೆನ್ನಾಗಿ ಗೊತ್ತಿರುತ್ತದೆ. ಬಹಳ ಜನ ತಬ್ಬಲಿ ಶಾಸಕರಿಗೆ ಬೆಂಗಳೂರಲ್ಲಿ ಮೊಮ್ಮಗ ಯಾವನಾದರೂ ಕೇಳಿದರೆ ನಮ್ಮ ಅಜ್ಜ ಎಂಎಲ್ಎ ಆಗಿದ್ದ ಎಂದರೆ ನಮಗೆ ಕೂತುಕೊಳ್ಳುವುದಕ್ಕೆ, ತಪಸ್ಸು ಮಾಡುವುದಕ್ಕೆ ನಾಲ್ಕು ನಾಲ್ಕು ಅಡಿ ಜಾಗ ಇಲ್ಲ. ಅಂತಹವರನ್ನು ಬಿಡಿಎಗೆ ಇಡಿ ಸ್ವಾಮಿ. ಆಗ ಅದು ಸಾಧ್ಯ. ಇಲ್ಲದೇ ಇದ್ದರೆ ತಿಂದು, ನುಂಗಿ ಮತ್ತೆ ಕಥೆ ಹೇಳುವವರನ್ನೇ ನೀವು ಮತ್ತೇ ಬಿಡಿಎಗೆ ಇಟ್ಟರೆ ಮತ್ತೆ ಬೆಂಗಳೂರನ್ನು ಲೂಟಿ ಮಾಡುತ್ತಾರೆ. ಸಾಧ್ಯ ಇಲ್ಲ, ಕಥೆ ಹೇಳಿಕೊಂಡು ಇಲ್ಲಿ ಹೇಳಿದ್ದನ್ನೇ ಹೇಳುತ್ತಾರೆ. ದೂರು ಮಾಡುತ್ತಲೇ ಇರುತ್ತಾರೆ. ಇದನ್ನು ಸರಿಪಡಿಸಲಿಕ್ಕೆ ಸಾಧ್ಯ ಇಲ್ಲ. ಮೊದಲು ಅಧಿಕಾರಿಗಳು ಎಲ್ಲೋ ಗ್ಯಾಲರಿಯಲ್ಲಿ ಕುಳಿತುಕೊಂಡು ನಾವೆಲ್ಲಾ ಹರಿಶ್ಚಂದ್ರರು ಎಂದು ಹೇಳುತ್ತಾರೆ. ಮೊದಲು ನಮ್ಮ ಆಸ್ತಿ ಎಷ್ಟು ಇದೆ ಎಂದು ಘೋಷಣೆ ಆಗಲಿ. ಮುಂದಿನ ಬೆಂಚಿನವರಿಂದ ಹಿಡಿದು ಹಿಂದಿನ ಬೆಂಚಿನ ವರೆಗೆ ಈ ರಾಜ್ಯದ ರಾಜಕಾರಣ ಮಾಡಿದವರಿಗೆ ಎಷ್ಟೆಷ್ಟು ಎಕರೆ ಜಮೀನು ಇದೆ ಎನ್ನತಕ್ಕದ್ದು ಮೊದಲು ಈ ಸದನದಲ್ಲಿ ತೀರ್ಮಾನ ಆಗಲಿ. ಆಮೇಲೆ ಇಲ್ಲಿ ಚರ್ಚೆಗೆ ಕೊಡಲಿ. ಸುಮ್ಮನೆ ಮಾತನಾಡಿ ಏನಾಗಿದೆ? ನಮ್ಮ ಊರಲ್ಲಿ ಲೂಟಿ ಮಾಡಿದ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್. ಸಸ್ಪೆಂಡ್ ಮಾಡಿದ್ದು ಯಾರನ್ನು ಅಂದರೆ ಒಬ್ಬ ಕ್ಯಾಷಿಯರ್ ಅನ್ನು. ಏಕೆಂದರೆ ಇವರಿಗೆ ಯಾರ ರೆಕ್ಮಂಡೇಷನ್ ಇಲ್ಲ, ಇವನು ಹಿಂದುಳಿದ ವರ್ಗದವನು ಎಂದು. ನುಂಗಿದವನನ್ನು ನೀಟಾಗಿ ರಿಟೈರ್ಡ್ ಮಾಡಿ ಹಾರ ಹಾಕಿ ಮರಿಕುಯ್ದು ಅವನನ್ನು ಸನ್ಮಾನ ಮಾಡಿ ಕಳುಹಿಸಿದರು. ಈ ಸದನದಲ್ಲಿ ಚರ್ಚೆ ಆಗಬೇಕಾದರೆ ವಸ್ತು ಸ್ಥಿತಿ, ಮಾತನಾಡಲಿಕ್ಕೆ ನಮಗೆಲ್ಲಾ ಅವಕಾಶ ಕೊಟ್ಟಿದ್ದಾರೆ. ಇಡೀ ರಾಜ್ಯದ ಐದು ಕೋಟಿ ಜನ ಬಹಳ ಜವಾಬ್ದಾರಿಯಿಂದ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾವು ಅವಿವೇಕ ಮಾಡಿ, ಈ ರಾಜ್ಯದ ಅಧಿಕಾರಿಗಳಿಗೋ ಅತವಾ ಈ ರಾಜ್ಯದ, ಇನ್ನಾರಿಗೋ, ಬಡವರಿಗೋ ತೋರಿಸುವುದಲ್ಲ. ಆ ಕಡೆಯವರು ಈ ಕಡೆಗೆ ತೋರಿಸುವುದು, ಈ ಕಡೆಯವರು ಆ ಕಡೆಗೆ ತೋರಿಸುವುದಲ್ಲ. ಈ ಕಡೆ ಇದ್ದು ಹೋದವರೆಲ್ಲಾ ಆ ಕಡೆಗೆ ಕೆಲವರು

ಇದ್ದಾರೆ. ಈ ಕಡೆ ಇದ್ದವರು ಅಲ್ಲಿ ಕುಳಿತಿದ್ದಾರೆ. ಒಂದು ರೀತಿ ಕುರುಕ್ಷೇತ್ರದ ತರಹ. ನೀನು ಇವತ್ತು ಭೀಮನ ಪಾರ್ಟು ಮಾಡು, ನಾನು ದುರ್ಯೋಧನನ ಪಾರ್ಟು ಮಾಡುತ್ತೇನೆಂದು ಬೆಳಿಗ್ಗೆ ಎಲ್ಲಾ ಒಟ್ಟಿಗೆ ಕುಳಿತುಕೊಂಡು ವ್ಯವಹಾರ ಮಾಡುತ್ತಾರಲ್ಲಾ, ಮರಿ ಕುಯ್ಸಿಸಿಕೊಂಡು. ಅದು ಆಗಬಾರದು. ಆ ತರಹದ ಪ್ರಾಮಾಣಿಕತೆ ಇದ್ದರೆ ಶಾಸನಸಭೆಗೆ ಮೆಟ್ಟಿಲು ಹತ್ತಬೇಕಾದರೆ ನಮ್ಮ ಆಸ್ತಿಗಳು ಏನು? ನಮ್ಮ ದಂಧೆ ಎಲ್ಲೆಲ್ಲಿ ಆಗಿ, ನಮ್ಮ ಮಕ್ಕಳು, ಮರಿಗಳು, ಎಷ್ಟು ಜನರ ಹೆಸರಿನಲ್ಲಿ ಆಸ್ತಿ ಇದೆ? ಅದನ್ನು ಘೋಷಣೆ ಮಾಡಿ ಮನ ಬಿಚ್ಚಿ ಮಾತನಾಡಲಿ. ಈ ರಾಜ್ಯದ ಐದು ಕೋಟಿ ಜನರಿಗೆ ನ್ಯಾಯ ಒದಗಿಸಿ ಕೊಡಲು ಸಾಧ್ಯ ಎನ್ನತಕ್ಕ ಮಾತನ್ನು ಹೇಳುತ್ತೇನೆ. ನಾವು ಶಾಸಕರಾಗಿ ಬಹಳ ಕಷ್ಟ ಇದೆ. ನಮಗೆ ಗೊತ್ತಿರುವಂತಹ ಸತ್ಯವನ್ನೂ ಕೂಡ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ನಾವು ಹೊಸಬರು. ನಾವು ಎಲ್ಲಿ ಅಂದರೆ ಯಾರು ತಪ್ಪು ತಿಳಿದುಕೊಳ್ಳುತ್ತಾರೋ ಏನೆಂದು ಕೊಳ್ಳುತ್ತಾರೋ? ನಾವು ಹಳ್ಳಿಯಿಂದ ಬಂದವರು. ನಮಗೆ ಈ ಕಥೆ ಕೇಳುತ್ತಿದ್ದರೆ, ಮಾನ್ಯ ಮಾಧುಸ್ವಾಮಿ, ಶ್ರೀ ರಾಮರೆಡ್ಡಿಯವರು ಹೇಳುವ ಕಥೆ ಎಲ್ಲಾ ಕೇಳುತ್ತಿದ್ದರೆ, ಇದೇನು ಬೆಳಿಗ್ಗೆ ಐದು ಗಂಟೆಯ ಕನಸಾ? ಇದು ಏನು? ಶ್ರೀರಾಮರೆಡ್ಡಿಯವರೆಲ್ಲಾ ಐದು ಗಂಟೆ ಕನಸಲ್ಲಿ ಮಾತನಾಡುತ್ತಾರಾ, ಸತ್ಯವಾ ಎಂದು ಅನಿಸುತ್ತದೆ. ಇದೆಲ್ಲಾ ನೀವು ಕೇಳಬಹುದು. ಜನ ಹೊರಗಡೆಯವರು ಏನು ಹೇಳುತ್ತಾರೆ? ನಮಗೂ ಹಾಗೆಯೇ ಅನಿಸುತ್ತಿದೆ. ಏನೂ ಆಗುವುದಿಲ್ಲ. ಸೆಷನ್ ಮುಗಿದು ಹೋಗುತ್ತದೆ. ಇದಕ್ಕೆ ಮೆತ್ತಗೆ ನೀರು ಹಾಕಿ ಸೋಪು ಹಾಕಿ ತೊಳೆದು ಹೋಗುತ್ತೇವೆ. ಮತ್ತೆ ಸಮಸ್ಯೆ ಶುರುವಾಗುತ್ತದೆ. ಅಲ್ಲಿ ಊರಿನಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ನಮ್ಮ ಊರಿನಲ್ಲಿ ಯಾವನೋ ಪಾಪ ಬಾಯಿ ಬಡಿದುಕೊಳ್ಳುತ್ತಿದ್ದಾನೆ. ನಮ್ಮ ಊರಿಗೆ ಒಂದು ಟಿ.ಸಿ. ಇಲ್ಲ, ಅವನಿಗೆ ಟಿ.ಸಿ. ಕೊಡುವುದಕ್ಕೂ ಆಗುವುದಿಲ್ಲ. ಹರಾಜು ಹಾಕಿ, ಅಂತಹ ತಾಕತ್ತು ಇದ್ದರೆ ಇಂತಹ ಆಸ್ತಿ ಯಾರದ್ದೇ ಇದ್ದರೂ ಹರಾಜು ಹಾಕಿ. ಈ ರಾಜ್ಯದ ಬಡವನಿಗೆ ಬೇಕಾದಷ್ಟು ಸವಲತ್ತು ಕೊಡಬಹುದು. ಇವತ್ತು ಒಂದು ಟಿ.ಸಿ ಕೊಡುವುದಕ್ಕೆ ಆಗಿಲ್ಲ, ಜನತಾ ಮನೆಯಲ್ಲಿರುವವರಿಗೆ ಒಂದು ನಲ್ಲಿ ನೀರು ಕೊಡುವುದಕ್ಕೆ ಯೋಗ್ಯತೆ ಇಲ್ಲ. ಎಷ್ಟು ಸರ್ಕಾರ ಬಂದಿದೆ. ಸ್ವಾತಂತ್ರ್ಯ ಬಂದು 57 ವರ್ಷವಾಗಿದೆ. ಇವತ್ತೂ ಸ್ವಾಮಿ ಬಡವರ ಹೆಸರಿನಲ್ಲಿ ಮನೆ ಕೊಟ್ಟಿದ್ದೇ ಕೊಟ್ಟಿದ್ದು ಬಡವರು ಇಲ್ಲದೇ ಇರುವ ಕಡೆ. ಹುಡುಕಿ ಸ್ವಾಮಿ. ನಡೆಯಿರಿ ಸ್ವಾಮಿ, ಇನ್ನು ಎಲ್ಲಾ ಊರಲ್ಲೂ ಬಡವರು ಹಾಗೆಯೇ ಇದ್ದಾರೆ. ಯಾವುದನ್ನು ಮಾಡಿದರೂ ಕೂಡ ನಾವು ಹೇಳುವುದಕ್ಕೂ ಮಾಡುವುದಕ್ಕೂ ಬಹಳ ವ್ಯತ್ಯಾಸ ಇದೆ. ಅದು ಆಗಬಾರದು. ಈ ಸದನದಲ್ಲಿ ಗಂಭೀರವಾಗಿ ಚರ್ಚೆ ಆಗಬೇಕು. ಗಂಭೀರವಾದ ಚರ್ಚೆಗೆ ಕೂಡ ಅವಕಾಶ ಕೊಡಬೇಕು. ಇದಕ್ಕೆ ಸರಿಯಾದಂತಹ ಕ್ರಮ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ. ಇಲ್ಲದೇ ಹೋದರೆ ಸುಮ್ಮನೆ ಪೇಪರಿನವರಿಗೋಸ್ಕರ ನಮ್ಮ ಸುದ್ದಿ ಬಿಡುವುದಕ್ಕೋಸ್ಕರ ಆಗುವುದಾದರೆ ಬೇಡ. ಇಂತಹ ಚರ್ಚೆ ಆಗ ಕೂಡದು ಎಂಬುದು ನನ್ನ ವಿನಂತಿ ಸ್ವಾಮಿ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4.10 ಪಿಎಂ

(ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ತಮಗೆಲ್ಲರಿಗೂ ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೇನೆ. ಈಗ ಮಾನ್ಯ ಸದಸ್ಯರಾದ ಅಶೋಕ್‌ರವರು ಮೊದಲು ಮಾತನಾಡಿ, ಮುಗಿಸಲಿ. ಅನೇಕ ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದಾರೆ, ಎಂಟು ಗಂಟೆವರೆಗೂ ಚರ್ಚೆಯಾಗಲಿ, ಇವೊತ್ತೇ ಚರ್ಚೆ ಹಾಗೂ ಉತ್ತರ ಮುಗಿಯಬೇಕು, ಈಗ ಚರ್ಚೆಯಾಗಲಿ. ನನ್ನದೇನೂ ಅಡ್ಡಿಯಿಲ್ಲ. ನಾನು ಎಂಟು ಗಂಟೆವರೆಗೂ

ಕುಳಿತುಕೊಳ್ಳಲು ಸಿದ್ಧನಿದ್ದೇವೆ. ಈ ಕಡೆಯವರೂ ಮಾತನಾಡಲಿ, ಆ ಕಡೆಯವರೂ ಮಾತನಾಡಲಿ. ಈ ಕುರಿತು ಸಮಗ್ರವಾಗಿ ಒಂದು ಮಂಥನವಾಗಬೇಕು. ಈ ಮಂಥನದಿಂದ ಅಮೃತ ಬರುತ್ತದೋ, ವಿಷ ಬರುತ್ತದೋ, ನೋಡೋಣ. ಮುಂದೆ ಇಂತಹ ಅಕ್ರಮಗಳು,....ಅಕ್ರಮಗಳಾಗಿವೆಯೆಂದು ನಾನು ಹೇಳುವುದಿಲ್ಲ. ಹಾಗಿದ್ದಾಗ ಏನು ಮಾಡಬೇಕೆಂದು ಈ ಸದನ ಒಂದು ತೀರ್ಮಾನ ಕೈಗೊಳ್ಳಲಿ.

ಮಾನ್ಯ ಸದಸ್ಯರು : ಬಡವರಿಗೆ ವಿಷ ಬರುತ್ತದೆ, ದೊಡ್ಡವರಿಗೆ ಅಮೃತ ಬರುತ್ತದೆ!

ಶ್ರೀ ಕೆ. ಜಯಪ್ರಕಶ್ ಹೆಗ್ಡೆ : ಅಧ್ಯಕ್ಷರೆ, ಎಂಟು ಗಂಟೆಯವರೆಗೆ ಬೇಡ, ಚರ್ಚೆಗೆ ನಾಳೆ ಬೆಳಿಗ್ಗೆ 9 ಗಂಟೆಗೆ ಕುಳಿತುಕೊಳ್ಳೋಣ.

ಅಧ್ಯಕ್ಷರು : ಆ ತರಹ ಆಗುವುದಿಲ್ಲ. ಈಗ ಚರ್ಚೆ ಮಾಡಲು ಬೇರೆ ಬೇರೆ ವಿಷಯಗಳಿದ್ದರೂ ಐದು ಗಂಟೆಗೆ ಹೊರಟು ಹೋಗುತ್ತೇವೆಂದು ಆ ರೀತಿ ಹಿಂಸೆ ಮಾಡುವುದು ಸರಿಯಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ನಾಳೆ ಬೆಳಿಗ್ಗೆ 9 ಗಂಟೆಗೆ ಶುರು ಮಾಡಿ.

ಅಧ್ಯಕ್ಷರು : ಈ ಕುರಿತಾದ ಚರ್ಚೆಯಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಭಾಗವಹಿಸಬೇಕು. ಉತ್ತರ ನಿರೀಕ್ಷಿಸಬೇಕೆಂದರೆ ದಯವಿಟ್ಟು ಕುಳಿತುಕೊಳ್ಳಿ. ಇಲ್ಲದಿದ್ದರೆ, ಸುಮ್ಮನೆ ಐದು ಗಂಟೆಗೆ ಹೊರಟು ಹೋಗುತ್ತೇವೆ, ನಾಳೆ ತೆಗೆದುಕೊಳ್ಳಿ ಎಂದರೆ ಆಗುವುದಿಲ್ಲ, ಏಕೆಂದರೆ, ತಾವೆಲ್ಲರೂ ಒಪ್ಪಿಕೊಂಡಿರುವಂತೆ ಈ ಸದನ 5ನೇ ತಾರೀಖು ಮುಗಿಯುತ್ತದೆ. ಅನೇಕ ಪ್ರಮುಖ ವಿಷಯಗಳಿವೆ. ನುಸಿರೋಗ ಒಳಗೊಂಡಂತೆ ಚರ್ಚಿಸಲು ಇನ್ನೂ ಬೇರೆ ಬೇರೆ ವಿಷಯಗಳಿವೆ. ದಯಮಾಡಿ ತಾವು ಸಹಕರಿಸಬೇಕು. ಈಗ ಅಶೋಕ್‌ರವರು ಮಾತನಾಡಲಿ. If you are interested, ಕುಳಿತುಕೊಳ್ಳಿ. ಇಲ್ಲದಿದ್ದರೆ, ನಾನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವೊತ್ತು 8 ಗಂಟೆಯುವರೆಗೂ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಮಾನ್ಯ ಸದಸ್ಯರು : ಅಧ್ಯಕ್ಷರೆ, ಟೆಂಡರ್ ಕರೆದಿದ್ದಾರೆ, ಟೆಂಡರ್ ಕರೆದು ಹರಾಜು...

ಅಧ್ಯಕ್ಷರು : ತಡೆಯಿರಿ ಸ್ವಾಮಿ, ಈಗ ಅಶೋಕ್‌ರವರು ಮಾತನಾಡಲಿ. ಮಾತನಾಡಲು ಬಹಳಷ್ಟು ಮಾನ್ಯ ಸದಸ್ಯರುಗಳು ಇಂಟ್ರೆಸ್ಟ್‌ನಿಂದ ಇದ್ದಾರೆ. ಅವರೆಲ್ಲರಿಗೂ ಅವಕಾಶ ಕೊಡೋಣ. ಎಂಟು ಗಂಟೆಯವರೆಗೂ ಕುಳಿತುಕೊಳ್ಳಿ.

(ಒಬ್ಬ ಮಾನ್ಯ ಸದಸ್ಯರು ಮಾತನಾಡಲು ಎದ್ದು ನಿಂತರು)

ಸ್ವಲ್ಪ ತಡೆಯಿರಿ, ನೀವು ಹೊಸ ಸದಸ್ಯರಾಗಿದ್ದು, ನಿಮಗೇನೂ ಗೊತ್ತಾಗುವುದಿಲ್ಲ. ನನ್ನಂತೆಯೇ ನೀವೂ ಸಹ ಕತೆ ಕೇಳುತ್ತಿದ್ದೀರಿ! ನಿಮಗೇನು ಗೊತ್ತಾಗುತ್ತದೆ? ಇಲ್ಲಿ ಅನುಭವಸ್ಥರು, ತಿಳಿವಳಿಕೆ ಇರುವವರು ಹೇಳುತ್ತಾರೆ, ಕೇಳಿ ತಿಳಿದುಕೊಳ್ಳಿ. ದಯಮಾಡಿ ನೀವು ಕುಳಿತುಕೊಳ್ಳಿ. ಆ ಕತೆಗಳೆಲ್ಲಾ ನಿಮಗೇನು ಗೊತ್ತಿದೆ?! ತಿಳಿದುಕೊಳ್ಳಿ. ಹೊಸದಾಗಿ ಬಂದಿರುವ ಬಹಳಷ್ಟು ಸದಸ್ಯರು ಯುವಕರಿದ್ದೀರಿ, ಸ್ವಲ್ಪ ತಿಳಿದುಕೊಳ್ಳಿ.

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಇದು ಕಥೆಯಲ್ಲ, ಸತ್ಯ ಕಥೆ, ಕಣ್ಣೀರಿನ ಕಥೆ, ಕರ್ಮ ಕಥೆ! ಬೆಂಗಳೂರಿನಲ್ಲಿ ಸುಮಾರು ಎರಡೂವರೆ ಲಕ್ಷದಷ್ಟು ಜನರು ಅರ್ಜಿಗಳನ್ನು ಸಲ್ಲಿಸಿ ಅರ್ಕಾವತಿ ಬಡಾವಣೆಯಲ್ಲಿ ತಮ್ಮೆಗೆಲ್ಲರಿಗೂ ನಿವೇಶನಗಳು ದೊರಕುತ್ತದೆ, ಜೀವನದಲ್ಲಿ ಒಂದು ಮನೆ ಕಟ್ಟಿಕೊಳ್ಳೋಣವೆಂದು ನಿವೇಶನಗಳಿಗಾಗಿ ಕಾಯುತ್ತಿದ್ದಾರೆ. ಈ ರೀತಿ

ಸಲ್ಲಿಸಿರುವ ಅರ್ಜಿಗಳಿಂದ ಸುಮಾರು 600 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡಿಎನವರು ಸಂಗ್ರಹ ಮಾಡಿದ್ದಾರೆ. ಆದರೆ, ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರ ಈಗ Stay ಮಾಡಿದೆ. ಏಕೆ Stay ಮಾಡಿದ್ದಾರೆ ಈಗಾಗಲೇ ಅಲ್ಲಿ ದಂಧೆ ಶುರುವಾಗಿದೆ! ಇಡೀ ಬೆಮಗಳೂರಿನಲ್ಲಿ ಎಲ್ಲೆಲ್ಲಿ ಬಿಡಿಎ ಲೇಔಟ್ ಮಾಡಿದೆಯೋ, ಅದೆಲ್ಲಕ್ಕಿಂತಲೂ best layout ಎಂದರೆ ರ್ಕಾವತಿ ಲೇಔಟ್ ಆಗಿದೆ. ಏಕೆಂದರೆ, ಅಲ್ಲಿ International Airport ಬರುತ್ತಿದೆ. ಅಲ್ಲಿಗೆ ಈ ದೇಶದ ಜನರಲ್ಲ, ವಿದೇಶಿಯರು ಅಲ್ಲಿಗೆ ಬರುತ್ತಾರೆ. ಇವೊತ್ತು ಅಲ್ಲಿ ಜಮೀನು ಕೊಡುತ್ತಾರೆಂದರೆ, ವಿದೇಶಿಯರು ಅಲ್ಲಿಗೆ ಬರುತ್ತಾರೆ. ಈಗಾಗಲೇ ಬುಕ್ಕಿಂಗ್ ಶುರುವಾಗಿದೆ. BDA ಸ್ವಾಧೀನಪಡಿಸಿಕೊಂಡಿರುವುದು 12–13 ಲಕ್ಷ ರೂ.ಗಳಿಗೆ ಈಗ ಅದೇನಾದರೂ ಅವರ ಕೈಗೆ ಸಿಕ್ಕಿದರೆ 5–10 ಕೋಟಿ ರೂಪಾಯಿಗಳಷ್ಟಾಗುತ್ತದೆ! ಬರುವವರೆಲ್ಲಾ flats ಕಟ್ಟುವ ಜನರು. ಅಲ್ಲಿ ಈಗ ಎಕರೆ ಲೆಕ್ಕ ಇಲ್ಲವೇ ಇಲ್ಲ. ಎಲ್ಲವೂ Sq.feet ಲೆಕ್ಕದಲ್ಲೇ. ಅಲ್ಲಿರುವ ಜಮೀನಿಗೆ Sq.feetಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಲು ತಯಾರಿದ್ದಾರೆ! ಅದಕ್ಕೋಸ್ಕರವೇ ಅರ್ಕಾವತಿ ಲೇಔಟ್ ಅನ್ನು stop ಮಾಡಿದ್ದಾರೆ. ಈ ದಂಧೆ ಮಾಡುವುದಕ್ಕೋಸ್ಕರವೇ stop ಮಾಡಿದ್ದಾರೆಂಬುದು ನನ್ನ ಆಪಾದನೆಯಾಗಿದೆ. ಇದು ನಿಲ್ಲಬೇಕು, ಅರ್ಕಾವತಿ ಲೇಔಟ್ ಪ್ರಾರಂಭವಾಗಬೇಕು. ಮತ್ತು ನಿವೇಶನಗಳಿಗಾಗಿ ಯಾರು ಎರಡೂವರೆ ಲಕ್ಷದಷ್ಟು ಜನರು ಅರ್ಜಿ ಸಲ್ಲಿಸಿದ್ದಾರೆ.......

ಶ್ರೀ ಡಿ.ಕೆ. ಶಿವಕುಮಾರ್ : ನಾನು ಒಂದೇ ಪದಕ್ಕೆ ನಿಮ್ಮನ್ನು ಯೀಲ್ಡ್ ಮಾಡುತ್ತಿದ್ದೇನೆ. ಇಲ್ಲಿಯವರೆಗೂ ಆಗಿರುವ ಲೇಔಟ್‌ಗಳಲ್ಲೆಲ್ಲಾ Arkavathi Layout is the best layout ಎಂದು ಏನು ಹೇಳುತ್ತಿದ್ದೀರಿ......

ಶ್ರೀ ಆರ್. ಅಶೋಕ್ : ಬೆಲೆಯಲ್ಲಿ, ಹಣದಲ್ಲಿ best ಎಂದು ಹೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಅದನ್ನು ನೀವು `best layout' ಎಂದು ಹೇಳಿದಿರೇನೋ ಅಂದುಕೊಂಡೆ. ಏಕೆಂದರೆ, ನಮ್ಮ ಸ್ಥಳೀಯ ಅಧಿಕಾರಿಗಳು, ನಾನು ಜೈಕರ್ ಜರೋಮ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ ಅವರು ಬೆಂಗಳುರಿಗೆ ಒಂದು ಇಮೇಜ್ ಸೃಷ್ಟಿಸುವಂತಹ ಕೆಲಸ ಮಾಡಿದರು. ಆದರೆ, ಲೇಔಟ್ ವಿಚಾರದಲ್ಲಿ ಹೇಳುವುದಾದರೆ, ಅದರ ಪ್ಲಾನಿಂಗ್ ಇದೆಯೆಲ್ಲಾ ಸದರಿ ಲೇಔಟ್ ಕುರಿತಂತೆ ವಿವಾದವೆದ್ದ ಬಳಿಕ ಅಲ್ಲಿನ ಪ್ಲಾನ್ ಏನು? ಪರಿಸ್ಥಿತಿ ಹೇಗಿದೆ ಎಂದು ಮೊನ್ನೆ ಅದರ ಪ್ಲಾನನ್ನು ತರಿಸಿ ನೋಡಿದೆ. ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಬೇಕಾದಷ್ಟು ಕಡೆ ಸುತ್ತಿ ನೋಡಿದ್ದು, ಆಗ ಇದು ನನ್ನ ಖಾತೆಗೆ ಸೇರುತ್ತಿರಲಿಲ್ಲ. ಅಲ್ಲಿನ ಸತ್ಯಾಂಶ ಏನಿರಬಹುದು, ಸವಲ್ಪ ತಿಳಿಯೋಣವೆಮದು ತರಿಸಿ ನೋಡಿದೆ. It is one of the greatest blunders the officers have done in the Arkavathi layout. ಉಳಿದ ವಿಚಾರಗಳನ್ನು ಬೇಕಾದರೆ ಬೇರೆ ಸಂದರ್ಭ ಬಂದಾಗ ನಾನು ಚರ್ಚೆ ಮಾಡುತ್ತೇನೆ.

ಶ್ರೀ ಆರ್. ಅಶೋಕ್ : ಅದಕ್ಕೋಸ್ಕರವೇ ಅದನ್ನು ಅಲ್ಲಿ delete ಮಾಡಬೇಕೆಂದು ಹೊರಟಿರುವುದು. ಲೇಔಟ್ ಎಷ್ಟು ಚೆಂದವಾಗಿದೆ, ಅದನ್ನು delete ಮಾಡಿದರೆ ಬಹಳಷ್ಟು ಜನರಿಗೆ ಒಳ್ಳೆಯದಾಗುತ್ತದೆ. ಬಹಳಷ್ಟು ಜನ ಅಧಿಕಾರಿಗಳು, ಮಾಜಿ ಮಂತ್ರಿಗಳಿರಬಹುದು, ಬೇರೆಯವರೂ ಇರಬಹುದು. ಅಲ್ಲಿ ಬಹಳ ಜನರ ಹೆಸರುಗಳಿವೆ. ನಾನು ಅವರ ಹೆಸರುಗಳನ್ನು ಪ್ರಸ್ತಾಪಿಸಿದರೆ ಗೊಂದಲವಾಗುತ್ತದೆ, ನೋಟಿಸ್ ಕೊಡಬೇಕಾಗುತ್ತದೆನ್ನುವ ಕಾರಣಕ್ಕಾಗಿ ಹೆಸರುಗಳನ್ನು ಪ್ರಸ್ತಾಪಿಸುತ್ತಿಲ್ಲ. ಅದನ್ನು delete ಮಾಡುತ್ತಿದ್ದಾರೆ, delete ಸಹ ವ್ಯವಸ್ಥಿತವಾಗಿ ನಡೆಯುತ್ತಿದೆ. ಅದಕ್ಕೆ ನನ್ನ

ವಿರೋಧವಿದೆ. ಬೆಂಗಳೂರಿನಲ್ಲಿ ಕಳೆದ 10–15 ವರ್ಷಗಳಿಂದ ಬಾಡಿಗೆ ಮನೆಗಳಲ್ಲಿ ಯಾವ ಸಾಮಾನ್ಯ ಜನರು ವಾಸವಾಗಿದ್ದಾರೋ, ಅವರೆಲ್ಲರಿಗೂ ನಿವೇಶನಗಳು ದೊರಕಬೇಕೆಂಬುದೇ ನನ್ನ ಆಗ್ರಹವಾಗಿದೆ. ಇದರಲ್ಲಿ ಬೇರೆ ಇನ್ನೇನೂ ಇಲ್ಲ. ಮತ್ತೆ ನಾನು ಅದೇ ವಿಚಾರಕ್ಕೆ ವಾಪಸ್ಸಾಗುತ್ತೇನೆ. ಸರ್ಕಾರ ಯಾವ ರೀತಿ ನಡೆದುಕೊಳ್ಳುತ್ತದೆಂದರೆ, ಒಂದು ಲೆಕ್ಕ ಕೊಡುತ್ತದೆ. "ಸ್ಥಳೀಯ ಸಂಸ್ಥೆಗಳು. ಜವಾಬ್ದಾರಿಯುತವಾಗಿ ವರ್ತಿಸಿ ಉದ್ಯಾನವನ ಮತ್ತು ಬಯಲು ಜಾಗಕ್ಕೆ ಮೀಸಲಿಟ್ಟ ಪ್ರದೇಶವನ್ನು ಇತರ ಉದ್ದೇಶಕ್ಕಾಗಿ ಪರಿವರ್ತಿಸುವುದಕ್ಕೆ ಉತ್ತೇಜನ ನೀಡಬಾರದು. ಈ ಮೂಲಕ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ಇದಕ್ಕೆ ತಪ್ಪಿದ್ದಲ್ಲಿ, ಸಂಬಂಧಪಟ್ಟ, ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವು– ಸರ್ಕಾರದ ಅಧೀನ ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ" ಎಂದು ಇವರು ಒಂದು circular ಹೊರಡಿಸುತ್ತಾರೆ. ಸುತ್ತೋಲೆಯಲ್ಲಿ ಪಾರ್ಕುಗಳನ್ನು ಬೇರೆ ಉದ್ದೇಶಗಳಿಗೆ ಬಳಸಬಾರದು, ಅದೇ ಉದ್ದೇಶಕ್ಕಾಗಿ ಬಳಸಬೇಕೆಂದು ಹೇಳುತ್ತಾರೆ. ಇಷ್ಟೆಲ್ಲಾ ಇದ್ದರೂ ಬಿಡಿಎನವರು ಹೇಗೆ modified plan ಮಾಡಿ 10–11 ವರ್ಷಗಳಾದ ನಂತರ.... ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಸೊಸೈಟಿ ಇದೆಯೇ? ಇಲ್ಲವೇ? ಗೊತ್ತಿಲ್ಲ. ಮತ್ತೆ ಎಚ್ಚರಗೊಂಡು ಆ ಸೊಸೈಟಿಯವರು apply ಮಾಡುತ್ತಾರೆಂದರೆ, ಬಿಡಿಎನ ಟೌನ್ ಪ್ಲಾನಿಂಗ್ ಅಧಿಕಾರಿಗಳು ಅವರಿಗೆ ಪ್ಲಾನ್ ಅನ್ನು ಮಂಜೂರು ಮಾಡಿಕೊಡುತ್ತಿದ್ದಾರಲ್ಲಾ ಅದಕ್ಕೆ ಕಾನೂನು ಇದೆಯೇ?Re-plan ಮಾಡುವುದಕ್ಕೆ ಕಾನೂನು ಇದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ. ಒಂದು ಲೇಔಟ್ ಫಾರ್ಮೇಶನ್ ಆಗಿ, ಸೈಟ್ ಆಗಿ, ಇಷ್ಟು ಜಾಗ ಸಿ.ಎ.ಗೆ, ಇಷ್ಟು ಜಾಗ ಪ್ಲೇಗ್ರೌಂಡ್‌ಗೆ ಎಂದು ಎಲ್ಲವೂ ಅಭಿವೃದ್ಧಿಯಾಗಿ 10–11 ವರ್ಷಗಳಾದ ಬಳಿಕ ಮತ್ತೆ re-plan ಮಾಡುವುದಕ್ಕೆ ಬಿಡಿಎಗೆ ಅಧಿಕಾರ ಇದೆಯೇ? ಆ ವಿನಾಯಕ ಸೊಸೈಟಿಯವರಿಗೆ, ಆತನಿಗೆ ವಿಘ್ನವೇನೂ ಇಲ್ಲ. ಆತ ಬಿಡಿಎ ಮೇಲೆ ಬಹಳ ನಂಬಿಕೆಯಿರುವ ವ್ಯಕ್ತಿಯಾಗಿದ್ದು, ಆತ ಏನು ಮಾಡಿದ್ದಾನೆಂದರೆ, 2003ರಲ್ಲಿ ಬಿಡಿಎನವರು ಮಾಡಿಕೊಡುತ್ತಾರೆಂದು ನಂಬಿ 18.11.95ರಲ್ಲೆಯೇ ಪಾರ್ಕ್, ಇನ್ನೆಲ್ಲವನ್ನೂ ಮಾರಾಟ ಮಾಡಿದ್ದಾನೆ. ಸುಮಾರು 60 ಸೈಟುಗಳನ್ನು ಬೆಂಗಳೂರಿನ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡಿದ್ದಾನೆ. The deed of sale made on 18th day January 1990 between Vinayaka Housing building Co-operative Society. ಇವೆಲ್ಲಾ ಸೈಟುಗಳು ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿಯೇ ರಿಜಿಸ್ಟರ್ ಆಗಿರುವುದು. ಇಷ್ಟೆಲ್ಲಾ ಇದ್ದರೂ ಸಹ ಆತನಿಗೆ ಬಿಡಿಎನವರು ಹೇಗೆ re-plan ಮಾಡಿಕೊಟ್ಟರು? ಇದು ತಪ್ಪಲ್ಲವೇ? ಇದೊಂದು ಸಣ್ಣ ಉದಾಹರಣೆ. ಮಾನ್ಯ ಸದಸ್ಯರಾದ ಸೋಮಣ್ಣನವರು ಹೇಳಿದಂತೆ ಈ ತರಹ ಪ್ರೈವೇಟ್ ಸೊಸೈಟಿಯವರು 50 ಪರ್ಸೆಂಟ್ ಜಾಗವನ್ನು civil amenitiesಗೆ ಬಿಡಬೇಕೆಂದು ಬಿಡಬೇಕೆಂದು ಬಿಡಿಎ ಅಗ್ರಿಮೆಂಟ್ ಮಾಡಿದಂತಹ ಜಮೀನನ್ನು ನೀವು ವ್ಯವಸ್ಥಿತವಾಗಿ ಸಂಚು ಮಾಡಿ ಒಂದೊಂದು ಲೇಔಟ್‌ನಲ್ಲಿ 50–60 ಕೋಟಿ ರೂಪಾಯಿ ಬೆಲೆ ಬಾಳುವ ಸೈಟುಗಳನ್ನು ಬಿಡಿಎನವರು ಹೇಗೆ ಬಿಡುಗಡೆ ಮಾಡುತ್ತಾರೆಂಬುದು ಯಕ್ಷಪ್ರಶ್ನೆಯಾಗಿದೆ. ಸುಮಾರು 2–3 ಕೋಟಿ ರೂಪಾಯಿಗಳ ಯಾವುದೋ scandal ವಿಚಾರವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದಾಗ ಅದು ದೊಡ್ಡದಾಗಿ ಪ್ರಚಾರಗೊಂಡು ಸರ್ಕಾರಗಳೇ ಬಿದ್ದುಹೋದವು. ಆದರೆ, ಇವೊತ್ತು ಇದರಲ್ಲಿ 50 ಕೋಟಿ ರೂಪಾಯಿ.....ನಾಗರಭಾವಿ, ಅದೇ ರೀತಿ ಭವಾನಿ ಸೊಸೈಟಿ, ಇದು ಪದ್ಮನಾಭನಗರದಲ್ಲಿದೆ. ಬಿಡಿಎನವರು ಲೇಔಟ್ ಪ್ಲಾನ್ ಅಪ್ರೂವ್ ಮಾಡಿದ್ದಾರೆ. ಅದರಲ್ಲಿ ಒಂದು ಸಿ.ಎ. ಇಲ್ಲ, ಏನೂ ಇಲ್ಲ. ಬೆಳಿಗ್ಗೆ ಸರ್ಕಾರವನ್ನು ಕೇಳಿದಾಗ, ಮಾನ್ಯ

ಪ್ರಕಾಶ್‌ರವರು, ಶ್ರೀನಿವಾಸಗೌಡರು ಇನ್ನಿತರರು ಎಲ್ಲರೂ ಇದ್ದರು. 'ಏನು ಸ್ವಾಮಿ, ಬಡವರು ಅಲ್ಲಿ ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರು ಇವೊತ್ತು ಕಟ್ಟಿಕೊಂಡಿಲ್ಲ. ಸುಮಾರು 30–40 ವರ್ಷಗಳ ಹಿಂದೆಯೇ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರೆಲ್ಲರ ಮನೆಗಳನ್ನು ನೀವು ಒಡೆದು ಹಾಕುವುದಕ್ಕಾಗುವುದಿಲ್ಲ. ಒಡೆದು ಹಾಕುತ್ತೇವೆಂದರೆ ಒಡೆದು ಹಾಕುತ್ತೇವೆ' ಎಂದು ಹೇಳಿ. ಒಡೆದು ಹಾಕುವುದಿಲ್ಲವೆಂದು ಸುಮ್ಮನೆ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ 'ರೆವಿನ್ಯೂ ನಿವೇಶನದಾರರ ಪರವಾಗಿ ನಾವಿದ್ದೇವೆ' ಎಂದು ಇವರು election manifesto ಹೊರಡಿಸಿ, ಇಲ್ಲಿ ನಾವು ಪ್ರಶ್ನೆ ಕೇಳಿದಾಗ 'ಇಲ್ಲ, ಅವರಿಗೆ ಏನೂ ಮಾಡಿಕೊಡುವುದಿಲ್ಲ. ಪ್ಲಾನ್ ಮಾಡುವದಿಲ್ಲ, ಅಭಿವೃದ್ಧಿ ಶುಲ್ಕ ಮಾಡುವುದಕ್ಕೂ ಅಧಿಕಾರ ಕೊಡುವುದಿಲ್ಲ, ಅವರು ಹಾಗೆಯೇ ಸಾಯಬೇಕು. ನರಕದಲ್ಲಿ ಸಾಯುವಂತೆ ಸಾಯಬೇಕು' ಎನ್ನುವ ದೃಷ್ಟಿಯಿಟ್ಟುಕೊಮಡು ನೀವು ಮಾತನಾಡುತ್ತೀರಲ್ಲಾ. ಬಿಡಿಎ ಒಳ್ಳೆಯದು ಮಾಡುತ್ತದೆ, ಬಿಡಿಎಗೆ ಅಭಿವೃದ್ಧಿ ಶುಲ್ಕ ಕಟ್ಟಬೇಕು..........

ಶ್ರೀ ಎಂ.ಪಿ. ಪ್ರಕಾಶ್ : ಆ ತರಹದ ಉತ್ತರವನ್ನು ನಾನು ಕೊಟ್ಟಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನೀವಲ್ಲ, ಆ ಉತ್ತರವನ್ನು ಮಾನ್ಯ ಶ್ರೀನಿವಾಸಗೌಡರು ಕೊಟ್ಟಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಉತ್ತರವನ್ನು ಸರ್ಕಾರ ಕೊಟ್ಟಿದ್ದು.

ಶ್ರೀ ಎಂ.ಪಿ. ಪ್ರಕಾಶ್ : ಹಾಗೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಏನೆಂದರೆ ಈಗ ಪ್ರಸ್ತಾಪ ಮಾಡಿದಾಗ ಎಂ.ಪಿ. ಪ್ರಕಾಶ್‌ರವರ ಕಿವಿಗೆ ಸಿಂಧ್ಯಾರವರ ಕಿವಿಗೆ ಬಿದ್ದರೆ ಯಾರು ಹತ್ತಾರು ವರ್ಷಗಳಿಂದ ಬಡವರು 30x40 ಸೈಟಿನಲ್ಲಿ ಒಂದು ಸಣ್ಣ ಮನೆಯನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ. ಬಿ.ಡಿ.ಎನವರು ಲೂಟಿ ಮಾಡಿದಂಥ ಹಗಲು ದರೋಡೆಕೋರರು ಇವತ್ತು ಆ ಮನೆಗಳನ್ನು ನೆಲಸಮ ಮಾಡುತ್ತಿದ್ದಾರಲ್ಲಾ ಅದನ್ನು ನಿಮ್ಮ ಕಾಲದಲ್ಲಿ ಹಿಂದೆ ಒಂದು ಸಲ ಮಾಡಿ ಉಳಿಸಿದ್ದೀರಿ. ಅವರು ದುಡ್ಡು ಕೊಟ್ಟು ಅವರಿಗೆ ಉಳಿಸುವ ಕೆಲಸ ಮಾಡಿದ್ದೀರಿ. ಈಗಲೂ ಅಂಥ ಬಡಬಗ್ಗರು ಯಾರು ಮನೆಯನ್ನು ಕಟ್ಟಿಕೊಂಡಿದ್ದಾರೆ, ಅವರಿಗೆ ಉಳಿಸಿ, ಯಾರು ಶ್ರೀಮಂತರು ಕಟ್ಟಿದ್ದಾರೆ ಅದನ್ನು ಬುಲ್ಡೋಜ್ ಮಾಡಿ, ಅದಕ್ಕೆ ನಮ್ಮ ವಿರೋಧವಿಲ್ಲ. ಯಾರು ಅದನ್ನು ಮಾಡಿದರೋ ಗೊತ್ತಿಲ್ಲ, ಆ ಸೊಸೈಟಿಯವರು ಮಾಡಿದರೋ, ರೆವಿನ್ಯೂ ಸೈಟೋ ಮತ್ತೊಂದು, ಆ ಬಡವರು ಮನೆಯನ್ನು ಕಟ್ಟಿಕೊಂಡು ಇದ್ದರಲ್ಲಾ ಅದನ್ನು ಒಡೆಯುವಂಥ ಕೆಲಸ ನಿಮ್ಮ ಕಾಲದಲ್ಲಂತೂ ಮಾಡಬೇಡಿ. ಆ ಬಡವರ ಮನೆಯನ್ನು ಉಳಿಸಿಕೊಡಿ. That is all my humble request.

ಶ್ರೀ ಆರ್. ಅಶೋಕ್ : ಭವಾನಿ ಸೊಸೈಟಿ ಎಂದು ಪದ್ಮನಾಭನಗರದಲ್ಲಿದೆ. ಅದರಲ್ಲೂ ಈ ತರಹ ದಂಧೆ ಮಾಡಿಕೊಂಡು ಬೆಂಗಳೂರಿನಲ್ಲಿರುವ ಜಮೀನುಗಳನ್ನು ಬಿಡಿಎಗೆ ಸಂಬಂಧಪಟ್ಟ ಜಮೀನುಗಳನ್ನು ಅಕ್ರಮವಾಗಿ ಕೋಟ್ಯಾಂತರ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಇದು ಜನರ ಗಮನಕ್ಕೆ ಬಂದಿಲ್ಲ. ಜನರು ಅಲ್ಲಿ ಪಾರ್ಕ್ ಇದೆ ನಾವು ಸೈಟು ತೆಗೆದುಕೊಂಡಿದ್ದೇವೆ ಎಂದು ತಿಳಿದುಕೊಂಡಾಗ ಅವರ ಆಸೆ ಎಷ್ಟು ಇರಬಹುದು?: ಕೆಲವು ಪರಿಸರವಾದಿಗಳೆಲ್ಲಾ ಇರುತ್ತಾರೆ. ಪಾರ್ಕ್ ಮುಂದೆ ನಮ್ಮ ನಮೆ ಇದ್ದರೆ ಒಳ್ಳೆಯದು ಎಂದು ಹೆಚ್ಚುವರಿ ಹಣವನ್ನು ಕೊಟ್ಟು ಪಾರ್ಕ್ ಮುಂದೆಯೇ ತೆಗೆದುಕೊಳ್ಳುತ್ತಾರೆ. ನಾನು ಮತ್ತು ಅಲ್ಲಿನ ನಮ್ಮ ಸಿಎಂಸಿ ಅಧ್ಯಕ್ಷರು ಕೌನ್ಸಿಲರ್ ಹೋಗಿ ಕೆಂಪೇಗೌಡ ಉದ್ಯಾನವನ ಎಂದು ಉದ್ಘಾಟನೆ ಮಾಡಿ ಬಂದೆವು. ಆದರೆ ಇವತ್ತು ಆ

ಬೋರ್ಡೇ ಇಲ್ಲ. ಬಿಡಿಎ ನವರು ಅದಕ್ಕೆ ಈಗಾಗಲೇ ನೀವು ಸೈಟುಗಳನ್ನು ಮಾಡಿ ಮಾರಾಟ ಮಾಡಿ ಎಂದು ಅನುಮತಿಯನ್ನು ಕೊಟ್ಟುಬಿಟ್ಟಿದ್ದಾರೆ. ನಾನು ಯಾರ ಹತ್ತಿರ ಅಪೀಲ್ ಹೋಗಬೇಕು? ನಮ್ಮ ಸರ್ಕಾರವನ್ನು.ಕೇಳಿದರೆ ಬಿಡಿಎ ನವರು ಬಹಳ ಒಳ್ಳೆಯ ಡೆವಲಪ್‌ಮೆಂಟ್ ಮಾಡುತ್ತಿದ್ದಾರೆ ಅವರಿಗೆ ನೀವು ಒಳ್ಳೆಯ ಉತ್ತೇಜನವನ್ನು ಕೊಡಬೇಕು, ಬೆಟರ್‌ಮೆಂಟ್ ಚಾರ್ಜ್‌ನ ಹಣವನ್ನೆಲ್ಲಾ ಅಲ್ಲೇ ಕಟ್ಟಿ, ಏನೇ ಇದ್ದರು ಬಿಡಿಎ ಹತ್ತಿರ ಹೋಗಿ ಎಂದು ಎಲ್ಲದಕ್ಕೂ ಹೇಳುತ್ತಾರಲ್ಲಾ ಇದಕ್ಕೇನು ಹೇಳುತ್ತಾರೆ? ಉದ್ಯಾನವನ ಎಂದು ಬೋರ್ಡ್ ಇದ್ದದ್ದನ್ನು ಕಿತ್ತುಹಾಕಿ ನೀವು ಪ್ಲಾನ್ ಮಾಡಿದ್ದೀರಲ್ಲಾ ಇದಕ್ಕೆ ಯಾರಿಗೆ ಶಿಕ್ಷೆಯನ್ನು ಕೊಡುತ್ತೀರಾ? ಈ ಕರ್ಮಕಾಂಡಕ್ಕೆ ಒಂದು ಅಂತ್ಯ ಬರಬೇಕು. ಅಕ್ರಮವೇನಾಗಿದೆ ಬಿಡಿಎ ನಲ್ಲಿ, ಈ ರೀತಿ ಡೀ ನೋಟಿಫಿಕೇಷನ್ ಮಾಡಿರತಕ್ಕದ್ದು ಪಾರ್ಕ್ ಜಾಗವನ್ನು ಕೋಟ್ಯಾಂತರ ರೂಪಾಯಿಗೆ ಮಾರಾಟ ಮಾಡಿರುವುದು, ಇದನ್ನೆಲ್ಲಾ ಲೆಕ್ಕ ಮಾಡಿದರೆ 600–700 ಕೋಟಿ ರೂಪಾಯಿ ಪಾರ್ಕುಗಳನ್ನೇ ಮಾರಾಟ ಮಾಡಿದ್ದಾರೆ. ಬಿಡಿಎ ನೋಟಿಫೈ ಮಾಡಿ ಅದನ್ನು ಬಿಡಿಎ ಹ್ಯಾಂಡ್ ಓವರ್‌ಗೆ ತೆಗೆದುಕೊಂಡ ಮೇಲೆ ಮತ್ತೆ ಅವರಿಗೆ, ಲಾಬಿಗೆ ವಾಪಸ್ ಕೊಟ್ಟಿದ್ದಾರೆಂದರೆ ಅದಕ್ಕೆ ಒಂದು ವಿಶೇಷ ನ್ಯಾಯಾಲಯವನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಭೀಮಾ ದರ್ಯೋಧನ ಎಂದೆಲ್ಲಾ ಹೇಳಿದರ, ಆದರೆ ಭೀಮ ದುರ್ಯೋಧನ ಯಾರ್‍ಯಾರು ಎಂಬುದು ನಮಗೆ ಗೊತ್ತಾಗಲಿಲ್ಲ. ತಾವೇನು ತಮ್ಮ ಮ್ಯಾನಿಫೆಸ್ಟೋದಲ್ಲಿ ಹೇಳಿದ್ದೀರಿ, ಯಾರು ಈ ರೀತಿ ಅಪರಾಧಿಗಳಿದ್ದಾರೆ ಇವರ ಬಗ್ಗೆ ಸ್ಪೆಶಲ್ ಕೋರ್ಟ್, ಜೈಲ್ ಮಾಡುತ್ತೇನೆಂದು ಹೇಳಿದ್ದಾರೆ. ಪರಪ್ಪನ ಅಗ್ರಹಾರ ಇದೆ. ಅದು ಸಾಕಾಗದೇ ಇರಬಹುದು, ಇನ್ನೊಂದು ಜೈಲನ್ನು ಮಾಡಿ ಅವರಿಗೆ ಶಿಕ್ಷೆಗೆ ಗುರಿಪಡಿಸಬೇಕು. ಆ ಮಾತಿಗೆ ತಕ್ಕಂತೆ ನಡೆಯಬೇಕು ಎಂಬ ಆಗ್ರಹವನ್ನು ಈ ಸಭೆಯ ಮೂಲಕ ಮಾಡುತ್ತೇನೆ. ದಯವಿಟ್ಟು ಅದಕ್ಕೆ ತಮ್ಮ ಪಕ್ಷವೂ ಬೆಂಬಲವನ್ನು ಕೊಡಬೇಕು. ಯಾರು ಭೂಗಳ್ಳರಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು. ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಇಲ್ಲಿ ಇನ್ನೊಂದು ರೀತಿ ಅವ್ಯವಹಾರ. ನಾವೆಲ್ಲಾ ಕಂದಾಯ ಸಚಿವರಿಗೆ ಅರ್ಜಿಗಳನ್ನು ಬರೆಯುತ್ತೇವೆ. ಮಾಣ್ಯ ಪ್ರಕಾಶ್‌ರವರಲ್ಲ. ಇರಲಿ ಸಧ್ಯಕ್ಕೆ ನೀವೇ ಸರ್ಕಾರ. ನಮಗೆ ಸ್ಮಶಾನಕ್ಕೆ ಜಾಗ ಕೊಡಿ, ಶಾಲೆಗೆ ಜಾಗ ಕೊಡಿ ಎಂದು ಅರ್ಜಿಯನ್ನು ಬರೆದರೆ ಎರಡು ಮೂರು ವರ್ಷ ಕಾಯಿಸುತ್ತಾರೆ. ಯಾರಾದರೂ ನಾವು ವಿದ್ಯಾಸಂಸ್ಥೆ ನಡೆಸುತ್ತೇವೆಂದು ಬಂದರೆ ರಾತ್ರೋರಾತ್ರಿ ಅವರಿಗೆ, ಅವರ ಬ್ಯಾಂಕ್ ಬ್ಯಾಲೆನ್ಸ್ ಎಷ್ಟು ಇದೆ, ಎಷ್ಟು ವರ್ಷದಿಂದ ವಿದ್ಯಾ ಸಂಸ್ಥೆ ಮಾಡುತ್ತಿದ್ದಾರೆ, ಎಷ್ಟು ವರ್ಷದಿಂದ ಸಮಾಜ ಸೇವೆ ಮಾಡುತ್ತಿದ್ದಾರೆ, ಈ ವಯಕ್ತಿಗಳು ಯಾರು, ಇವರಿಗೆ ರಾಜ್ಯ ಇಲ್ಲವೇ ರಾಷ್ಟ್ರಪ್ರಶಸ್ತಿ ಬಂದಿದೆಯೇ, ಕವಿಗಳಾ ಇವರು, ಕಲಾವಿದರಾ ಯಾವುದನ್ನೂ ನೋಡುವ ಅವಶ್ಯಕತೆ ಇಲ್ಲ, ಅವರಿಗೆ ಬೆಂಗಳೂರು ಸುತ್ತಮುತ್ತ 8 ಎಕರೆವರೆಗೆ ಕೊಡಲು ಮಂತ್ರಿಯವರಿಗೆ ಅವಕಾಶ ಇದೆ. ಅವರಿಗೆ 5 ರಿಂದ 8 ಎಕರೆವರೆಗೆ ಜಮೀನನ್ನು ಗ್ರಾಂಟ್ ಮಾಡಿಬಿಟ್ಟಿದ್ದಾರೆ ರಾತ್ರೋರಾತ್ರಿ ಬೆಂಗಳೂರಿನಲ್ಲಿ ಒಂದು ಎಕರೆ ಬೆಲೆ ಎಷ್ಟು? ಸುಮಾರು 40 ರಿಂದ 50 ಲಕ್ಷ ರೂ. ಈಗ ಸಿಇಟಿ ಗೊಂದಲವಿದೆಯಲ್ಲಾ ಕಾಮೆಡ್ ಕೆ ಅವರಿಗೆ ನೂರಕ್ಕೆ 80 ಭಾಗ ಸರ್ಕಾರವೇ ಭುಮಿಯನ್ನು ಕೊಟ್ಟಿರುವುದು. ಈಗ ಅವರೇ ಸರ್ಕಾರದ ಮೂಗನ್ನು ಹಿಡಿದುಕೊಳ್ಳುತ್ತಿದ್ದಾರೆ. ಕಳೆದ ಒಂದೇ ವರ್ಷದಲ್ಲಿ ಸುಮಾರು 400 ವಿದ್ಯಾ ಸಂಸ್ಥೆಗಳಿಗೆ ಈ ರೀತಿ ಅಕ್ರಮವಾಗಿ ರಾತ್ರೋರಾತ್ರಿ ಅವರ ಬ್ಯಾಂಕ್ ಬ್ಯಾಲೆನ್ಸ್ ನೋಡದೆ, ಅವರು ವಿದ್ಯಾಸಂಸ್ಥೆಯನ್ನು ನಡೆಸುತ್ತಾರೋ ಇಲ್ಲವೋ ಎಂಬುದನ್ನು ನೋಡದೆಯೇ 33 ವರ್ಷ ಲೀಸ್‌ಗೆ ಭೂಮಿಯನ್ನು ಕೊಟ್ಟಿದ್ದಾರೆ. ನನಗೆ ನೋವಾಗುತ್ತದೆ. ನಾನೇ ಸರ್ಕಾರಕ್ಕೆ ಪತ್ರವನ್ನು ಬರೆದು ನಮ್ಮ ಕ್ಷೇತ್ರದಲ್ಲಿರುವ

ಅಬ್ಬಗೆರೆ ಗ್ರಾಮದಲ್ಲಿ ಆಟದ ಮೈದಾನಕ್ಕೆ ಹತ್ತು ಎಕರೆ, ಕೆಇಬಿ ಕಛೇರಿಗೆ 2 ಎಕರೆ, ಪೋಲೀಸ್ ಸ್ಟೇಷನ್‌ಗೆ 2 ಎಕರೆ ಮೀಸಲಾಗಿ ಇಡಬೇಕೆಂದು ಅರ್ಜಿಯನ್ನು ಬರೆದಿದ್ದೇನೆ. ಆದರೆ ನನಗೆ ಕೊಡಲಿಲ್ಲ, ನನ್ನ ಪತ್ರಕ್ಕೆ ಬೆಲೆ ಕೊಡಲಿಲ್ಲ. ಆದರೆ ಒಂದೇ ಒಂದು ಹಳ್ಳಿಯಲ್ಲಿ ಮೂರು ವಿದ್ಯಾಸಂಸ್ಥೆಗೆ ಜಾಗವನ್ನು ಕೊಡುತ್ತಾರೆ. ಇದನ್ನು ನೀವು ನಂಬುತ್ತೀರಾ?

ಅಧ್ಯಕ್ಷರು : ಆ ಮೂರು ವಿದ್ಯಾ ಸಂಸ್ಥೆಗಳು ನಿಜವಾದ ವಿದ್ಯಾ ಸಂಸ್ಥೆಗಳೋ ಅಥವಾ ಖೋಟಾ ಸಂಸ್ಥೆಗಳೊ?

ಶ್ರೀ ಆರ್. ಅಶೋಕ್ : ನಿಜವಾಗಿದ್ದರೆ ನಾನೇಕೆ ಹೇಳುತ್ತಿದ್ದೆ? ಒಂದೇ ಹಳ್ಳಿಯಲ್ಲಿ ಮೂರು ವಿದ್ಯಾ ಸಂಸ್ಥೆಗೆ ಕೊಡುತ್ತಾರೆಯೇ? ಒಂದೇ ಹಳ್ಳಿಯಲ್ಲಿ ಮೂರನ್ನು ನಡೆಸಲು ಆಗುತ್ತದೆಯೆ? ಅವರು ಪರ್ಮಿಷನ್ ಹೇಗೆ ತೆಗೆದುಕೊಳ್ಳುತ್ತಾರೆಂದರೆ, ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಯೆರೋಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ ಸರ್ವೆ ನಂಬರ್ 63ರ ಪೈಕಿ ಸುಮಾರು 20 ಎಕರೆ ಜಮೀನನ್ನು ಉಲ್ಲೇಖಿತ 1 ರಂತೆ ಸುಬ್ರಮಣ್ಯ ಎಜುಕೇಷನ್ ಸೊಸೈಟಿ ಅನಾಥಾಲಯ ಹಾಗೂ ಕಿವುಡ ಮತ್ತು ಮೂಕದ ಶಾಲೆಗೆ ಸ್ಥಾಪಿಸಲು ಗುತ್ತಿಗೆ ಆಧಾರದ ಮೇಲೆ ಮಂಜೂರಾಗಿದೆ. 20 ಎಕರೆ ಮಂಜೂರಾಗಿದೆ. ಕಿವುಡರಿಗೆ, ಮೂಕರಿಗೆ ಆದರೆ ಅನಾಥಾಲಯಕ್ಕೆ ಅಲ್ಲಿ ಇವತ್ತು ಏನು ಬಂದಿದೆ, ಇಂಜಿನಿಯರಿಂಗ್ ಕಾಲೇಜು ಬಂದಿದೆ. ಇವತ್ತು ತಮಗೆ ಸಿಇಟಿ ನಲ್ಲಿ ಧಮಕಿಯನ್ನು ಹಾಕುತ್ತಿದ್ದಾರಲ್ಲಾ ಅವರು ಬಂದಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅನೇಕ ವಿಷಯಗಳನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ, ಅದಕ್ಕಾಗಿಯೇ ನಾನು ಪ್ರತ್ಯೇಕವಾದ ನಿಯಮಾವಳಿಗಳನ್ನು ರಚನೆ ಮಾಡುತ್ತಿದ್ದೇನೆ. ಯಾವುದೇ ಒಂದು ಸಂಸ್ಥೆ ಕನಿಷ್ಟ ಐದು ವರ್ಷಗಳ ಅವಧಿಯಲ್ಲಿ ಸಏವೆ ಮಾಡಿರತಕ್ಕದ್ದು ಆಗಬೇಕು, ಅನಂತರ ಸಂಸ್ಥೆ ಬ್ಯಾಂಕ್‌ನಲ್ಲಿ ಎಷ್ಟು ಹಣ ಇಟ್ಟಿದೆ, ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಲು ಅವರ ಕೈಯಲ್ಲಿ ಸಾಧ್ಯವಿದೆಯೇ, ಅದರಲ್ಲಿರತಕ್ಕ ಪದಾಧಿಕಾರಿಗಳು ಯಾರು ಎಂಬ ಬಗ್ಗೆ ಮಾಹಿತಿ ಬೇಕಾಗುತ್ತದೆ. ಕನಿಷ್ಟ ಎರಡು ವರ್ಷಗಳ ಚಾರ್ಟೆಡ್ ಅಕೌಂಟೆಂಟ್ ನಿಂದ ಆಡಿಟ್ ಆಗಿರತಕ್ಕ ಲೆಕ್ಕಪತ್ರಗಳು ಇರಬೇಕು, ಯಾವ ಉದ್ದೇಶಕ್ಕಾಗಿ ಆ ಭೂಮಿಯನ್ನು ಪಡೆದುಕೊಳ್ಳುತ್ತಾರೋ ಆ ಉದ್ದೇಶದ ಮಾತ್ರ ಇಲಾಖೆಯಿಂದ ಇಷ್ಟು ಭೂಮಿಯ ಅಗತ್ಯತೆ ಇದೆಯೇ ಎಂಬ ಪ್ರಮಾಣ ಪತ್ರವನ್ನು ಕೊಡಬೇಕು. ಇದಾದಮೇಲೆ ಅದರ ಅವಶ್ಯಕತೆ ಎಷ್ಟು ಇದೆ ಎಂಬ ಬಗ್ಗೆ ನಿರ್ಧಾರ ಮಾಡಬೇಕು. ಈ ರೀತಿಯ ಕಾನೂನನ್ನು ರಚನೆ ಮಾಡುತ್ತಿದ್ದೇವೆ, ಅದು ಇನ್ನು ಸ್ವಲ್ಪ ದಿವಸದಲ್ಲಿ ಆಗುತ್ತದೆ, ಆ ರಚನೆಗಳಿಗೆ ಅನುಗುಣವಾಗಿ ಇತ್ತೀಚೆಗೆ ಆಗಿರತಕ್ಕ ಈ ರೀತಿಯ ಪ್ರಕರಣಗಳು ಇದ್ದರೆ ಅದನ್ನು ಒಂದೊಂದೇ ಕಡತದ ಮೂಲಕ ಪರಿಶೀಲನೆ ಮಾಡಿ ಈ ನಿಯಮಾವಳಿಗೆ ಅದು ಅನ್ವಯವಾಗದಿದ್ದರೆ ನಾವು ಅದನ್ನು ರದ್ದು ಮಾಡುತ್ತೇವೆ.

ಶ್ರೀ ಆರ್. ಅಶೋಕ್ : ಸೊಸೈಟಿಯ ಹೆಸರನ್ನು ಹೇಳಿಬಿಟ್ಟಿದ್ದೇನೆ. ಹೆಸರು ಇದೆ, ಅದನ್ನು ಹೇಳಲೇ ಅಧ್ಯಕ್ಷರೇ?

ಅಧ್ಯಕ್ಷರು : ಯಾರ ಹೆಸರನ್ನು ಹೇಳಬೇಡಿ. ಆ ಸಂಸ್ಥೆಯ ಹೆಸರನ್ನು ಹೇಳಿ ತಾವು ಮಾತನಾಡಿ.

ಶ್ರೀ ಆರ್. ಅಶೋಕ್ : ಸುಬ್ರಮಣ್ಯ ಎಜುಕೇಷನ್ ಸೊಸೈಟಿ. ಈ ಸರ್ವೆ ನಂಬರ್ 63 ರಲ್ಲಿ ಹೇಗೆ ಗ್ರಾಂಟ್ ಮಾಡಿದ್ದಾರೆಂದರೆ, ಉತ್ತರ ಭಾಗದಲ್ಲಿ ಸುಮಾರು ನಾಲ್ಕು ಎಕರೆ ಜಮೀನು ಹದಿನೈದು ಇಪ್ಪತ್ತು ವರ್ಷಗಳಿಂದ ಸಾರ್ವಜನಿಕರು ಸ್ಮಶಾನಕ್ಕೆ ಉಪಯೋಗಿಸುತ್ತಿದ್ದೇವೆ. ಒಂದು ಅಂದಾಜಿನ ಪ್ರಕಾರ 200–300 ಗೋರಿಗಳು ಅಲ್ಲಿದೆ. ಅದು ಇದ್ದೂ ಸಹ ಆ ಜಾಗವನ್ನು ಈ ಸಂಸ್ಥೆಗೆ ಕೊಟ್ಟಿದ್ದೀರಿ. ಅಲ್ಲಿ ಕಿವುಡರ ಶಾಲೆ ಇದೆಯೆ? ಅನಾಹಾಶ್ರಮ ಇದೆಯೆ? ಅವರಿಗೆ ಏಕೆಕೊಟ್ಟಿರಿ? ಅನಂತರ ಪತ್ರವನ್ನು ಬರೆದಿದ್ದಾರೆ, ಮಾನ್ಯ ಹಿರಿಯ ಸಚಿವರಾದ ಪ್ರಕಾಶ್‌ರವರು ಕಾನೂನಿನ ಬಗ್ಗೆ ಹೇಳಿದರು. ಅವರ ಬ್ಯಾಂಕ್ ಬ್ಯಾಲೆನ್ಸ್ ಇದೆಯೆ, ಅವರು ಎಷ್ಟು ವರ್ಷ ಸಂಸ್ಥೆ ನಡೆಸುತ್ತಿದ್ದಾರೆ ಮುಂತಾದ ಕಾನೂನಿನ ಬಗ್ಗೆ ಹೇಳಿದರು. ಈ ಕಾನೂನು ಈಗ ಅಲ್ಲ ಅದು ಹಿಂದೆನೂ ಇತ್ತು, ಈಗಲೂ ಇದೆ, ಆದರೆ ಅದನ್ನೆಲ್ಲಾ ಓವರ್‌ಟೇಕ್‌ಮಾಡಿ ಕೊಟ್ಟಿದ್ದಾರೆ. ಆ ಕಾನೂನನ್ನು ಹೊಸದಾಗಿ ತರಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಕೆಲವು ನಿಯಮಾವಳಿಯನ್ನು ಹೊಸದಾಗಿ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನು ಕಾನೂನು ಬದಲಾವಣೆ ಮಾಡಿದರೂ, ಅಲ್ಲೊಂದು ಎಕರೆ, ಇಲ್ಲೊಂದು ಎಕರೆ ಎಂದು ಬೆಂಗಳೂರು ಸುತ್ತ ಮುತ್ತ 50 ಕಿ.ಲೋಮೀಟರ್ ದೂರದಲ್ಲಿ ನೀವು ಸರ್ವೆ ಮಾಡಿಸಿ ರಿಪೋರ್ಟ್ ತರಿಸಿ, ಎಲ್ಲಾ ನುಂಗಿ ನೀರು ಕುಡಿದು ಬಿಟ್ಟಿದ್ದಾರೆ. ಉಳಿದಿರುವುದೇ ಐದು ಪರ್ಸೆಂಟ್. ಅದನ್ನು ಉಳಿಸಿಕೊಳ್ಳಬೇಕು ಸರ್ಕಾರ ಒಳ್ಳೆಯ ಕೆಲಸಗಳು ಏನಾದರೂ ಮಾಡುವುದಕ್ಕೆ .

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಈ ಜನರ ಕಷ್ಟ ಅರ್ಥ ಮಾಡಿಕೊಳ್ಳಿ. ಸರ್ಕಾರಿ ಜಮೀನಿದ್ದರೂ ಅವರದೇ ಆದ ಗ್ರಾಮದಲ್ಲಿ ಅವರು ಆವತ್ತಿನಿಂದ ಕಾಪಾಡಿಕೊಂಡು ಬಂದಿರುತ್ತಾರೆ. ತಮಗೂ ಗೊತ್ತಿರಬೇಕು, ತಾವೂ ಕೂಡ ಹಳ್ಳಿ ಗಾಡಿನಿಂದ ಬಂದಿರುವಂತಹ ಜನ. ಊರಿನಲ್ಲಿರತಕ್ಕಂತಹ ಗೋಮಾಳ ಇರಬಹುದು, ಸರ್ಕಾರಿ ಸ್ಕೂಲ್ ಇರಬಹುದು, ಇವೆಲ್ಲಾ ಅಲ್ಲಿನ ಜನ ತಮ್ಮ ಮನೆಯ ಸ್ವತ್ತು ಎನ್ನುವ ರೀತಿಯಲ್ಲಿ ಕಾಪಾಡಿಕೊಂಡು ಬಂದಿರುತ್ತಾರೆ. ಆದರೆ ಅಲ್ಲಿ ಜನ ಹೆಣ ಹೊತ್ತುಕೊಂಡು ಹೂಳುವುದಕ್ಕೆ ಹೋದರೆ, ಮಾಗಡಿ ಮೈನ್ ರೋಡ್‌ನಲ್ಲಿ ನಾಲ್ಕು ಗಂಟೆಗಳ ಕಾಲ ಕಾದರೂ ಅಧಿಕಾರಿಗಳು ಹೆಣ ಹೂಳುವುದಕ್ಕೆ ಬಿಡಲಿಲ್ಲ. ಅಧಿಕಾರಿಗಳು ಯಾರ ಪರವಾಗಿದ್ದಾರೆಂದು ನೋಡಬೇಕು. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಇದರ ಫೋಟೋ ಬಂದಿದೆ. ನಮ್ಮದೇ ಸರ್ಕಾರಿ ಜಮೀನು ಇದ್ದರೂ ಕೂಡ ಬಿಡಲಿಲ್ಲ. ಈ ರೀತಿ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಜನಗಳಿಗೆ ಏನು ಬೇಕಾಗಿದೆ, ಸ್ಮಶಾನಕ್ಕೆ ಜಮೀನು ಬೇಕಾಗಿದೆ, ಆಟದ ಮೈದಾನಕ್ಕೆ ಮತ್ತು ಪೋಲೀಸ್ ಸ್ಟೇಷನ್‌ಗಳಿಗೆ ಜಮೀನು ಬೇಕಾಗಿದೆ. ಶಾಲಾ ಕಟ್ಟಡಕ್ಕೆ ಬೇಕಾಗಿದೆ. ಇದನ್ನು ಉಳಿಸಿ ತಾನೇ ನೀವು ಬೇರೆಯವರಿಗೆ ಜಮೀನು ಗ್ರಾಂಟ್ ಮಾಡಬೇಕು. ನಿಮ್ಮ ಅಧಿಕಾರಿಗಳಿಗೆ ಅದರ ಜ್ಞಾನ ಇರುವುದಿಲ್ಲವಾ? ಅಧಿಕಾರಿಗಳು ಸ್ಮಶಾನ ಇದೆಯೋ ಏನು ಇದೆ ಎಂದು ಯೋಚನೆ ಮಾಡಬೇಕು; ಅಲ್ಲಿನ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿ ಗಾದರೂ ಕೇಳಬೇಕು. ಎಂಎಲ್‌ಎಯನ್ನಾದರೂ ಕೇಳಬೇಕು, ಯಾರನ್ನಾದರೂ ಕೇಳಬೇಕಲ್ಲಾ. ಅಲ್ಲಿ ವ್ಯವಸ್ಥೆ ಏನಿದೆ, ಅಲ್ಲಿ ಸ್ಮಶಾನಕ್ಕೆ ಭೂಮಿ ಬೇಕಾಗಿದೆಯೋ, ಆಟದ ಮೈದಾನ ಇದೆಯಾ ಎಂದು ಇವೆಲ್ಲವನ್ನೂ ನೋಡಿ ಆ ನಂತರ ಗ್ರಾಂಟ್ ಮಾಡಬೇಕಾಗಿತ್ತು. ಆ ಒಂದು ತಿದ್ದುಪಡಿಯನ್ನು ನೀವು ತರಬೇಕು. ಊರಿನ ಜನ ಬೇಡವೆಂದು ಹೇಳಿದರೆ ನೀವು ಬೇಕಾದರೆ ಯಾರಿಗಾದರೂ ಕೊಟ್ಟು ಬಿಡಿ. ಶಾಲೆ ಇದೆಯಾ, ಸ್ಮಶಾನ ಇದೆಯಾ ಇವೆಲ್ಲಾ ನೋಡಿ ನಂತರ ನೀವು ಗ್ರಾಂಟ್ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಎಲ್ಲಾ ಜನರಿಗೆ ಗೊತ್ತಾಗಿ, ಈ ತರಹ ನಾಲ್ಕೂವರೆ ವರ್ಷ ಆಡಳಿತ ನಡೆಸಿದವರಿಗೆ ಬೇಡವೆಂದು ಹೇಳಿ ಅವರಿಗೆ ರಿಜೆಕ್ಟ್ ಮಾಡಿ ಕಳುಹಿಸಿದ ಮೇಲೆ ಈಗಾಲಾದರೂ ಯೋಚನೆ ಮಾಡಿ. ಸೆಪರೇಟ್ ಮೀಟಿಂಗ್ ಕರೆದು ಈ ಚರ್ಚೆ ಆದ ಮೇಲಾದರೂ ಯೋಚನೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ಜೊತೆ ಸೇರಬಾರದು ಎಂದು ಯೋಚನೆ ಮಾಡಿ, ನಾವು ಈ ಕೆಲಸ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತಾ ಬೇಡ, ನಾವು ಸೇರಿಸುವುದೂ ಇಲ್ಲ. ಬೇಕಾದರೆ ಈ ಸದನದಲ್ಲಿ ತೀರ್ಮಾನ ಮಾಡೋಣ. ನೀವು ನಮ್ಮ ಜೊತೆ ಬರಬೇಡಿ. ನಾವು ನಿಮ್ಮ ಜೊತೆ ಬರುವುದಿಲ್ಲ.

ಶ್ರೀ ಪಿ.ಜಿ.ಪಿ. ಸಿಂಧ್ಯಾ : ನೀವು ಸೇರಿಸಲ್ಲ ಸೇರಿಸಲ್ಲ ಎಂದು ಹೇಳುತ್ತಲೇ ಇದ್ದೀರಿ, ಅವರನ್ನು ಸೇರಿಸಿಕೊಂಡಿದ್ದೀರಿ. ನಮ್ಮ ಜೊತೆಯಲ್ಲಿ ಸೇರಿಕೊಂಡು ನಾವು ನೀವು ಎಲೆಕ್ಷನ್‌ನಲ್ಲಿ ಸೇರಿ ಫೈಟ್ ಮಾಡಿ, ನಾವು ಕಳೆದುಕೊಂಡೆವು ನೀವೂ ಕಳೆದುಕೊಂಡಿರಿ. ಅದಾದ ಮೇಲೆ ಸೇರಿಸಲ್ಲ ಎಂದರೆ, ಮತ್ತೆ ಜೆಡಿಯು ಜೊತೆಯಲ್ಲಿಯೇ ಇದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಳ ಜಾಸ್ತಿ ಎಂದರೆ, ನೀವು ಗಟ್ಟಿಯಾಗಿ ಅಲ್ಲಿ ನಿಂತರೆ ಇನ್ನೊಂದು ಆರು ತಿಂಗಳಲ್ಲಿ ಮತ್ತೆ ಚುನಾವಣೆಗೆ ಹೋಗುತ್ತೇವಲ್ಲಾ ನೋಡೋಣ ಏನೇನಾಗುತ್ತದೆ ಎಂದು.

ಅಧ್ಯಕ್ಷರು : ಮಾನ್ಯ ಅಶೋಕ್‌ರವರೆ, ದಯಮಾಡಿ ಬೇಗ ಮುಗಿಸಿ, ಬಹಳ ಜನ ಮಾತನಾಡುವವರು ಇದ್ದರೆ.

ಶ್ರೀ ಆರ್. ಅಶೋಕ್ : ಈ ರೀತಿ ಅಕ್ರಮಗಳನ್ನು ಮಾನ್ಯ ಮಂತ್ರಿಗಳು ಕೇಸ್‌ವೈಸ್ ಕೇಸ್ ಪರಿಶೀಲನೆ ಮಾಡುವುದಲ್ಲ, ಈ ರೀತಿ ಆಗಿರುವುದನ್ನೆಲ್ಲಾ ರಿಜೆಕ್ಟ್ ಮಾಡಬೇಕು. ಯಾರು ಜೆನ್ಯೈನ್ ಆಗಿದ್ದಾರೆ, ಯಾರು ನಿಮ್ಮ ರೂಲ್ಸ್ ಒಳಗಡೆ ಬರುತ್ತಾರೆ, ಅವರಿಗೆ ಸ್ಯಾಂಕ್ಷನ್ ಮಾಡುವುದಕ್ಕೆ, ಅವರು ಒಳ್ಳೆಯ ರೀತಿಯಲ್ಲಿ ವಿದ್ಯಾ ಸಂಸ್ಥೆ ನಡೆಸುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಕೆಲವರೆಲ್ಲಾ ಒಳ್ಳೆಯವರಿದ್ದಾರೆ. ಒಳ್ಳೆಯ ಜನರಿಗೆ ವಿದ್ಯಾ ಸಂಸ್ಥೆ ನಡೆಸುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಕೆಲವರೆಲ್ಲಾ ಒಳ್ಳೆಯವರಿದ್ದಾರೆ. ಒಳ್ಳೆಯ ಜನರಿಗೆ ವಿದ್ಯಾ ಸಂಸ್ಥೆ ನಡೆಸುವುದಕ್ಕೆ ಕೊಟ್ಟರೆ ನಾನೂ ಕೂಡ ಎನ್‌ಕ್‌ಕೇಜ್ ಮಾಡುತ್ತೇನೆ. ಅದರ ಜೊತೆಯಲ್ಲಿ ಇವರು ಭೂಮಿ ಒಡೆತನ ತೆಗೆದುಕೊಂಡು ಭೂಮಿ ಲೀಸ್ ಮಾಡುವುದು, 10 ಎಕರೆ ಜಮೀನು ಸಿಕ್ಕರೆ ಅದನ್ನು ಒಂದು ಕೋಟಿ ರೂಪಾಯಿಗೆ ಲೀಸ್‌ಗೆ ಕೊಡುತ್ತಾರೆ. ಸರ್ಕಾರದಿಂದ ಜಮೀನು ತೆಗೆದುಕೊಂಡು ಬೇರೆಯವರಿಗೆ ಲೀಸ್ ಕೊಟ್ಟು ಬೇರೆಯವರು ಕಾನ್ವೆಂಟ್ ಸ್ಕೂಲ್‌ಗಳನ್ನು ನಡೆಸುತ್ತಾರೆ. ಸರ್ಕಾರಕ್ಕೆ ಇವರಿಂದ ಏನೂ ಬೆನಿಫಿಟ್ ಇಲ್ಲ. ಪ್ರೈವೇಟ್‌ನವರು ಯಾರೂ ಫ್ರೀ ಸೀಟ್ ಕೊಡುವುದಿಲ್ಲ. ಇವರೆಲ್ಲಾ ಡೊನೇಷನ್ ತೆಗೆದುಕೊಂಡು ಶಾಲೆ ನಡೆಸುವವರು ಇವರು. ಇವರು ಯಾರೂ ಕನ್ನಡ ಶಾಲೆ ನಡೆಸುವವರಲ್ಲ. ಇವರೆಲ್ಲಾ ಬಡವರ ಮಕ್ಕಳಿಗೆ ಸೇರಿಸುವವರಲ್ಲ. ಅದನ್ನು ತಾವು ಗಮನದಲ್ಲಿಟ್ಟುಕೊಂಡು, ಇದರ ಬಗ್ಗೆ ಯಾರಿಗಾದರೂ ಜಮೀನು ಕೊಟ್ಟಿದ್ದರೆ ಅದನ್ನು ವಜಾ ಮಾಡಬೇಕು. ನಿಜವಾದವರಿಗೆ ಕೊಡುವುದಕ್ಕೆ ನನ್ನದೇನೂ ಅಬ್ಜೆಕ್ಷನ್ ಇಲ್ಲ. ವಜಾ ಮಾಡುತ್ತೀರಿ ಎನ್ನುವ ಭರವಸೆ ನನಗಿದೆ. ಅದನ್ನು ತಾವು ಮಾಡಬೇಕೆಂದು ಹೇಳಿ, ತಾವು ಈಗಾಗಲೇ ತಮ್ಮ ಮ್ಯಾನಿಫೆಸ್ಟೋದಲ್ಲಿ ಕೂಡ ಹೇಳಿದ್ದೀರಿ. ಬೆಂಗಳೂರು ನಗರ

ಸುತ್ತಮುತ್ತಲಿನ ಜಮೀನುಗಳ ಬೆಲೆ ಚಿನ್ನದಷ್ಟು ದುಬಾರಿಯಾಗಿದೆ. ಆದುದರಿಂದ ಇದು ಕಾಂಗ್ರೆಸ್ ಸರ್ಕಾರದ ಆಡಳಿತ ನಡಸುವವರಿಗೆ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿದೆ. ಭೂ ಸ್ವಾಧೀನ ಪ್ರಕ್ರಿಯೆ ಎಂಬ ಕಾಯಿದೆಯ ಮುಖವಾಡದಲ್ಲಿ ಭೂಗಳ್ಳರೊಂದಿಗೆ ಶಾಮೀಲಾಗಿ ರಾಜ್ಯದ ಬೊಕ್ಕಸಕ್ಕೆ ನಷ್ಟ ಮಾಡಿರುವ ಪ್ರಕರಣಗಳು ಅನೇಕ. ಹೀಗೆ ಭ್ರಷ್ಟಚಾರ ಎಸಗಿರುವ ಭೂ ಹಗರಣದಲ್ಲಿ ಭಾಗಿಯಾಗಿರುವ ರಾಜಕಾರಿಣಿಗಳು ಮತ್ತು ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲು ಅನುಕೂಲವಾಗುವಂತಹ ವಿಶೇಷ ನ್ಯಾಯಾಲಯ ರಚನೆ ಮಾಡಬೇಕೆಂದು ಜನತಾದಳದ ಮ್ಯಾನಿಫೆಸ್ಟೋದಲ್ಲಿ ಬರೆದಿದ್ದಾರೆ. ಅದನ್ನು ಮಾಡಬೇಕೆಂದು ನಾನು ಅಗ್ರಹ ಮಾಡುತ್ತೇನೆ. ಇದು ಒಂದೇ ಅಲ್ಲ, ಇದರ ಬಗ್ಗೆ ಛಾರ್ಜ್ ಶೀಟ್ ಸಹ ನೀವು ಮಾಡಿದ್ದೀರಿ. ನಿಮ್ಮ ಜನತಾ ದಳ(ಎಸ್) ಜನರಲ್ ಸೆಕ್ರೆಟರಿಯವರು ಕೋಟ್ಯಾಂತರ ರೂಪಾಯಿಗಳ ಭೂ ಹಗರಣ, ಅಕ್ಕಿ ಹಗರಣದ ಬಗ್ಗೆ ಒಂದು ಫಬ್ಲಿಕ್ ಡಾಕ್ಯುಮೆಂಟ್ ಹೊರಡಿಸಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕು, ಅಕ್ರಮ ಮಾಡಿದವರಿಗೆ ಶಿಕ್ಷೆಯಾಗಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕು, ಬಿಡಿಎದಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಸದನ ಸಮಿತಿ ಮಾಡಬೇಕು, ವಿದ್ಯಾ ಸಂಸ್ಥೆಗಳನ್ನು ಏನು ನಡೆಸುತ್ತಿದ್ದಾರೆ, ಅಕ್ರಮವಾಗಿ ನಿನ್ನೆ ಮೊನ್ನೆ ಹುಟ್ಟಿಕೊಂಡಂತಹ ಸಂಸ್ಥೆಗಳಿಗೆ ಏನು ಕೊಟ್ಟಿದ್ದೀರಿ, ಇದು ರದ್ದಾಗ, ಬೇಕು ಇದರ ಬಗ್ಗೆ ತನಿಖೆಯಾಗಬೇಕು, ಬೆಂಗಳೂರು ಸುತ್ತಮುತ್ತ ಏನು ಸೊಸೈಟಿಗಳನ್ನು ಮಾಡಿದ್ದಾರೆ, ಪಾರ್ಕ್‌ಗಳನ್ನು ಮಾರಾಟ ಮಾಡುವುದರ ಮೂಲಕ ಏನು ಹಗಲು ದರೋಡೆ ಮಾಡುತ್ತಿದ್ದಾರೆ, ಇದನ್ನು ನಿಲ್ಲಿಸಬೇಕು. ಇದೆಲ್ಲಾ ಆಗಬೇಕಾದರೆ ನ್ಯಾಯಾಂಗ ತನಿಖೆ ಮಾಡಿ, ಇದರ ಹಿಂದೆ ಇರುವ ಸತ್ಯ ಸಂಗತಿ ಜನಗಳಿಗೆ ಗೊತ್ತಾಗಬೇಕಾಗಿದೆ. ಮುಂದೆ ಯಾರಾದರೂ ಈ ರೀತಿ ಅಕ್ರಮ ಮಾಡಿದರೆ ಅವರಿಗೆ ಶಿಕ್ಷೆಯಾಗುತ್ತದೆ ಎನ್ನುವ ಭರವಸೆ ಬರಬೇಕು. ಮಾನ್ಯ ಪುಟ್ಟೇಗೌಡರು ಸದನದಲ್ಲಿ ಮಾತನಾಡುತ್ತೀರಿ ಹೋಗುತ್ತೀರಿ, ಅಷ್ಟು ಕೇಳಿ ಸುಮ್ಮನಾಗುತ್ತಾರೆ, ನಾವು ಮತ್ತೆ ಹೋದರೆ ಜನ ನಮಗೆ ಬೈಯುತ್ತಾರೆ ಎಂದು ಹೇಳಿದರು....

ಅಧ್ಯಕ್ಷರು : ಮಾನ್ಯ ಅಶೋಕ್ ಅವರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಬಂದು ಇಷ್ಟು ದಿವಸಗಳಾದರೂ ಇದೇ ತರಹ ನಡೆಯುತ್ತಲೇ ಹೋಗುತ್ತಿದೆ, ಅದಕ್ಕೋಸ್ಕರ ಏನೂ ಪರಿಣಾಮವಾಗುವುದಿಲ್ಲವೆಂದು ಅವರು ಮನನೊಂದು ಮಾತನಾಡಿದ್ದಾರೆ.

ಶ್ರೀ ಆರ್. ಅಶೋಕ್ : ಸರಿ ಇದೆ. ಅದರ ಬಗ್ಗೆ ನಾನು ಕೂಡ ಧ್ವನಿಗೂಡಿಸುತ್ತೇನೆ. ಈ ಅಕ್ರಮಗಳು ಏನಾಗಿದೆ ಅದರ ಬಗ್ಗೆ ತನಿಖೆಯಾಗಬೇಕು, ನಾನು ಈಗಾಗಲೇ ಸದನ ಸಮಿತಿಗೆ ಅಗ್ರಹ ಮಾಡಿದ್ದೇನೆ, ಜನತಾದಳದವರು ಸ್ಪೆಷಲ್ ಕೋರ್ಟ್ ಮಾಡಿ ಶಿಕ್ಷೆ ಕೊಟ್ಟು ಅಂತಹವರಿಗೆ ಸ್ಪೆಷಲ್ ಜೈಲಿನಲ್ಲಿ ಇಡುತ್ತೇವೆಂದು ಹೇಳಿದ್ದಾರೆ, ಅದನ್ನು ಮಾಡಬೇಕೆಂದು ಅಗ್ರಹ ಮಾಡುತ್ತಿದ್ದೇನೆ, ಸಮಗ್ರ ತನಿಖೆಯಾಗಬೇಕೆಂದು ಅಗ್ರಹ ಮಾಡಿ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ನೀವು ನಾಳೆ ಮುಂದುವರೆಸುತ್ತೇವೆಂದು ಹೇಳಿದಿರಿ, ಆದರೆ ಇದನ್ನು ಈಗಲೇ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದೀರಿ. ಕೆಲವು ಸದಸ್ಯರು ನಾವು ಮಾತನಾಡತಕ್ಕಂಥದ್ದು ಕಥೆ ಹೇಳಿದ ಹಾಗೆ ಇದೆ ಎಂದು ಹೇಳಿದರು. ಇದು ಖಂಡಿತವಾಗಿಯೂ ಕಥೆಯಲ್ಲ, ಇದೊಂದು ವಾಸ್ತವಾಂಶ. ಈ ರಾಜ್ಯದಲ್ಲಿ ಏನೇನೆಲ್ಲಾ ಅವ್ಯವಹಾರಗಳು ಕಾನೂನು ವಿರುದ್ಧವಾದ ಚಟುವಟಿಕೆಗಳ ಮುಖಾಂತರ, ಕ್ರಮಗಳ

ಮುಖಾಂತರ ಅತ್ಯುನ್ನತ ಸ್ಥಾನದಲ್ಲಿರತಕ್ಕಂತಹ ಜನ ನಡೆಸಿರತಕ್ಕಂತಹ ಕಾನೂನು ಬಾಹಿರ ಚಟುವಟಿಕೆಗಳು, ಅಕ್ರಮ ಚಟುವಟಿಕೆಗಳು ಇದು ಕಥೆಗಳಲ್ಲ. ಏಕೆಂದರೆ, ನಾವು ಮಾತನಾಡುವ ಪ್ರತಿಯೊಂದು ವಿಷಯಕ್ಕೂ ದಾಖಲೆಗಳಿವೆ. ದಾಖಲೆ ಇಲ್ಲದೆ ಹೇಳಿದರೆ ಕಥೆ ಎಂದು ಹೇಳಬಹುದು. ದಾಖಲೆ ಇಟ್ಟು ಹೇಳತಕ್ಕಂತಹ ಸಂದರ್ಭದಲ್ಲಿ ಇದನ್ನು ಕಥೆ ಎಂದು ದಯವಿಟ್ಟು ಯಾರೂ ಭಾವಿಸಬಾರದು. ಇದು ಬಹಳ ಪ್ರಮುಖವಾದ ವಿಚಾರ. ನೀವು ತಕ್ಷಣ ಮಾತನಾಡಿ ಮುಗಿಬಿಡಿ ಎಂದು ಹೇಳಿದರೆ, ಅದರಲ್ಲಿ ಅರ್ಥವೇನಿಲ್ಲ. ಏಕೆಂದರೆ, ಸುಮ್ಮನೆ ಬಾಯಿ ಚಪಲಕ್ಕೆ ಚರ್ಚೆ ಮಾಡಿ ಮುಗಿಸಿಕೊಂಡು ಹೋಗತಕ್ಕಂತಹ ವ್ಯವಹಾರವಲ್ಲ ಇದು. ದಯವಿಟ್ಟು ಅಧ್ಯಕ್ಷರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಅಥವಾ ಇದು ಯಾವುದೋ ಒಂದು ಪಬ್ಲಿಸಿಟಿಗೋಸ್ಕರ ಅಗತಕ್ಕಂತಹ ಚರ್ಚೆಯಲ್ಲ ಇದು. ಈ ರಾಜ್ಯದ ಬೊಕ್ಕಸಕ್ಕೆ ಈ ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿದಂತಹ ಜನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವೆಲ್ಲಾ ಶಾಸಕರಾಗಿ ಇಲ್ಲಿ ಬಂದು ಪ್ರಮಾಣವಚನ ಸ್ವೀಕರಿಸುವಾಗ ಈ ರಾಜ್ಯವನ್ನು ರಕ್ಷಣೆ ಮಾಡುತ್ತೇವೆ, ಸಂವಿಧಾನವನ್ನು ರಕ್ಷಣೆ ಮಾಡುತ್ತೇವೆ, ಸಂವಿಧಾನದ ಪ್ರಕಾರ ನಡೆದುಕೊಳ್ಳುತ್ತೇವೆಂದು ಹೇಳಿ ನಾವೆಲ್ಲಾ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇವೆ. ಆ ಪ್ರಮಾಣವಚನ ಸ್ವೀಕಾರ ಮಾಡಿ ಅಧಿಕಾರಕ್ಕೆ ಹೋದಂತಹ ಜನ, ಆ ಸಂವಿಧಾನಕ್ಕೆ ವಿರುದ್ಧವಾಗಿ, ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿರತಕ್ಕಂತಹ ಕ್ರಮಗಳಿಂದಾಗಿ ಎಷ್ಟು ಸಾವಿರ ಕಲೋಟಿ ರೂಪಾಯಿಗಳು ಈ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿದೆ, ಎಷ್ಟು ಲಕ್ಷ ಬಡ ಕುಟುಂಬಗಳು ಇವತ್ತು ಸಂಪೂರ್ಣವಾಗಿ ಇದರಿಂದ ತುಳಿತಕ್ಕೆ ಒಳಗಾಗಿಗದ್ದಾರೆ ಎನ್ನತಕ್ಕಂತಹ ಅಂಶಗಳನ್ನು ನಾವು ಚರ್ಚೆ ಮಾಡದೆ, ಸದನದಲ್ಲಿ ಬೇರೆ ಏನೋ ಚರ್ಚೆ ಮಾಡಿಕೊಂಡು ಹೋದರೆ ಯಾವುದೇ ರೀತಿಯ ಅರ್ಥವಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ಎರಡು ಭೂ ಹಗರಣಗಳ ಬಗ್ಗೆ ಮಾತನಾಡುತ್ತಿದ್ದೇನೆ. ಒಂದು ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾಜೆಕ್ಟ್ ಒಂದು ಕತೆಯಾದರೆ, ಕೆಐಡಿಬಿ ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಅದರದು ಒಂದು ದೊಡ್ಡ ಭೂ ಹಗರಣ ಇದೆ. ಅದರ ಜೊತೆಗೆ ಬಿಡಿಎದು ಒಂದು ಇದೆ. ಮೂರು ಸಂಸ್ಥೆಗಳು ಸೇರಿ ಮಾಡಿರತಕ್ಕಂತಹ ಅವ್ಯವಹಾರಗಳು, ಕಾನೂನು ವಿರುದ್ಧವಾದ ಚಟುವಟಿಕೆಗಳಿಂದಾಗಿ ಈ ರಾಜ್ಯ ಏನಾಗಿದೆ ಎಂದು ಹೇಳತಕ್ಕಂಥದ್ದು. ಬೆಂಗಳೂರು–ಮೈಸೂರು ಕಾರಿಡಾರ್ ರಸ್ತೆ ಬಗ್ಗೆ ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ವಿವರವಾಗಿ ಚರ್ಚೆಯಲ್ಲಿ ಹೇಳಿದ್ದಾರೆ. ಅವರು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳತ್ತೇನೆ. ಇನ್ನು ಅವರು ಹೇಳದೇ ಬಿಟ್ಟಿರತಕ್ಕಂಥ ವಿಚಾರದ ಬಗ್ಗೆ ನಾನು ಹೇಳಬಯಸುತ್ತೇನೆ. ಈ ಬೆಂಗಳೂರು–ಮೈಸೂರು ಕಾರಿಡಾರ್ ರಸ್ತೆ ಮಾಡಲು 1995ರಲ್ಲಿ ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ ಯಾರು ಯಾರು ಕಂಪನಿಗಳು ಸಹಿ ಮಾಡಿ ಒಪ್ಪಂದವನ್ನು ಮಾಡಿಕೊಂಡಿದ್ದರೋ ಆ ಒರಿಜಿನಲ್ ಕಂಪನಿಗಳು ಇವೊತ್ತು ಯಾವುದೂ ಈ ಪಿಕ್ಚರ್‌ನಲ್ಲಿ ಇಲ್ಲ. ಇದು ಬಹಳ ಪ್ರಮುಖವಾದ ವಿಚಾರ. ಯಾವ ಯಾವ ಕಂಪನಿಗಳು ಮತ್ತು ಯಾರ್‍ಯಾರು ಅದಕ್ಕೆ ಸಹಿ ಹಾಕಿದ್ದರು ಮತ್ತು ಇವೊತ್ತು ಯಾವ ಕಂಪನಿ ಆ ದಂದೆ ನಡೆಸುತ್ತಿದೆ ಎಂದು ಹೇಳತಕ್ಕಂಥದ್ದು ಬಹಳ ಮುಖ್ಯವಾದುದು. ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳುತ್ತಿರುವ ಬಗ್ಗೆ ಸ್ವಲ್ಪ ಈ ಕಡೆ ಗಮನಿಸಿದರೆ ಒಳ್ಳೆಯದು. ನಾನು ಆ ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ನ್ನು ಓದುವುದಿಲ್ಲ. ಆದರೆ ಅದಕ್ಕೆ ಸಹಿ ಹಾಕಿದಂಥ ಕಂಪನಿಗಳೂ ಯಾವುವು ಮತ್ತು ಇವೊತ್ತು ಉಳಿದುಕೊಂಡಿರುವಂಥ ಕಂಪನಿಗಳು ಯಾವುದು, ಆ ಸಹಿ ಹಾಕಿದಂಥ ಒರಿಜಿನಲ್

ಕಂಪನಿಗಳು ಏನಾಗಿಹೋಯಿತು ಎಂಬ ಬಗ್ಗೆ ಇವೊತ್ತು ದಾಖಲಾಗಬೇಕಾಗಿದೆ. ಅವೊತ್ತು ಸಹಿ ಹಾಕಿರತಕ್ಕಂಥ ಕಂಪನಿಗಳು ಯಾವುದೆಂದರೆ for and on behalf of the one of the Hangin Prestin inc. Mr.Richard E.Hangin, Chief Executive officer, for and on behalf of Government of State... for and on behalf of the SAB Engineering and construction, Mr. Ashok Kine, President and for and on behalf of the Kalyani Group ಇವುಗಳಲ್ಲಿ ಮೊದಲನೆಯದಾಗಿ ಚರ್ಚೆ ಮಾಡಿರತಕ್ಕಂಥ ಕಂಪನಿ ಅಮೆರಿಕಾದ ಒಂದು ಕಂಪನಿ ಆಗಿದೆ. ಆ ಕಂಪನಿಗಳು ಯಾವುವೂ ಕೂಡ ಇವೊತ್ತು ಈ ಸೀನ್‌ನಲ್ಲಿ ಇಲ್ಲ. ಆ ಕಂಪನಿಗಳು ಎಲ್ಲಿಗೆ ಹೋದವು. ಫೈನಲಿ ಇದು "ನೈಸ್" ಕಂಪನಿ ಅಂದರೆ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ಗೆ ಹೇಗೆ ಬಂತು ಎನ್ನತಕ್ಕಂಥದ್ದೇ ದುರಂತ ಕಥೆಯಾಗಿದೆ. ಈ ಕಂಪನಿಗಳೆಲ್ಲಾ ಹೋಗಿ, ಅಲ್ಲಿ ಸಹಿ ಮಾಡಿರುವುದೆಲ್ಲಾ ಹೋಗಿ, ಆ ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿದ್ದಂಥ ಅಂಶಗಳೆಲ್ಲಾ ಹೋಗಿಬಿಟ್ಟು ಅದರಲ್ಲಿದ್ದಂಥ ಯಾವುದೇ ಅಂಶ ಇದರಲ್ಲಿಲ್ಲ. ಆ ಎಂ.ಒ.ಯು.ನಲ್ಲಿ ಬಾರಿ ಸ್ಪಷ್ಟವಾಗಿ ಏನು ಹೇಳಿದ್ದಾರೆಂದರೆ ಸರ್ಕಾರ ಇದಕ್ಕೆ ಒಂದೇ ಒಂದು ನಯಾಪೈಸೆಯನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಈ ಕಾರಿಡಾರ್ ಯೋಜನೆಗೆ ಸರ್ಕಾರ ಒಂದೇ ಒಂದು ಎಕರೆ ಜಮೀನನ್ನು ಕೊಡುವುದಕ್ಕೆ ತಯಾರಿಲ್ಲವೆಂದು ಹೇಳಿ ಭೂಮಿಯನ್ನು ಕಂಪನಿಯವರೇ ಖರೀದಿ ಮಾಡಬೇಕೆಂದು ಸ್ಪಷ್ಟವಾಗಿ ಎಂ.ಒ.ಯು.ನಲ್ಲಿ ಹೇಳಿದ್ದಾರೆ. ಆದರೆ ಅವು ಯಾವುವೂ ಇವೊತ್ತು ಇಲ್ಲವಾಗಿದೆ. ಆ ಕಂಪನಿಗಳೂ ಕೂಡ ಇಲ್ಲ. ಅವೊತ್ತು ಇದ್ದ ಸರ್ಕಾರವೂ ಇವೊತ್ತು ಇಲ್ಲ. ಈ ಕಂಪನಿಗಳೆಲ್ಲಾ ಇವೊತ್ತು ಎಲ್ಲಿಗೆ ಹೋದವು ಎಂಬುದೇ ಪ್ರಶ್ನೆ. ಅವೊತ್ತು ಎಂ.ಒ.ಯು.ನಲ್ಲಿದ್ದಂಥ ಕಂಡೀಶನ್ಸ್‌ಗಳೂ ಕೂಡ ಇವೊತ್ತು ಯಾವುದೂ ಉಳಿದಿಲ್ಲ. ಅದೆಲ್ಲವನ್ನೂ ನುಂಗಿಹಾಕಿದ್ದಾರೆ. ಇದರ ಜೊತೆಗೆ ಆಗಲೇ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಒಂದು ಪ್ರಶ್ನೆ ಬಂತು. ಆಗಿನ ಕೈಗಾರಿಕಾ ಮಂತ್ರಿಗಳು ಅಧಿಕಾರಿವನ್ನು ಪಡೆದಂಥ ಸಂದರ್ಭದಲ್ಲಿ 6000 ಎಕರೆ ಎಕ್ಸೆಸ್ ಲ್ಯಾಂಡ್ ಅನ್ನು ಅನಾವಶ್ಯಕವಾಗಿ ಏಕೆ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಆದರೆ ಅವರು ಹಾಗೆ ಕೇಳಿದ ಮೇಲೂ ಕೂಡ 2000 ಎಕರೆ ಲ್ಯಾಂಡ್‌ಗೆ ಮತ್ತೆ ಅಕ್ವಿಜಿಶನ್‌ಗೆ ನೋಟಿಫೈ ಮಾಡಿದ್ದಾರೆ. ಆರು ಸಾವಿರ ಎಕರೆ ಅನಾವಶ್ಯಕವಾಗಿ ತೆಗೆದುಕೊಂಡಿದ್ದಾರೆ ಎಂದು ಹೇಳಿದ ಮೇಲೂ ಕೂಡ ಮತ್ತೆ 2000 ಎಕರೆಗೆ ನೋಟಿಫಿಕೇಶನ್ ಮಾಡಿದ್ದಾರೆ. ಅದರ ಬಗ್ಗೆ ಈಗಿನ ಪಿಡಬ್ಲ್ಯೂಡಿ ಮಂತ್ರಿಗಳು ವಿವರವಾದ ಲೇಖನಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಬಹಳ ಮುಖ್ಯವಾಗಿ ಇನ್ನೊಂದು ಅಂಶ ಅಡಗಿದೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಬಗರ್ ಹುಕುಂ ಸಾಗುವಳಿ ಸಂಸ್ಥೆಗಳು ಬಡವರಿಗೆ ಭುಮಿಯನ್ನು ಮಂಜೂರು ಮಾಡಿದ್ದರೆ ಅಂಥ ಭೂಮಿಯನ್ನೂ ಕೂಡ ಅಕ್ವೈರ್ ಮಾಡಿದ್ದಾರೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಮಂಜೂರಾಗಿದೆ, ಇದಲ್ಲದೇ ಮನೆ ಇಲ್ಲದವರಿಗೆ ಮನೆ ಕೊಡಬೇಕೆಂದು ಹೇಳಿ ಆಶ್ರಯ ಯೋಜನೆ ಬಡವರಿಗೆ ನಿವೇಶನಗಳಿಗಾಗಿ ಅಕ್ವೈರ್ ಮಾಡಿದ್ದರು. ಇಂಥ ಭೂಮಿಯನ್ನು ಕೂಡ ಇವರು ಅಕ್ವೈರ್ ಮಾಡಿದ್ದಾರೆ. ಅದರ ಬಗ್ಗೆ ವಿವರವಾಗಿ ಹೇಳಲು ನನಗೆ ಅವಕಾಶ ಕೊಟ್ಟರೆ ನಾನು ಯಾರ ಯಾರ ಹೆಸರುಗಳು ಎನ್ನುವುದನ್ನೂ ಹೇಳುತ್ತೇನೆ. ಯಾರ ಯಾರ ಜಮೀನುಗಳನ್ನು ಅಕ್ವೈರ್ ಮಾಡಿದ್ದಾರೆ ಎಂಬ ಬಗ್ಗೆ ವಿವರವಾಗಿ ಹೇಳಬಲ್ಲೆ. ಅಂಥ ಬಡವರಿದ್ದಾರೆ. ಶ್ರೀಮಂತರದ್ದು ಬಿಡಿ. ಇಂಥ ಬಡವರ ಭೂಮಿಯನ್ನೂ ಕೂಡ ಬಿಡದೇ ಅಕ್ವೈರ್ ಮಾಡಿದ್ದಾರೆ. ಇನ್ನೊಂದು ಬಹಳ ಮುಖ್ಯವಾದ ಅಂಶವೇನು ಎಂದರೆ ನಾನು ಈ

ಬಗ್ಗೆ ವಿವರಗಳಿಗೆ ಹೋಗುವುದಕ್ಕೆ ಮೊದಲು ಈ ಕಾರಿಡಾರ್ ರಸ್ತೆ ಏನಿದೆ ಈ ರಸ್ತೆಯ ಮುಖ್ಯ ಅಂಶಗಳು ಏನೇನಿತ್ತು ಎಂದು ಹೇಳತಕ್ಕಂಥದ್ದು. ಯಾವ ಉದ್ದೇಶಕ್ಕೋಸ್ಕರ ಮಾಡಿದ್ದರು ಎಂದು ಹೇಳತಕ್ಕಂಥದ್ದನ್ನು ನಾನು ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದು ಅವಾಗಲೀ ಚರ್ಚೆಯಾಗುತ್ತಿತ್ತು. 1995 ರಂದು ಕರ್ನಾಟಕ ಸರ್ಕಾರ ಒಂದು ಒಪ್ಪಂದಕ್ಕೆ ಬಂದಿದೆ. ಇದರ ಮುಖ್ಯ ಉದ್ದೇಶವೇನು ಎಂದರೆ 110 ಕೊ.ಲೋಮೀಟರ್ ಉದ್ದದ ಎಕ್ಸ್‌ಪ್ರೆಸ್ ರಸ್ತೆ, 41 ಕಿಲೋಮೀಟರ್ ಉದ್ದದ ಪೆರಿಫೆರಲ್ ರಸ್ತೆ ಮತ್ತು 9.5 ಕಿ. ಲೋಮೀಟರ್ ಉದ್ಧದ ಲಿಂಕ್ ರಸ್ತೆಗಳನ್ನು ಸದರಿ ಕಂಪನಿಗಳ ಸಮೂಹವು ತಮ್ಮದೇ ಬಂಡವಾಳವನ್ನು ಹೂಡಿ ನಿರ್ಮಿಸಲು ಮತ್ತು ಕಂಪನಿಗಳು ಹೂಡಿರುವ ಬಂಡವಾಳವನ್ನು "ಟೋಲ್" ವಸೂಲಿ ಮೂಲಕ ಮೂವತ್ತು ವರ್ಷದ ಅವಧಿಯೊಳಗಾಗಿ ವಾಪಸ್ಸು ಪಡೆದುಕೊಳ್ಳಬಹುದಾಗಿದೆಯೆಂದು ಆ ಸಂಬಂಧ ಭು ಸ್ವಾಧೀನ ಪತ್ರಗಳ ವೆಚ್ಚವನ್ನು ಸದರಿ ಕಂಪನಿಗಳೇ ಪೂರ್ಣವಾಗಿ ಭರಿಸಬೇಕೆಂದು ಸ್ಪಷ್ಟವಾಗಿ ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿ ಹೇಳಲಾಗಿದೆ. ಆದರೆ ಅದೇ ಯೋಜನೆಯಲ್ಲಿ ಇದ್ದ ಟೌನ್‌ಶಿಪ್‌ಗಳ ಬಗ್ಗೆ ಆಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ಆ ಟೌನ್‌ಶಿಪ್‌ಗಳನ್ನು ಮಾಡುವ ಸಂಬಂಧದಲ್ಲಿ ನವಂಬರ್ 11, 1996ರಲ್ಲಿ ಹೊರಡಿಸಿದ ಸರ್ಕಾರಿ ಆದೇಶದಂತೆ ಈ ಯೋಜನೆಯಡಿ ಸರ್ಕಾರಕ್ಕೆ ಯಾವುದೇ ರೀತಿಯಲ್ಲಿ ಆರ್ಥಿಕ ಹೊರೆ ಸರ್ಕಾರಕ್ಕೆ ಬೀಳಬಾರದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆಗ ಈ ಯೋಜನೆಯ ಮೂಲ ಉದ್ದೇಶಕ್ಕಾಗಿ ಎಷ್ಟು ಎಕರೆ ಜಮೀನು ಅಗತ್ಯವಿತ್ತು ಎಂದರೆ ದಿನಾಂಕ 26–11–1996ರಲ್ಲಿ ಲೋಕೋಪಯೋಗಿ ಇಲಾಖೆ ಈ ಯೋಜನೆ ಕಾಮಗಾರಿಯನ್ನು ಭಾರತ್ ಫೋರ್ಜ್ ಲಿಮಿಟೆಡ್ ಇವರಿಂದ ನಿರ್ಮಾಣ ಮಾಡಲು ತೀರ್ಮಾನಿಸಿ ಸರ್ಕಾರದ ಜಮೀನನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆ ಮಾಡುವಂತೆ ಕಂದಾಯ ಇಲಾಖೆಯನ್ನು ಕೋರಿತು. ಆದರೆ ವಿಪರ್ಯಾಸ ಏನೆಂದರೆ ಲೋಕೋಪಯೋಗಿ ಇಲಾಖೆಯ ಕೋರಿಕೆಗೆ ವ್ಯತಿರಿಕ್ತವಾಗಿ ಸರ್ಕಾರದ ಜಮೀನು ನೈಸ್ ಕಂಪನಿಗೆ ವರ್ಗಾವಣೆಯಾಯಿತು. ನಂತರ ಏನಾಯಿತು ಎಂಬುವುದು ನಿಮಗೆ ಎಷ್ಟು ಜಮೀನು ಬೇಕೋ ಅಷ್ಟು ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಮೊದಲು ಪ್ರಾಜೆಕ್ಟ್‌ನ ರಸ್ತೆಯ ಅಲೈನ್‌ಮೆಂಟ್‌ನ್ನು ಸರ್ಕಾರ ಅಪ್ರೂವಲ್ ಮಾಡಬೇಕಾಗಿತ್ತು. ಅದನ್ನು ಸರ್ಕಾರ ಅಪ್ರೂವ್ ಮಾಡಲೇ ಇಲ್ಲ. ಇದುವರೆಗೂ ಅಪ್ರೂವ್ ಮಾಡಲೇ ಇಲ್ಲ. ಅಲೈನ್‌ಮೆಂಟ್ ಎಲ್ಲಿದೆ ಎಂಬುದು ಗೊತ್ತಿಲ್ಲ. ಆದರೆ ಇವರು ಇವೊತ್ತು ತೆಗೆದುಕೊಂಡಿರತಕ್ಕಂಥ ಭೂಮಿ ಎಷ್ಟು ಎಂ.ಓ.ಯು ಪ್ರಕಾರ ಇವರೇ ಹೇಳಿರುವ ಪ್ರಕಾರ ಇವರಿಗೆ ಬೇಕಾಗಿರತಕ್ಕಂಥ ಭೂಮಿ 20,193 ಎಕರೆ ಭೂಮಿ ಬೇಕಾಗಿತ್ತು. ಆದರೆ ನೋಟಿಫೈ ಮಾಡಿರುವುದು 29141 ಎಕರೆಗೆ. ಇನ್ನು ಉಳಿದಂಥ 8948 ಎಕರೆ ಅಂದರೆ ಸುಮಾರು 9 ಸಾವಿರ ಎಕರೆ ಜಮೀನನ್ನು ರಿಯಲ್ ಎಸ್ಟೇಟ್ ದಂಧೆಗೆ ಇಟ್ಟರು. ಇವರ ರಿಪೋರ್ಟ್ ಪ್ರಕಾರವೇ. ನಾನು ವಿವರಗಳಿಗೆ ಹೋಗುವುದಿಲ್ಲ. ಇಲ್ಲಿ ಹಣದ ಅವ್ಯವಹಾರ ಹೇಗಿದೆಯೆಂದರೆ ಆ 5688 ಎಕರೆ ಟೋಟಲ್ ಎಕ್ಸ್‌ಟೆಂಟ್‌ಗೆ ಹೇಗಾಗಿದೆ ಎಂದರೆ ಖಾಸಗಿ ಜಮೀನು ಬಿಟ್ಟು ಸರ್ಕಾರಿ ಭೂಮಿಗೆ ಅಂದರೆ ಆ 9 ಸಾವಿರದಲ್ಲಿ 5668 ಎಕರೆ ಸರ್ಕಾರಿ ಜಮೀನಾಗಿದೆ ಇನ್ನು ಉಳಿದದ್ದು ಪ್ರೈವೇಟ್ ಲ್ಯಾಂಡ್. ಅದರ ಕಾಸ್ಟ್ ಒಂದು ಎಕರೆಗೆ 25 ಲಕ್ಷ ರೂ ಎಂದು ಲೆಕ್ಕ ಹಾಕಿದರೂ 1422 ಕೋಟಿ ರೂಪಾಯಿ ಆಗುತ್ತದೆ. ಅಂಥ ಭೂಮಿಯನ್ನು ಪ್ರತಿ ಎಕರೆಗೆ 10 ರೂಪಾಯಿಯಂತೆ ನೈಸ್ ಕಂಪನಿಗೆ ಲೀಸ್ ಮಾಡಿರತಕ್ಕಂಥದ್ದು. ಎಕರೆಗೆ 10 ರೂಪಾಯಿ ಪ್ರಕಾರ ಸರ್ಕಾರ ಕೊಟ್ಟಿರತಕ್ಕಂಥದ್ದು. ಮತ್ತೆ ಅದಕ್ಕೆ ರಿಜಿಸ್ಟ್ರೇಶನ್ ಫೀಸ್ ಎಕ್ಸ್‌ಮಾಶನ್ ಎಷ್ಟು ಕೊಟ್ಟಿದ್ದಾರೆಂದರೆ

1442 ಕೋಟಿರೂಗೆ ಶೇಕಡ 11 ಪರ್ಸೆಂಟ್ ಪ್ರಕಾರ ಎಕ್ಸ್‌ಮಾಶನ್ ಕೊಟ್ಟಿದ್ದು ಎಷ್ಟೆಂದರೆ 158 ಕೋಟಿ ರೂಪಾಯಿ. ಇಷ್ಟು ಎಕ್ಸ್‌ಮ್‌ಶನ್ ಇವರು ಕೊಟ್ಟಿರತಕ್ಕಂಥದ್ದು. ಇದರ ಜೊತೆಗೆ 85 ಕೋಟಿ ರೂಪಾಯಿ ಕನ್‌ವರ್ಸನ್ ಛಾರ್ಜ್‌ಸ್ ಎಕ್ಸ್‌ಮಶನ್ ಕೊಟ್ಟಿದ್ದಾರೆ. ಇದರ ಜೊತೆಗೆ ಪ್ರೈವೇಟ್ ಲ್ಯಾಂಡ್ ಇಂಡಸ್ಟ್ರಿಯಲ್ ಕನ್‌ವರ್ಷನ್ ಛಾರ್ಜ್‌ಗೆ 5668 ಎಕರೆಗೆ ಪ್ರತಿ ಎಕರೆಗೆ 5 ಲಕ್ಷ ರೂ ಪ್ರಕಾರ, ಒಟ್ಟು ಇವೆಲ್ಲವೂ ಸೇರಿ 1665 ಕೋಟಿ ರೂ ಇದರ ಜೊತೆಗೆ ಇನ್ನುಳಿದ. ಖಾಸಗಿ ಜಮೀನಿನ ರೇಟ್ ಸೇರಿಸಿದರೆ 2335 ಕೋಟಿ ರೂಪಾಯಿ ಖಾಸಗಿ ಜಮೀನಿನ್ದು ಆಗುತ್ತದೆ.

5.20 ಪಿಎಂ

2,334 ಕೋಟಿ ರೂಪಾಯಿಗಳು ಒಟ್ಟಿಗೆ ಸೇರಿದರೆ, ನಾಲ್ಕು ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಈ ಸರ್ಕಾರಿ ಭೂಮಿಯನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ, ಇದರ ಬಗ್ಗೆ ಮಾನ್ಯ ಅಧ್ಯಕ್ಷರೆ, ನಿಮಗೆ ಆಶ್ಚರ್ಯವಾಗಬಹುದು. ಇದರ ಬಗ್ಗೆ ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಮಾತನಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರು. ಆಗಿನ ಚೀಫ್ ಸೆಕ್ರೆಟರಿಯವರು ಮಾಡಿದಂತಹ ಮೀಟಿಂಗ್‌ನಲ್ಲಿ ಯಾವ್ಯಾವ ರೀತಿಯಲ್ಲಿ ಡೈರೆಕ್ಷನ್ಸ್ ಕೊಡುತ್ತಾರೆಂದರೆ, ಈ ವಿಷಯವಾಗಿ ಸರ್ಕಾರಿ ಇದೆಯಾ ಅಥವ ಇಲ್ಲವಾ, ಎಂಬುದನ್ನು ನೋಡಬೇಕಾಗುತ್ತದೆ. ಈ ಕಮಿಟಿ ಸಭೆ ಸೇರಿದಂತಹ ದಿನಾಂಕ : 6.9.2003ರಂದು 3 ಗಂಟೆಗೆ, ಕಮಿಟಿ ರೂಮ್‌ನಲ್ಲಿ ಸಭೆ ಸೇರುತ್ತದೆ. ಆ ಕಮಿಟಿಯ ಛೇರ್ಮನ್ ಆಗಿದ್ದಂತಹ ಆಗಿನ ಚೀಫ್ ಸೆಕ್ರೆಟರಿಯವರು, ಆ ಕಮಿಟಿಯ ಮೆಂಬರ್‌ಗಳ ಹೆಸರುಗಳನ್ನು ನಾನು ಓದುವುದಕ್ಕೆ ಹೋಗುವುದಿಲ್ಲ ಇಲ್ಲಿ ಲ್ಯಾಂಡ್ ಅನ್ನು ಎಷ್ಟು ಅರ್ಜೆಂಟ್ ಆಗಿ ಟ್ರಾನ್ಸ್‌ಫರ್ ಮಾಡಬೇಕೆಂಬುದು ಬಗ್ಗೆ ಅವರು ಡೈರೆಕ್ಟ್ ಮಾಡುತ್ತಾರೆ. In response to the request made by the Managing Director, NICE on withdrwal of the notification by B.D.A for acquisition of the lands already notified by the K.I.A.D.B. for B.M.I.C.P in Doddatoguru and Tonappana agrahara villages in Hosur Road are and to release 6 acres and 20 guntas of land to K.I.A.D.B. for B.M.I.C.O. in the Arehalli, Bangalore south Taluk, the Chairman suggested the Commissioner B.D.A. to take meeting with the K.I.A.D.B. and Nice and sort out the issues amicably since the issues are not major in nature. Chairman expected that the Commissioner, B.D.A. would complete the exercise to the satisfaction of all concerned before 30th September. ಎಂದು ಹೇಳುತ್ತಾರೆ. ಇಲ್ಲಿ ಎಷ್ಟು ಅರ್ಜೆಂಟ್ ಆಗಿ ಮಾಡಬೇಕೆಂದು ಹೇಳಿದ್ದಾರೆ. ಅವರು ಕೊಟ್ಟಿರುವಂತಹ ಇದು ಒಂದು ಡೈರೆಕ್ಷನ್, ಇಲ್ಲಿ ಅವರಿಗೆ ಎಷ್ಟು ಅರ್ಜೆಂಟ್ ಇದೆಯೆಂಬುದು ಗೊತ್ತಾಗುತ್ತದೆ. ಇನ್ನೊಂದು, ಇವರು ನಮ್ಮ ಕರ್ನಾಟಕ ರಾಜ್ಯದ ಜವಾಬ್ದಾರಿಯನ್ನು ಹೊತ್ತಿರುವಂತಹ ಈ ಚೀಫ್ ಸೆಕ್ರೆಟರಿಯವರು, the committee noted that the proposal of P.W.D. for leasing 554 acres 29 guntas of alternate Government land to the B.M.I.C.P. in lieu of the Government land in Bangalore rural district and Mandya district is received by the

Revenue Department. The Principal Secretary, Revenue Department will take up the issue with the Chief Secretary to Government separately for issuance of formal concurrance in persuance of the G.O.No.PWD.155.CRM.95 Goverment lands dated 29th January 2001. The project company offered to purchase the Government land on lease guideline, value of 1990-2000, which may also be considered before 30th September. ಅದನ್ನೂ 30ರ ಸೆಪ್ಟಂಬರ್‌ಗೆ ಎಂದು ಹೇಳಿದ್ದಾರೆ. ಅಂದರೆ ಇಂತಹ ಒಬ್ಬರು ಚೀಫ್ ಸೆಕ್ರೆಟರಿ ಯಾಗಿದ್ದಂತಹ ಸಂದರ್ಭದಲ್ಲಿ, ಈ ರಾಜ್ಯದ ಆಸ್ತಿ ಯಾವ ರೀತಿಯಲ್ಲಿ ರಕ್ಷಣೆಯನ್ನು ಪಡೆದಿರುತ್ತದೆಂಬುದನ್ನು ತಾವು ಗಮನಿಸಬೇಕು. ಅದೇ ರೀತಿಯಲ್ಲಿ ಆ ಮೀಟಿಂಗ್‌ನಲ್ಲಿ ಇನ್ನೊಂದು ಮುಖ್ಯವಾದಂತಹ ಅಂಶ ಬಂಧಿದೆ. The Committee noted that Revenue Department has issued Government order on 23.06.2000 regarding grant of exemption of stamp duty and concession in registration fees ಇದರಲ್ಲಿ ಬರುವಂಥಾದ್ದು. ಇಷ್ಟು ತರಾತುರಿಯಲ್ಲಿ ಸರ್ಕಾರಿ ಭೂಮಿಯನ್ನು ಖಾಸಗಿ ಕಂಪನಿಯವರಿಗೆ ಕೊಡುವಂತಹ, ಒಂದು ಪರಿಸ್ಥಿತಿ ಹೇಗೆ ನಿರ್ಮಾಣವಾಯಿತು? ಯಾವ ಕಾನೂನಿನ ಆಧಾರದ ಮೇಲೆ, ಇವರು ಮಾಡಿದ್ದಾರೆಂಬುದನ್ನು ನಾವು ಇದರಲ್ಲಿ ಬಹಳ ಪ್ರಮುಖವಾಗಿ ನೋಡಬೇಕಾದಂತಹ ಅಂಶವಾಗಿದೆ. ಇದರ ಬಗ್ಗೆ ಅನೇಕ ಕಮಿಟಿಗಳನ್ನು ಮಾಡಿದರು. ಅದರಲ್ಲಿ ಒಂದು ಕಮಿಟಿಗೆ, ಆಗಿನ ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಒಬ್ಬರು ಇದ್ದರು. ಅವರು ಈಗ ನಮ್ಮ ಜೊತೆಯಲ್ಲಿ ಕುಳಿತಿದ್ದಾರೆ. ಅವರು ಒಂದೇ ಒಂದು ಮೀಟಿಂಗ್ ಅನ್ನು ಪ್ರಿಸೈಡ್ ಮಾಡಿದರು. ಅವರು ಮತ್ತೆ ಮೀಟಿಂಗ್ ಮಾಡುವುದಕ್ಕೆ ಬರಲಿಲ್ಲ. ಅಂತಹ ಸಂದರ್ಭದಲ್ಲಿ ಬಹಳ ಪ್ರಮುಖವಾದಂತಹ ಪಾತ್ರವನ್ನು ವಹಿಸಿದ್ದಾರೆ. ಅವರು ಯಾರು ಯಾರು ಇದರಲ್ಲಿ ಪಾತ್ರ ವಹಿಸಿದ್ದಾರೆ, ಹೇಗೆ ಪಾತ್ರ ವಹಿಸಿದ್ದಾರೆ, ಅದೆಲ್ಲಾ ವಿವರಗಳಿಗೆ ನಾನು ಹೋಗುವುದಿಲ್ಲ. ಇಲ್ಲಿ ಬಹಳ ಮುಖ್ಯವಾಗಿ ಬೆಂಗಳೂರು ನಗರದ ಅಭಿವೃದ್ಧಿಯನ್ನು ಗೊತ್ತು ಗುರಿಯನ್ನು ನಿರ್ಧರಿಸಲು, ಬಿ.ಡಿ.ಎ.ನ ಪರಿಷ್ಕೃತ ಸಿ.ಡಿ.ಪಿ. ಇದೆ. ಇದು ಒಂದು ಕಾನೂನು This is an act enacted by the Legislature. ಹಾಗೆ ಬೆಂಗಳೂರು ಹೊರ ವಲಯದ, ಇಲ್ಲಿ ಸಿ.ಡಿ.ಪಿ. ಎಂದರೆ ಬೆಂಗಳೂರಿನ ಒಳಗಡೆ, ಬೆಂಗಳೂರು ನಗರದ ಹೊರ ವಲಯದ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕೆ ಬಿ.ಎಂ.ಆರ್.ಡಿ.ಎ. ಎಂದು ಇದೆ. This is also an Act enacted by the Legislature. ಅದಕ್ಕೂ ಹೊರ ವಲಯದ ಪ್ರದೇಶಕ್ಕೆ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಇದೆ. ಇವುಗಳು ಕಾನೂನು ಬದ್ಧ ಸಮಸ್ಯೆಗಳು. created by this Legislature. ಆದರೆ ಇನ್ನೊಂದು ಕಂಪೆನಿ ಹುಟ್ಟಿಕೊಂಡಿತು, ಇನ್ನೊಂಡು ಆ್ಯಕ್ಟ್, ಇದೊಂದು ರೂಲ್ಸ್, ಮಾಡಿಕೊಂಡರು. ಅದು ಏನೆಂದರೆ ನೈಸ್ ಕಂಪನಿಯ ಯೋಜನೆಗಳು ಯಾವುದೂ ಸಿ.ಡಿ.ಪಿ.ಯಡಿಯಲ್ಲಿ ಬರುವುದಿಲ್ಲ, ಬಿ.ಎಂ.ಆರ್.ಡಿ.ಎ.ನಲ್ಲಿ ಬರುವುದಿಲ್ಲ, ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಅಡಿಯಲ್ಲಿ ಬರುವುದಿಲ್ಲ. ಇದೆಲ್ಲವನ್ನೂ ಹೊರತಾದ ಇವರೇ ಮಾಡಿ ಕೊಂಡಿರುವಂಥಾದ್ದು, ಬಿ.ಎಂ.ಐ.ಸಿ.ಎ. ಮಾಡಿಕೊಂಡರು. ಇವರು ಯಾರ ಮುಖಾಂತರ? ಯಾವ ಸದನದಲ್ಲಿ ಈ ಕಾನೂನನ್ನು ಮಾಡಲಾಯಿತು? ಯಾವ ಸರ್ಕಾರದ ಆದೇಶದಲ್ಲಿ ಈ ಕಾನೂನನ್ನು ಮಾಡಲಾಯಿತು? ನೈಸ್ ಕಂಪನಿಯನ್ನು ಇದರ ವ್ಯಾಪ್ತಿಯಲ್ಲಿ ತಂದಿರುವಂಥಾದ್ದು. ನಾವು ಸದನದ ಬಗ್ಗೆ ಬಹಳ ಗೌರವಯುತವಾಗಿ ಮಾತನಾಡುತ್ತೇವೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೆ, ಈಗ ತಾವು ಹೇಳಿದ ಬಿ.ಎಂ.ಐ.ಟಿ.ಸಿ.ಎ. ಎಂದರೆ ಏನು?

Sri G.V. Sri Ramareddy : Bangalore-Mysore Infrastructure Corridor Project Association. ಇದು ಇನ್ನೊಂದು, ಈ ನೈಸ್ ಕಂಪೆನಿ ಇದು ಯಾವುದೇ ಕಾಯಿದೆ ಬರುವುದಿಲ್ಲ, ಇದು ಸಿ.ಡಿ.ಪಿಯಲ್ಲಿ ಬರುವುದಿಲ್ಲ, ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್‌ನಲ್ಲಿ ಬರುವುದಿಲ್ಲ. ಬಿ.ಎಂ.ಆರ್.ಡಿ.ಎ.ಗೆ ಬರುವುದಿಲ್ಲ. ಈ ಕಾನೂನು ಅಸೋಸಿಯೇಶನ್‌ಗೆ ಯಾವ ಕಾನೂನು ಬದ್ಧವಾದಂತಹ what is the status of this Association? what is the legal authority behind it? ಇದರ ಪ್ರಕಾರ ಎಲ್ಲಾ ವ್ಯವಹಾರಗಳನ್ನು "ನೈಸ್ ಕಂಪನಿ" ಮಾಡುತ್ತದೆ. ಚುನಾವಣೆಗೆ ಕೆಲವೇ ತಿಂಗಳುಗಳು ಇರುವಾಗ, ಮೇಲ್ಕಡ ಬಿ.ಎಂ.ಎ.ಐ.ಪಿ.ಎ. ಏಜೆನ್ಸಿಯ ಮೂಲಕ, ಮಾಸ್ಟರ್ ಪ್ಲಾನ್ ಅನ್ನು ಕಾನೂನು ಬಾಹಿರವಾಗಿ ತಯಾರು ಮಾಡಿ, ಬೆಂಗಳೂರು ಸುತ್ತ ಮುತ್ತಲೂ ಸುಮಾರು 35 ಸಾವಿರ ಎಕರೆ ವಿಸ್ತೀರ್ಣದ ಪ್ರದೇಶವನ್ನು ಅದರಲ್ಲಿ ಸೇರಿಸಿ, ಪ್ರಕಟಣೆ ಮಾಡಿರುವಂಥಾದ್ದು. ಇದು ಯಾವ ಉದ್ದೇಶಕ್ಕಾಗಿ ಎಂಬುದು ಪ್ರಶ್ನೆ. ಬಿ.ಎಂ.ಐ.ಸಿ.ಪಿ.ಎ. ಈ ಕಂಪನಿಗೆ ಬೇಕಾಗಿರುವಂತಹ ಭೂಮಿ 8 ಸಾವಿರ ಎಕರೆ, ಬೆಂಗಳೂರು ಸುತ್ತ ಮುತ್ತಲು ಲಿಂಕ್ ರೋಡ್ ಮಾಡುವುದಕ್ಕೆ ಅವರ ಪ್ರಕಾರವೇ, ಆದರೆ ಇದರಲ್ಲಿ 35 ಸಾವಿರ ಎಕರೆಯನ್ನು ಹೇಗೆ ಸೇರಿಸಿದ್ದೀರಿ? ಇದು ಯಾವ ಕಾನೂನಿನಲ್ಲಿ ಬಂತು? ಇದನ್ನು ತನಿಖೆ ಮಾಡಬೇಕೋ ಬೇಡವೋ ಹೇಳಿ. ಇದೇನು ಕತೆನಾ?

ಅಧ್ಯಕ್ಷರು : ತಾವು ಬೇಗ ಚರ್ಚೆಯನ್ನು ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮಗೆ ಇದೇ ಸಮಸ್ಯೆ ಬಂದಿರುವುದು. ತಾವು ಬೇಗ ಮುಗಿಸಿ ಎಂದರೆ ಹೇಗೆ? ಹಾಗಾದರೆ ನಾನು ಕುಳಿತುಬಿಡುತ್ತೇನೆ. ನಾನು ಕತೆ ಹೇಳುತ್ತಾ ಇಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಶ್ರೀರಾಮರೆಡ್ಡಿಯವರು ಈಲ್ಡ್ ಆದರೆ ಹೇಳುತ್ತೇನೆ. ಇಲ್ಲಿ ಮೀಟಿಂಗ್‌ಗಳು ಆಗಿ ಹೋಗಿರುವಂಥಾದ್ದನ್ನು ಹೇಳುವಂತಹ ಆದ್ಯತೆಗಳು ಏನಾದರೂ ಇದೆಯಾ? ತಾವು ಸಬ್ಜೆಕ್ಟ್ ಬಿಟ್ಟು, ಮೀಟಿಂಗ್‌ಗಳು ಈ ಡೇಟ್‌ಗಳಲ್ಲಿ ಆಗಿದೆ, ರೇಸಲ್ಯೂಷನ್ ಆಗಿದೆ, ಈ ಡೇಟ್‌ನಲ್ಲಿ ಇದು ಆಗಿದೆಯೆಂದು ಹೇಳುವುದನ್ನು ಬಿಟ್ಟು, ಈ ರೀತಿ ಆಗಿದೆಯೆಂಬುದನ್ನು ಪ್ಯಾಕ್ಟ್ ಅನ್ನು ಕೊಡದೇ, ಬರೀ ಮೀಟಿಂಗ್ ಬಗ್ಗೆ ಹೇಳುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ನಾನು ಹೇಳಿದ್ದನ್ನು ಕೇಳಿಸಿಕೊಂಡಿಲ್ಲ.

ಶ್ರೀ ಕೆ.ಸಿ. ಶ್ರೀನಿವಾಸ ಗೌಡ : ನಾನು ಬಂದಮೇಲೆ ಎಲ್ಲವನ್ನೂ ಕೇಳಿಸಿಕೊಂಡೇ ಈಗ ನಿಮಗೆ ಹೇಳುತ್ತಾ ಇರುವುದು. ಈಗ ತಾವು ಆ ಮಿಟಿಂಗ್ಸ್‌ನ ಅಗತ್ಯ ಇತ್ತಾ ಎಂದು ಹೇಳುತ್ತೀರಿ, ತಾವು ಹೀಗೆ ಆಗಿದೆಯೆಂಬುದನ್ನು ಹೇಳದೆ, ಮೀಟಿಂಗ್ ಇದ್ದ ಡೇಟ್‌ನಲ್ಲಿ, ಹೀಗೆ ಆಯಿತು, ರೇಸಲ್ಯೂಶನ್ ಹೀಗೆ ಆಯಿತು. ಹೌದು, ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಪ್ರಕಾರ, ಪ್ರತಿಯೊಂದು ಎಂದು ಹೇಳುತ್ತೀರಿ, ತಾವು ಹೀಗೆ ಆಗಿದೆಯೆಂಬುದನ್ನು ಹೇಳದೆ, ಮೀಟಿಂಗ್ ಇದ್ದ ಡೇಟ್‌ನಲ್ಲಿ, ಹೀಗೆ ಆಯಿತು, ರೆಸಲ್ಯೂಶನ್ ಹೀಗೆ ಆಯಿತು. ಹೌದು, ಟ್ರಾನ್ಸ್‌ಫ್‌ರೆನ್ಸಿ ಆ್ಯಕ್ಟ್ ಪ್ರಕಾರ, ಪ್ರತಿಯೊಂದು ಮೀಟಿಂಗ್ ನೋಟಿಸ್ ನಿಮಗೆ ಬೇಕೆಂದರೆ ಸಿಗುತ್ತದೆ. ಅದನ್ನು ಓದುವುದೇ, ಮುಖ್ಯವಲ್ಲ. ಇಲ್ಲಿ ವಾಸ್ತವಾಂಶ ಏನಾದರೂ ಇದ್ದರೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಏನು ಹೇಳಿದೆಯೆಂಬುದನ್ನು ನೀವು ಕೇಳಿಸಿಕೊಳ್ಳಲಿಲ್ಲ. ನಾನು ಅದನ್ನೇ ಹೇಳಿದ್ದು, ನೀವು ಕೇಳಿಸಿಕೊಳ್ಳಲಿಲ್ಲ. ಸಿ.ಡಿ.ಪಿ.ಐ. ಇದೆ, ಬಿ.ಎಂ.ಆರ್.ಡಿ.ಪಿ ಇದೆ, ಕಂಟ್ರಿ ಅಂಡ್ ಟೌನ್ ಪ್ಲಾನಿಂಗ್ ಇದೆ. ಈ ಮೂರು ಕಾನೂನು ಬದ್ಧವಾದಂತಹ ಕಾಯಿದೆಗಳಾಗಿವೆ. ಇದನ್ನು ಬಿಟ್ಟು ಈ ಬಿ.ಎಂ.ಐ.ಟಿ.ಪಿ.ಎ. ಅನ್ನು ಮಾಡುವಂತಹ ಅವಶ್ಯಕತೆ ಏನು ಇತ್ತು? ಇದನ್ನು ಯಾರು ಮಾಡಿದರು? ಇದಕ್ಕೆ ಯಾವ ಕಾನೂನು ಇದೆ, ಎಂದು ಹೇಳಿದೆ. ಅದನ್ನು ನೀವು ಕೇಳಿಸಿಕೊಳ್ಳಲಿಲ್ಲ. ನೀವು ನಿಮಗೆ ಬೇಕಾದದ್ದನ್ನು ಮಾತ್ರ ಕೇಳಿಸಿಕೊಂಡಿದ್ದೀರಿ. ಇದನ್ನು ಏಕೆ ನೀವು ಕೇಳಿಸಿಕೊಳ್ಳಲಿಲ್ಲ? who has created this B.M.I.C.P.A.? How the 35,000 acres of land has been brought under this scheme? ಇದನ್ನು ಏಕೆ ತಂದರು? ನಾನು ಇದನ್ನು ಕೇಳುತ್ತಿರುವಂಥಾದ್ದು. ಇದು ಯಾವ ಕಾನೂನು ಬದ್ಧವಾದ ಸಂಸ್ಥೆಯೆಂದು ನಾನು ಕೇಳುತ್ತಿದ್ದೇನೆ. ಅವರು ಯಾವ ಕಡೆಯಾದರೂ ಕುಳಿತಿರಲಿ, ನಾನು ವೈಯಕ್ತಿಯವಾಗಿ ಯಾರ ಬಗ್ಗೆಯೂ ಮಾತನಾಡುತ್ತಿಲ್ಲ. ನಾನು ಅವುಗಳನ್ನು ಹೇಳದೇ, ಕೇವಲ ಮಿಟಿಂಗಿನ ಡೇಟ್ ಹೇಳಲು ಇಲ್ಲಿಗೆ ಬಂದಿಲ್ಲ, ಫ್ಯಾಕ್ಟ್ಸ್ ಹೇಳಲು ಇಲ್ಲಿಗೆ ಬಂದಿರತಕ್ಕಂಥದ್ದು. ಅದರ ಜೊತೆಯಲ್ಲಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 205 ಎಕರೆ ಸರ್ಕಾರಿ ಜಮೀನನ್ನು ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 1152 ಸರ್ಕಾರಿ ಜಮೀನನ್ನು, ರಾಮನಗರ ತಾಲ್ಲೂಕಿನ 573 ಎಕರೆ ಜಮೀನನ್ನು, ಅಂದರೆ ಒಟ್ಟು 1931 ಎಕರೆ ಸರ್ಕಾರಿ ಜಮೀನನ್ನು, ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ:155 ದಿನಾಂಕ 7–10–95ರಂದು ಕೆ.ಐ.ಎ.ಡಿ.ಬಿ.ಯವರು ವಾರ್ಷಿಕ ಎಕರೆಗೆ 10 ರೂಪಾಯಿಗಳಂತೆ ಲೀಸ್‌ಗೆ ಕೊಟ್ಟಿದ್ದಾರೆ. ಇದನ್ನು ಯಾರಿಗೆ ಕೊಟ್ಟಿದ್ದು? ನೈಸ್ ಕಂಪನಿಗೆ. ಅವರು ಅದನ್ನು ಮಾರಾಟ ಮಾಡಿ 150 ಕೋಟಿ ರೂಪಾಯಿಗಳನ್ನು ಐ.ಸಿ.ಐ.ಸಿ.ಐ ಬ್ಯಾಂಕಿನಲ್ಲಿ ಡ್ರಾ ಮಾಡಿದ್ದಾರೆ. ಅದರ ಬಗ್ಗೆ ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ಇದರಲ್ಲಿ ಬಹಳ ಪ್ರಮುಖವಾದಂಥ ಪಾತ್ರ ಅಂದಿನ ಮುಖ್ಯಮಂತ್ರಿಗಳದ್ದಿದೆ, ಅಂದಿನ ಮುಖ್ಯ ಕಾರ್ಯದರ್ಶಿಗಳದ್ದಿದೆ, ಇದರಲ್ಲಿ ಅಂದಿನ ಕೈಗಾರಿಕಾ ಸಚಿವರ ಪಾತ್ರವೇನು ಮತ್ತು ಮುಖ್ಯ ಕಾರ್ಯದರ್ಶಿ, ಈ ನಾಲ್ಕು ಜನರೇ ಅದರಲ್ಲಿ ಪ್ರಧಾನವಾದಂಥ ಪಾತ್ರವನ್ನು ವಹಿಸಿದ್ದಾರೆ. ಯಾವ ರೀತಿ ಎಂದರೆ, ಮೂಲಭೂತ ಸೌಕರ್ಯಗಳ ನಿರ್ಮಾಣದ ಉದ್ದೇಶಕ್ಕೂ ಮಿಗಿಲಾಗಿ, ಬೆಂಗಳೂರು ಸುತ್ತಮುತ್ತ ಇರುವ ಅತ್ಯಂತ ಬೆಲೆ ಬಾಳುವ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆ ನಡೆಸಲು ನೈಸ್ ಕಂಪನಿಗೆ ಅಂದಿನ ಮುಖ್ಯಮಂತ್ರಿಗಳು ಪರವಾನಗಿ ನೀಡಿದ್ದಾರೆ. ಅದು ಆಗಲೇ ದಾಖಲೆಯಲ್ಲಿದೆ. ಅದೇ ರೀತಿಯಲ್ಲಿ, ಕಾರ್ಯದರ್ಶಿಗಳು ಯಾವ ರೀತಿ ಮಾಡಿದ್ದಾರೆ ಎನ್ನುವುದನ್ನು ನಾನು ಹೇಳಿದ್ದೇನೆ. ಇವತ್ತು ಇಷ್ಟು ಜನರು ಸೇರಿ, ಸರ್ಕಾರಿ ಭೂಮಿ ಮತ್ತು ಖಾಸಗಿ ಭೂಮಿಯನ್ನು ಸಂಪೂರ್ಣವಾಗಿ ರಿಯಲ್ ಎಸ್ಟೇಟ್ ವ್ಯಾಪಾರ ಮಾಡತಕ್ಕಂಥ ಒಂದು ಖಾಸಗಿ ಕಂಪನಿಗೆ ಕೊಟ್ಟಿದ್ದಾರೆ. ಕೋರ್ಟಿನಲ್ಲಿ ಎರಡು ರಿಟ್ ಪಿಟೀಷನ್‌ಗಳಿವೆ. ಕೋರ್ಟ್‌ನಲ್ಲಿ ಹೇಳಿರತಕ್ಕಂಥದ್ದನ್ನು ಮಾನ್ಯ ಮಾಧುಸ್ವಾಮಿಯವರು ಈಗಾಗಲೇ ಹೇಳಿದ್ದಾರೆ. ಇವತ್ತು ಅವರು ಇದನ್ನು ಮೀರಿ ಕೂಡ ಮಾಡಿದ್ದಾರೆ ಎಂದರೆ ಕೋರ್ಟ್ ಆಜ್ಞೆಗಳನ್ನು ಕೂಡ ಇವರು ಧಿಕ್ಕರಿಸಿದ್ದಾರೆ ಎನ್ನುವುದನ್ನು ನಾವು ಬಹಳ ಸ್ಪಷ್ಟವಾಗಿ ಅರಿಯಬೇಕಾಗುತ್ತದೆ. ಕೋರ್ಟ್ ಆಜ್ಞೆಗಳನ್ನು ಧಿಕ್ಕರಿಸಿದ್ದಾರೆ ಎನ್ನುವುದು ಬಹಳ ಮುಖ್ಯವಾದಂಥ ಅಂಶ. ಕೋರ್ಟ್ ಆಜ್ಞೆಗಳನ್ನು ಉಲ್ಲಂಘಿಸತಕ್ಕಂಥಾದ್ದು ಅಷ್ಟೇ ಅಲ್ಲ, ಇವರೇ ಮಾಡಿದ ತಕ್ಕಂಥ ಹಲವಾರು ಕಾನೂನುಗಳನ್ನು ಇವರೇ ಉಲ್ಲಂಘನೆ ಮಾಡಿದ್ದಾರೆ.

ಇನ್ನು, ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ರಸ್ತೆ ಬಗ್ಗೆ ನೀವು ಏನೇನು ಡಾಕ್ಯುಮೆಂಟ್‌ಬೇಕೆಂದು ಹೇಳುತ್ತೀರೋ, ಅವುಗಳನ್ನೆಲ್ಲಾ ನಾವು ನಿಮಗೆ ಕೊಡಲು ತಯಾರಿದ್ದೇವೆ.

ಇನ್ನು ಕೆ.ಐ.ಎ.ಡಿ.ಬಿ.ಯ ವಿಚಾರ ಬಹಳ ಮುಖ್ಯವಾದಂಥಾದ್ದು. ಅದಕ್ಕೆ ಬರುತ್ತೇನೆ.

ಅಧ್ಯಕ್ಷರು : ಬೇಗ ಮುಗಿಸಿ. ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮುಗಿಸುತ್ತೇನೆ, ನೀವು ಅರ್ಜೆಂಟ್ ಮಾಡಿದರೆ ನಾನು ಕುಳಿತುಕೊಳ್ಳುತ್ತೇನೆ, ಏನು ಮಾಡುವುದಕ್ಕಾಗುತ್ತದೆ. ನಾಣು ಹೇಳಲಿಕ್ಕೆ ನೀವು ಬಿಡುವುದಿಲ್ಲ ಎಂದರೆ ಏನು ಮಾಡುವುದು? ಇದನ್ನು ರೂಲ್–69ರಲ್ಲಿ ಏಕೆ ತೆಗೆದುಕೊಳ್ಳಬೇಕು ಎಂದು ಸಬ್ಮಿಷನ್ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಮೊನ್ನೆ ನಿಮಗೆ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಅರ್ಕಾವತಿ ಲೇಔಟ್ ಬಗ್ಗೆ ಅವರು ಈಗಾಗಲೇ ಹೇಳಿದ್ದಾರೆ. ಬನಶಂಕರಿ 6ನೇ ಹಂತದ ಬಗ್ಗೆ ಮಾನ್ಯ ಅಶೋಕ್‌ರವರು ಹೇಳಿದ್ದಾರೆ. ನಾಣು ಈಗ ಕೆ.ಐ.ಎ.ಡಿ.ಬಿ.ಯವರು ತೆಗೆದುಕೊಳ್ಳುತ್ತಿದೇನೆ. ಬೆಂಗಳೂರು ನಗರದಸುತ್ತಮುತ್ತಲೂ ಔದ್ಯೋಗೀಕರಣ ಹೆಸರಿನಲ್ಲಿ ಕೆ.ಐ.ಎ.ಡಿ.ಬಿ. ಭೂಮಿಯನ್ನು ಅಕ್ವೈರ್ ಮಾಡಿಕೊಂಡು, ಯಾವ ರೀತಿಯಲ್ಲಿ ಈ ಭೂಮಿಯನ್ನು ದಂಧೆ ನಡೆಸಿದೆ ಎನ್ನತಕ್ಕಂಥಾದ್ದನ್ನು ನೋಡಿ. ಬೆಂಗಳೂರಿನ ಹೊರವಲಯದಲ್ಲಿ ಕೆ.ಐ.ಎ.ಡಿ.ಬಿ. ಸ್ಥಾಪಿಸುತ್ತಿರುವ ಕೈಗಾರಿಕಾ ಪ್ರದೇಶದಲ್ಲಿ ಸರ್ಕಾರದ ಕೋಟಿಗಟ್ಟಳೆ ಹಣ ವಿನಿಯೋಗಿಸಿ ಅಭಿವೃದ್ಧಿ ಪಡಿಸಿದ ನಂತರ, ಸದರಿ ಅಭಿವೃದ್ಧಿ ಕೆಲಸಗಳಿಂದ ಜಮೀನಿನ ಬೆಲೆ ಗಹನವಾಗಿ ಏರಿದ ಮೇಲೆ ಅವುಗಳನ್ನು ಡೀ–ನೋಟಿಫೈ ಮಾಡಿ, ರೀ–ಕನ್ವೇ ಮಾಡುವ ಮೂಲಕ ಮೂಲ ಮಾಲೀಕರಲ್ಲದವರಿಗೆ ಪರಭಾರೆ ಮಾಡುವುದು. ಇದು ಒಂದನೇ ಪಾಯಿಂಟ್. ಬೆಂಗಳೂರಿನ ಐ.ಟಿ. ಕಾರಿಡಾರ್ ಎಂದು ಪರಿಗಣಿಸುತ್ತಿರುವ, ಸರ್ಜಾಪುರ ರಸ್ತೆಯಿಂದ ಪ್ರಾರಂಭಗೊಂಡು ಬೆಳ್ಳಂದೂರು, ದೇವರಬೀಸನಹಳ್ಳಿ, ಕಾಡೇಬೀಸನಹಳ್ಳಿ ಗ್ರಾಮಗಳ ಜಮೀನುಗಳ ಮೂಲಕ ವೈಟ್ ಫೀಲ್ಡ್ ತಲುಪುವ ರಿಂಗ್ ರಸ್ತೆಯ ಅಕ್ಕಪಕ್ಕದಲ್ಲಿರುವ ನೀರಾವರಿ ಭೂಮಿಗಳನ್ನು, ಸುಳ್ಳು ಐ.ಟಿ. ಕಂಪನಿಗಳ ಪರವಾಗಿ ಭೂ ಸ್ವಾಧಿನಪಡಿಸಿಕೊಂಡು ಅವರಿಗೆ ಹಸ್ತಾಂತರಿಸಿರುವುದು. ಯಾವಯಾವ ಕಂಪನಿಗಳಿಗೆ ಕೊಟ್ಟಿದ್ದಾರೆ ಎನ್ನುವುದಕ್ಕೆ ನಾನು ದಾಖಲೆಗಳನ್ನೂ ಕೊಡುತ್ತೇನೆ. ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯನ್ನು, ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಎನ್ನುವ ಖಾಸಗಿ ಸಂಸ್ಥೆಯೊಂದು ಕಾರ್ಯಗತಗೊಳಿಸುತ್ತಿದ್ದು, ಸದರಿ ಸಂಸ್ಥೆಗೆ ಅಗತ್ಯ ಭೂಮಿಯನ್ನು ಒದಗಿಸುವ ಸರ್ಕಾರದ ಜವಾಬ್ದಾರಿಯನ್ನು ಉಪಯೋಗಿಸಿಕೊಂಡು, ಬೆಲೆ ಬಾಳುವ ಸರ್ಕಾರಿ ಗೋಮಾಳ, ಕುಂಟೆ, ಖರಾಬು ಜಮೀನುಗಳನ್ನು ಹಾಗೂ ರೈತರ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಂಡು ಸದರಿ ಸಂಸ್ಥೆಗೆ ನೀಡಿದ್ದು, ಅದರ ಮುಖಾಂತರ ನೂರಾರು ಕೋಟಿ ರೂಪಾಯಿಗಳನ್ನು ಮಾಡಲಾಗಿದೆ. ಇದು ಎರಡನೆಯದು. ಮೂರನೆಯದಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೂಸ್ವಾಧೀನ ಪಡಿಸಿಕೊಂಡ ಜಮೀನನ್ನು, ಬಿ.ಡಿ.ಎ. ಭೂಸ್ವಾಧೀನದಿಂದ ಹೊರತಂದು ಕೆ.ಐ.ಎ.ಡಿ.ಬಿ. ಮೂಲಕ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಲಾಗಿದೆ. ಇದನ್ನು ಪ್ರೈಮಾಫೆಸಿಯಾಗಿ ಹೇಳುತ್ತಿರತಕ್ಕಂಥಾದ್ದು. ಇದೆಲ್ಲದಕ್ಕೂ ನಾನು ದಾಖಲೆ ಕೊಡುತ್ತೇನೆ. ಕೆ.ಐ.ಎ.ಡಿ.ಬಿ.ಯು ಬೆಂಗಳೂರಿನ ವೈಟ್‌ಫೀಲ್ಡ್ ಬಳಿ ಕುಂದಲಹಳ್ಳಿ, ಸೊಣ್ಣೇನಹಳ್ಳಿ, ಹೂಡಿ ಗ್ರಾಮಗಳಲ್ಲಿ ಸುಮಾರು 600 ಎಕರೆ ಪ್ರದೇಶಗಳಲ್ಲಿ, 1994ರಿಂದ ಪ್ರಾರಂಭಗೊಂಡು ಎಕ್ಸ್‌ಪೋರ್ಟ್ ಪ್ರಮೋಷನ್ ಇಂಡಸ್ಟ್ರಿಯಲ್ ಪಾರ್ಕ್ ಅನ್ನು ಸ್ಥಾಪಿಸುವುದು ಇತ್ತು. ಈ ಕೈಗಾರಿಕಾ ಪ್ರದೇಶವು ಹಳೆಯ ದೊಡ್ಡಾನೆಕ್ಕುಂದಿ ಮತ್ತು ಸಾದರಮಂಗಲ ಕೈಗಾರಿಕಾ

ಪ್ರದೇಶಗಳಿಗೆ ಲಗತ್ತಾಗಿದ್ದು ಅಲ್ಲದೇ ಅದು ವಿಮಾನ ನಿಲ್ದಾಣಕ್ಕೂ ಬಹಳ ಸನಿಹದಲ್ಲಿರುತ್ತದೆ. ಕೆ.ಐ.ಎ.ಡಿ.ಬಿ ಸದರಿ ಪ್ರದೇಶದಲ್ಲಿ ಕಡ್ಡಾಯವಾಗಿ ರಫ್ತು ಮಾಡುವ ಉದ್ಯಮಗಳಿಗೆ ಎಕರೆ ಒಂದಕ್ಕೆ 40 ಲಕ್ಷದಂತೆ ಹಾಗೂ ಇತ್ತೀಚೆಗೆ ಎಕರೆ ಒಂದಕ್ಕೆ 60 ಲಕ್ಷದಂತೆ, ಅಭಿವೃದ್ಧಿ ಪಡಿಸಿದ ಕೈಗಾರಿಕಾ ನಿವೇಶನಗಳನ್ನು ಮಂಜೂರು ಮಾಡಿರುತ್ತದೆ. ಕೆ.ಐ.ಎ.ಡಿ.ಬಿ. ಇಷ್ಟಲ್ಲಾ ಖರ್ಚುಮಾಡಿ ಅಭಿವೃದ್ಧಿ ಮಾಡಿದಂಥ ಭೂಮಿಯನ್ನು ಏನು ಮಾಡಲಾಗಿದೆ ಎನ್ನುವುದನ್ನು ಹೇಳುತ್ತೇನೆ. ಅಭಿವೃದ್ಧಿಪಡಿಸಿದ ಈ ಭೂಮಿಯ ಮಾರುಕಟ್ಟೆ ಬೆಲೆ ಈಗ ಒಂದು ಎಕರೆಗೆ ಎರಡು ಕೋಟಿ ರೂ ಗೂ ಮೀರಿರುತ್ತದೆ. ಈ ಕೈಗಾರಿಕಾ ಪ್ರದೇಶವನ್ನು ಕಡ್ಡಾಯವಾಗಿ, ರಫ್ತು ಮಾಡತಕ್ಕಂಥ ಕಂಪನಿಗಳಿಗೆ ಮಾತ್ರ ಕೊಡಬೇಕು ಎಂದು ಇತ್ತು. ಆದರೆ ಇವತ್ತು ಅದನ್ನು ನಿವೇಶನಗಳನ್ನಾಗಿ ಮಾಡಿ ಎಕರೆಗೆ ಎರಡೂವರೆ ಕೋಟಿ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಎಕ್ಸ್‌ಪೋರ್ಟ್ ಕಂಪನಿಗಳಿಗೆ ಕೊಡಬೇಕು ಎಂದು ಆ ಜಮೀನನ್ನು ಕಡಿಮೆ ದರಕ್ಕೆ ಕೊಟ್ಟುಬಿಟ್ಟಿದ್ದು, ಇವತ್ತು ಅದರ ಒರಿಜಿನಲ್ ರೇಟ್ ಒಂದು ಎಕರೆಗೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳಾಗಿದೆ. ಅವರಿಗೆ 40 ಲಕ್ಷ 60 ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಇವತ್ತು ಅದರ ರಿಯಲ್ ಮಾರ್ಕೆಟ್ ಕಾಸ್ಟ್ ಎರಡರಿಂದ ಎರಡೂವರೆ ಕೋಟಿ ರೂಪಾಯಿಗಳು. ಇದನ್ನು ಮಾಡಿದ ಉದ್ದೇಶವೇನಿತ್ತು ಎಂದರೆ, ಎಕ್ಸ್‌ಪೋರ್ಟ್ ಕಂಪನಿಗಳಿಗೆ ಮಾತ್ರ ಕೊಡಬೇಕು ಎನ್ನುವುದಾಗಿತ್ತು. ಅದಕ್ಕೋಸ್ಕರವೇ ಆ ಜಮೀನನ್ನು ಅಭಿವೃದ್ಧಿ ಮಾಡಿದ್ದು. ಇದು ವಿಮಾನ ನಿಲ್ದಾಣದ ಪಕ್ಕದಲ್ಲೇ ಇದೆ. ಆದರೆ ಇವತ್ತು ನಿಜವಾಗಿಯೂ ಇದರ ಬೆಲೆ ಎರಡರಿಂದ ಎರಡೂವರೆ ಕೋಟಿ ರೂಪಾಯಿಗಳು. ಹೋಗಲಿ, ಅದನ್ನಾದರೂ ಸರಿಯಾಗಿ ಕೊಟ್ಟಿದ್ದಾರೆಯೇ? ಎಕ್ಸ್‌ಪೋರ್ಟ್ ಮಾಡತಕ್ಕಂಥ ಕಂಪನಿಗಳೇನಾದರೂ ಅಲ್ಲಿ ಬಂದಿವೆಯೇ ಎಂದರೆ ಅವುಗಳೂ ಬಂದಿಲ್ಲ. ಯಾರ ಹಣ ಎಲ್ಲಿ ಹೋಯಿತು? ಆ ಕಂಪನಿಗಳೇ ಬಂದಿಲ್ಲ. ಆದರೆ ಹಿಂದಿನ ಸರ್ಕಾರ ಏನು ಮಾಡಿತು ಎಂದರೆ "139 ಎಕರೆ ಜಮೀನಿಗೆ ಸಂಬಂಧಿಸಿದ ಸದರಿ ಜಮೀನನ್ನು ಅಭಿವೃದ್ಧಿ ಪಡಿಸಿದ ಪ್ರದೇಶ ನಡುವೆ ಹಾಗೂ ಲಗತ್ತಾಗಿದ್ದರೂ ಸಹ ಅಂತಿಮ ಭೂಸ್ವಾಧೀನ ಪ್ರಕಟಣೆ ಹೊರಡಿಸಿದ 4–5 ವರ್ಷ ತಳ್ಳಿಕೊಂಡು

ಬಂದು ಚುನಾವಣೆ ಮೊದಲು ಅಂದರೆ 12–02–2004ರಂದು ಇದನ್ನು de-notify ಮಾಡಿರುತ್ತಾರೆ." ನೋಡಿ, ಎಂಥ ವಿಚಿತ್ರ ಇದು. ಇದನ್ನು ಮತ್ತೆ de-notify ಮಾಡುತ್ತಾರೆ. ರೂಪಾಯಿ 60ಲಕ್ಷ 40 ಲಕ್ಷಕ್ಕೆ ಮಾರಾಟ ಮಾಡಿ ಅದನ್ನು ಅಭಿವೃದ್ಧಿ ಮಾಡಿ ಮತ್ತೆ 12–02–04ರಂದು ಮಾಡುತ್ತಾರೆ. de-notify ಅಷ್ಟೊತ್ತಿಗೆ ಚುನಾವಣೆ ಹತ್ತಿರ ಬಂದಿತ್ತು.

ಶ್ರೀ ಗೋವಿಂದ ಮಕುಟಪ್ಪ ಕಾರಜೋಳ : ಮಾನ್ಯ ಅಧ್ಯಕ್ಷರೆ, ಸರ್ಕಾರ acquisition ಮಾಡಿ ಅಲ್ಲಿ ಹಣ ಖರ್ಚು ಮಾಡಿ ಅಭಿವೃದ್ಧಿ ಹಣ ಖರ್ಚು ಮಾಡಿ ಪುನಃ de-notify ಮಾಡಿದ್ದಾರೆಯೇ? ಮಾಡಿದ್ದಾರೆ ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾಡಿದ್ದಾರೆ Gazette notification ಇಲ್ಲಿ ನನ್ನ ಹತ್ತಿರ ಇದೆ.

ಶ್ರೀ ಗೋವಿಂದ ಮಕುಟಪ್ಪ ಕಾರಜೋಳ : ಆದರೂ acquisition ಮಾಡಿರಬಹುದು Acquisition ಮಾಡಿ ಅದರ ಮೇಲೆ ಹಣ ಖರ್ಚು ಮಾಡಿ ನಂತರ de-notification ಮಾಡಿದ್ದಾರೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು. ಅದನ್ನೇ ನಾನು ಇಲ್ಲಿ ಹೇಳುತ್ತಿರುವುದು. ಇಲ್ಲಿ ಅದೇ ದಂಧೆ ನಡೆದಿರತಕ್ಕಂಥದ್ದು. De-notify ಮಾಡಿದೆ, ಇದರಿಂದ ಏನಾಯಿತು? ಯಾವ ಉದ್ದೇಶಕ್ಕಾಗಿ export ಮಾಡತಕ್ಕಂಥ ಕಂಪನಿಗಳಿಗೆ ಜಮೀನನ್ನು ನೀವು acquire ಮಾಡಿಕೊಂಡಿದ್ದರೂ ಆ purpose serve ಆಗದೆ ಇದರಿಂದ ಸುಮಾರು ರೂಪಾಯಿ 260 ಕೋಟಿ ರೂ KAIDB ಗೆ ನಷ್ಟವಾಗಿದೆ. ಅಲ್ಲಿಗೆ ಈ ದಂಧೆ ನಿಲ್ಲಲಿಲ್ಲ. ಸುಮಾರು 15 ಎಕರೆ ಕೈಗಾರಿಕಾ ಪ್ರದೇಶವನ್ನು ಮತ್ತೆ ಗೋಪಾಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ನವರಿಗೆ ಕಟ್ಟಡ ನಿರ್ಮಾಣಕ್ಕೆ ಕೊಟ್ಟುಬಿಟ್ಟರು. ಇದನ್ನು ಎಷ್ಟು ಬೆಲೆಗೆ ಕೊಟ್ಟರೆಂದರೆ ಎರಡೂವರೆ ಕೋಟಿ ರೂಪಾಯಿಗೆ ಮಾರಾಟವಾಗತಕ್ಕಂಥ ಭೂಮಿಯನ್ನು ಕೇವಲ ರೂಪಾಯಿ 5.3 ಲಕ್ಷಕ್ಕೆ ಕೊಟ್ಟರು. ಈ ಭೂಮಿ ವಿಮಾನ ನಿಲ್ದಾಣ ಪಕ್ಕದಲ್ಲಿದ್ದು ಇದರ ಮಾರ್ಕೆಟ್ ರೇಟ್ ಇವತ್ತು ಎರಡೂವರೆ ಕೋಟಿ ರೂಪಾಯಿ ಇದೆ. ಅದರಲ್ಲಿ ಇರತಕ್ಕಂಥ ಟೋಟಲ್ ಜಮೀನು 139 ಎಕರೆ. Notification ನಲ್ಲಿ ಇರುವ ಹಾಗೆ ರೈತರಿಗೆ ಒಂದು ಎಕರೆಗೆ ರೂಪಾಯಿ 1.5 ಲಕ್ಷ, 2 ಲಕ್ಷ ದಂತೆ ಕೊಟ್ಟಿದ್ದಾರೆ. Export ಕಂಪನಿಗಳಿಗೆ ಬೇಕು ಎಂದು KAIDB ಲ್ಯಾಂಡ್ ಅನ್ನು Only purely for the export companies. ಅನ್ನು ಪ್ರಾರಂಭ ಮಾಡಲಿಕ್ಕೆ ಎಂದು ಡೆವೆಲಪ್ ಮಾಡಿದರು. ಅದನ್ನು ಇವತ್ತು construction companies ಗೆ builders ಗೆ ಕೊಟ್ಟುಬಿಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನನಗೆ ಸರ್ಕಾರದಿಂದ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ಗೋಪಾಲ್ ಎಂಟರ್‌ಪ್ರೈಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಎಂದು ಕೊಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲ. ಅದೊಂದು construction company. It is not a software company. That is a construction company. ಅಲ್ಲಿ ಬಿಡ್ ಮಾಡಿದರೆ ಮಾರ್ಕೆಟ್ ರೇಟ್ ಎಷ್ಟು ಬರುತ್ತದೆ? ಅದು ಅಷ್ಟಕ್ಕೆ ನಿಲ್ಲಲಿಲ್ಲ. ಒಂದು ವೇಳೆ for example hypothetically putting ಈ ಗೋಪಾಲ್ ಎಂಟರ್‌ಪ್ರೈಸಸ್ ಐ.ಟಿ. ಕಂಪನಿ ಎಂದರೂ ಕೂಡ ಆ ಸಮಯದಲ್ಲಿದ್ದಂಥ ರೂಪಾಯಿ 60 ಲಕ್ಷದ ದರ ಅದನ್ನೇ ಲೆಕ್ಕ ಮಾಡಿದರೂ ಕೂಡ KAIDB ಗೆ ಸುಮಾರೂ ರೂಪಾಯಿ ಕೋಟಿಗಿಂತ ಹೆಚ್ಚು ನಷ್ಟವಾಗುತ್ತದೆ. ಇದೇ export company "ಕುಂದರಹಳ್ಳಿ ಗ್ರಾಮ ಸರ್ವೆ ನಂ.80ರಲ್ಲಿ 26 ಎಕರೆ ಜಮೀನನ್ನೂ ಇಲ್ಲಿ ಉದ್ಯಮವೊಂದನ್ನು ವಿವಿಧ ದೇಶದ ಕಂಪನಿಗಳ ಮುಖ್ಯಸ್ಥರಗಳು, VVIP ಬರಲು ಸಾಧ್ಯವಾಗುವಂತೆ ಹೆಲಿಪ್ಯಾಡ್‌ಗಳನ್ನು ಕಾದಿರಿಸಲಾಗಿರುತ್ತದೆ." ಆದರೆ ಆ ಜಮೀನನ್ನು ಕೂಡ ಏನು ಮಾಡಿದರೆಂದರೆ, "ಸರ್ಕಾರವು ನೇರವಾಗಿ ಸನ್‌ರೈಸ್ ಇಂಡಸ್ಟ್ರೀಸ್ ಎನ್ನತಕ್ಕಂಥ ಒಂದು ಮುಖವಾಡ ಸಂಸ್ಥೆಗೆ ಆ ಭೂಮಿಯನ್ನೂ ಕೂಡ ಮಂಜೂರು ಮಾಡಿರುತ್ತಾರೆ." ವಿದೇಶಿ ವಿ.ವಿ.ಐ.ಪಿ.ಗಳ ಹೆಲಿಪ್ಯಾಡ್‌ಗೋಸ್ಕರ ಕಾಯ್ದಿರಿಸಿದ್ದೇವೆಂದು ಹೇಳಿದ 26 ಎಕರೆ ಜಮೀನನ್ನು ಸನ್‌ರೈಸ್ ಇಂಡಸ್ಟ್ರೀಸ್ ಎಂದು ಹೇಳತಕ್ಕಂಥ ಅದು fake company, acqually ಆಗಿ ಆ ಕಂಪನಿಗೆ ಯಾವ ದಾಖಲೆಯೂ ಇಲ್ಲ. ಆ fake company ಗೆ ಇವರು ಆ ಜಮೀನನ್ನು ಕೊಡುತ್ತಾರೆ. Sunrise Industries, it is a fake company. ಅದಕ್ಕೆ ಕೊಡುತ್ತಾರೆ. ಇನ್ನೊಂದು, ಸರ್ಜಾಪುರ ರಸ್ತೆಯಲ್ಲಿ ವೈಲ್ಡ್‌ಫೀಲ್ಡ್‌ಗೆ ಹೋಗುವ ದಾರಿಯಲ್ಲಿ, "ರಸ್ತೆಯ ಎರಡು ಬದಿಗಳಲ್ಲಿ ದೇವರ ಬೀಸನ ಹಳ್ಳಿ ಮತ್ತು ಬೆಳ್ಳಂದೂರು ಗ್ರಾಮಗಳಲ್ಲಿ ಕೃಷಿ ಭೂಮಿಯನ್ನು ಯಾವ ರೀತಿ ಇವರು ಇಂಡಸ್ಟ್ರಿಗೋಸ್ಕರ ಅಕ್ವೈರ್ ಮಾಡುತ್ತಾರೆ

ಎನ್ನುವುದನ್ನು ನೋಡಬಹುದು. ಕೃಷಿ ಭೂಮಿಯನ್ನು industry ಗೋಸ್ಕರ acquire ಮಾಡಬಾರದು. ಆ150 ಎಕರೆ ಕೃಷಿ ಭೂಮಿಯನ್ನು ಇವರು acquire ಮಾಡಿ ಪ್ರಕಟಣೆಯ ಅಂತಿಮ ಘಟ್ಟದಲ್ಲಿ ಇದನ್ನು ರೆಡಿ ಮಾಡಿಕೊಂಡಿದ್ದಾರೆ. "ಈ ಪ್ರದೇಶಗಳಲ್ಲಿ ಕೆಲವು ನಿಜವಾದ ಐ.ಟಿ. ಕಂಪನಿಗಳೂ ಸಹ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಬಾರದು, ಆದರೆ ಅಂಥ ಕಂಪನಿಗಳ ಬೇಡಿಕೆ ಕೇವಲ 20 ಎಕರೆ ಮಾತ್ರ. ಆದರೆ ಇವರು ಕೊಡತಕ್ಕಂಥದ್ದು ಎಷ್ಟೆಂದರೆ, 100 ಎಕರೆ, 150 ಎಕರೆ, 200 ಎಕರೆ ಕೊಡುತ್ತಿದಾರೆ. For example ನಾನು ಮೊನ್ನೆ ಹೇಳಿದೆ, ಈಟಾ ಮಣಿಪಾಲ್ ಟೆಕ್ನಾಲಜಿ ಪಾರ್ಕ್ ಎಂದು ಹೇಳತಕ್ಕಂಥ ಕಂಪನಿಗೆ Actually, they need only 5 Acres. But, they have given 75 Acres. Eta Manipal Technology Park, actually ಅದು I.T.Company ಅಲ್ಲ. ಇವತ್ತು ವಾಸ್ತವ ಏನು ಎನ್ನುವುದನ್ನು ಹೇಳುವುದಾದರೆ to be frank, ನಿಮ್ಮ ಗಮನಕ್ಕೆ ತರುವುದಾದರೆ ಅವರು ಐ.ಟಿ.ಪಾರ್ಕ್‌ನ್ನು ಮಾಡಿಲ್ಲ. ಆ ಭೂಮಿಯನ್ನು ಬೇರೆಯವರಿಗೆ transfer ಮಾಡಿದ್ದಾರೆ. ಬೇರೆಯವರು ಅದನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಆ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿರತಕ್ಕಂಥದ್ದು ಕೂಡ ಚುನಾವಣೆ ಮುಗಿದ ಮೇಲೆ. Care-taker Government was there. Care-taker Government ಇದ್ದಾಗ ಈ ಸ್ವಾಧೀನ ಮಾಡಿಕೊಳ್ಳತಕ್ಕಂಥ ಅಧಿಕಾರ ಇದಕ್ಕೆ ಇದೆಯೇ ಎನ್ನತಕ್ಕಂಥದ್ದು ಇನ್ನೊಂದು ಬಹಳ ಮುಖ್ಯವಾದ ಪ್ರಶ್ನೆಯಾಗುತ್ತದೆ. ಇದರಲ್ಲಿಯೇ ಸುಮಾರು ರೂಪಾಯಿ 260 ಕೋಟಿ ಏನು ಆದಾಯ ಬರಬೇಕಾಗಿತ್ತೋ ಅದು ಇವತ್ತು KAIDB ಗೆ ನಷ್ಟವಾಗಿದೆ. ಇನ್ನು ಬಿ.ಡಿ.ಎ. ಬಗ್ಗೆ ಹೇಳುವುದಾದರೆ, "ಕೋರಮಂಗಲ ಬಡಾವಣೆ ನಂತರ ಬರುವ ಜಕ್ಕಸಂದ್ರ ಬಡಾವಣೆಗೆ 110 ಎಕರೆ ಪ್ರದೇಶವನ್ನು 1992ನೇ ಇಸವಿಯಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿ ಅನಂತರ 1996ರಲ್ಲಿ ಅಂತಿಮ ಪ್ರಕಟಣೆ ಹೊರಡಿಸಿ ಇದನ್ನು ಬಿ.ಡಿ.ಎ ಸ್ವಾಧೀನ ಪಡಿಸಿಕೊಂಡಿತ್ತು. ಇದು ಕೋರಮಂಗಲ ಮತ್ತು ಹೆಚ್.ಎಸ್.ಆರ್. ಬಡಾವಣೆ ಮಧ್ಯದಲ್ಲಿರುವ ಅಗರಾಗ್ರಾಮದ ಪ್ರದೇಶ. ಈ ದಿನ ಅಲ್ಲಿ ಎಕರೆಗೆ ರೂಪಾಯಿ 2 ಕೋಟಿಗೂ ಮೀರಿ ಜಮೀನು ಬೆಲೆ ಏರಿರುತ್ತದೆ. ಅಂದರೆ 110 ಎಕರೆ ಜಮೀನಿನ ಮಾರುಕಟ್ಟೆ ಬೆಲೆ ಕನಿಷ್ಟ ರೂಪಾಯಿ 200 ಕೋಟಿ ಆಗುತ್ತದೆ. ಅಂಥ ಬೆಲೆ ಬಾಳುವ ಜಮೀನನ್ನು ಸರ್ಕಾರವು ಇತ್ತೀಚೆಗೆ de-notify ಮಾಡಿ Manipal I.T.Info.Tech. Private Ltd., ಪರವಾಗಿ 75 ಎಕರೆ, ಅದನ್ನೇ ನಾನು ಆಗ ಹೇಳಿರವಂಥದ್ದು. B.D.A. acquire ಮಾಡಿ de-notify ಮಾಡಿ ಕೊಟ್ಟಿರತಕ್ಕಂಥದ್ದು. ಆದರೆ ಆ ಕಂಪನಿಗೆ ನಿಜವಾಗಿ 5 ಎಕರೆಗಿಂತ ಹೆಚ್ಚು ಜಮೀನು ಬೇಕಾಗಿಲ್ಲ. ಇದೇ ರೀತಿಯಲ್ಲಿ ಕೃಷ್ಣರಾಜಪುರದ ಹತ್ತಿರ 146 ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಆ ಜಮೀನು National Highway ಗೆ adjacent ಆಗುತ್ತದೆ. ಇದನ್ನು ಕೂಡ ಬಿ.ಡಿ.ಎ. 1997ರಲ್ಲಿ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಪಡಿಸಿದಂಥ ಭೂಮಿ ಇದಾಗಿದೆ. ಅಂದರೆ KAIDB ಮುಖಾಂತರ ಸ್ವಾಧೀನ ಮಾಡಿಕೊಳ್ಳುವುದು, ಅದನ್ನು ಮತ್ತೆ ಖಾಸಗಿ ಕಂಪನಿಯವರಿಗೆ ಬೇಕು ಬೇಕಾದವರಿಗೆಲ್ಲಾ ಮಾರಾಟ ಮಾಡಿಕೊಂಡು ಸಾವಿರಾರು ಕೋಟಿ ರೂಪಾಯಿಗಳ ದಂಧೆ ಮಾಡಿರತಕ್ಕಂಥದ್ದನ್ನು ಇವತ್ತು ನಾವು ನೋಡುತ್ತಿದ್ದೇವೆ. ಈ ನಾನು ಏನೇನು ಹೇಳಿದೆ ಅದನ್ನೆಲ್ಲ ತಮಗೆ ಕಳುಹಿಸಿಕೊಡುತ್ತೇನೆ. ಅದು ಕರ್ನಾಟಕ ರಾಜ್ಯಪತ್ರ, ಇನ್ನೊಂದು ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ 2003ನೇ ಇಸವಿಯ ವಿಶೇಷ ರಾಜ್ಯ ಪತ್ರ, ವಿಕಾಸ್ ಟೆಲಿಕಾಂಗೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ 23–10–2003ರಂದು ಹೊರಡಿಸಿದ ನೋಟಿಫಿಕೇಷನ್,

ನಾನು ಆಗಲೇ ಹೇಳದಂತೆ ಈಟಾ ಮಣಿಪಾಲ್ ಟೆಕ್ನಾಲಜಿ ಪಾರ್ಕ್‌ಗೆ ಬೇಕಾದ ಜಮೀನಿನ ಸ್ವಾಧೀನ 24–04–2004, ಅದೇ ರೀತಿಯಲ್ಲಿ 28–02–2004ರ ನೋಟಿಫಿಕೇಷನ್, ಇಷ್ಟು ಜನರ ಭೂಮಿಯನ್ನು KAIDB ಮುಖಾಂತರ ಕಬಳಿಸಿರತಕ್ಕಂಥ ದಂಧೆ ಏನು ನಡೆಯುತ್ತಿದೆ ಎನ್ನತಕ್ಕಂಥದ್ದನ್ನು ಇವತ್ತು ನೀವು ನೋಡಬೇಕು. ಮಂಗಳವಾರ ಫೆಬ್ರವರಿ 17, 2004ರಂದು Urban Development Secretariat ಒಂದು ನೋಟಿಫಿಕೇಷನ್ ಅನ್ನು ಹೊರಡಿಸುತ್ತದೆ.

ಅಧ್ಯಕ್ಷರು : ಮಾನ್ಯ ರೆಡ್ಡಿಯವರು ಬೇಗ ಮುಗಿಸಿ. ಇನ್ನು ಬಹಳಷ್ಟು ಜನ ಇದರಲ್ಲಿ participate ಮಾಡುವವರು ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ.

5.50 ಪಿಎಂ

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ಇವತ್ತೇ ಮುಗಿಸಬೇಕು. ನಾಳೆ ಬೆಳಿಗ್ಗೆ ಆಗುವುದಿಲ್ಲ. Anybody who wants to participate in the discussion has to participate to-day only. ನಾಳೆ ಸಾಧ್ಯವಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಡೀ–ನೋಟಿಫೈ ಮಾಡುವ ದಂಧೆ ಇದು.

ಅಧ್ಯಕ್ಷರು : ಆ ಬಗ್ಗೆ ಹೇಳಿದ್ದಾರೆ. ಅವರು ಬಿಟ್ಟಿರುವುದನ್ನು ಹೇಳಿ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಡೀ–ನೋಟಿಫೈ ಮಾಡುವ ದಂಧೆ ಹೇಗೆ ನಡೆದಿದೆ ಎಂದು ಹೇಳುತ್ತೇನೆ. ಉದಾಹರಣೆ ಬನಶಂಕರಿ 6ನೇ ಸ್ಟೇಜ್‌ನಲ್ಲಿ ಅವರು ಮೊದಲಿಗೆ ನೋಟಿಫೈ ಮಾಡಿರುವುದು ಭೂಮಿ ಎಷ್ಟಿದೆ ಗೆಜೆಟ್ ನೋಟಿಫಿಕೇಷನ್‌ನಲ್ಲಿ ಎಂದರೆ, 1532 ಎಕರೆ 17 ಗುಂಟೆ ಇದೆ. ಇದನ್ನು ಪಬ್ಲಿಷ್ ಮಾಡಿದ್ದಾರೆ. ಆದರೆ, ಫೈನಲ್ ನೋಟಿಫಿಕೇಷನ್ ತರುವಾಗ 750ಎಕರೆ ಇದೆ. ಇದರ ಹಿಂದಿರುವ ಗುಟ್ಟು ಏನು? ಯಾವ ರೀತಿ ಇದು ಗುಟ್ಟು ಎಂದು ಹೇಳಿದರೆ, ನೋಟಿಫಿಕೇಷನ್ ಮಾಡಿಬಿಡುವುದು, ಬೇಕು ಬೇಕಾದವರಿಗೆ ಅದನ್ನು ವಾಪಸ್ಸು ಕೊಟ್ಟುಬಿಡುವುದು ಎಂದು ಹೇಳಿ ಸುಲಭವಾಗಿ ಹೇಳುತ್ತಾರೆ. ಯಾರು ಬಂದು ಕೇಳಿಕೊಂಡರು, ಅರ್ಜಿ ಕೊಟ್ಟರು, ಅವರಿಗೆ ನಾನು ಬಿಡುಗಡೆ ಮಾಡಬೇಕಾಗಿತ್ತು, ಅದಕ್ಕೋಸ್ಕರ ನಾನು ಕೈಬಿಡಬೇಕಾಗಿತ್ತು. ಎಂದು ಹೇಳುತ್ತಾರೆ. ಅಕ್ಚುವಲಿ ಅದಲ್ಲ ವಾಸ್ತವಾಂಶ. ಮೊದಲು ನೋಟಿಫೈ ಮಾಡಿಬಿಡುತ್ತಾರೆ. ಬಿಡಿಎ ರೂಲ್ಸ್ ಪ್ರಕಾರ, ನೋಟಿಫೈ ಮಾಡಬೇಕಾದರೆ ಸೆಕ್ಷನ್ 15 ರಿಂದ 19ರವರೆಗೆ ಬಿಡಿಎ ಅಕ್ವಿಜಿಷನ್ ಅಕ್ಟ್ ಏನು ಹೇಳುತ್ತದೆಂದರೆ, ಮೊದಲು ನೋಟಿಫೈ ಮಾಡುವ ಸಂದರ್ಭದಲ್ಲಿ ಅಲ್ಲಿ ಆ ಏರಿಯಾದಲ್ಲಿ ಯಾವುದೇ ಡೆವಲಪ್‌ಮೆಂಟ್ ಆಗಿರಬಾರದು. ಮನೆ ಕಟ್ಟಿರಬಾರದು, ಯಾವುದೇ ಡೆವಲಪ್‌ಮೆಂಟ್ ಅಲ್ಲಿ ನಡೆದಿರಬಾರದು. ಅಂಥ ಭೂಮಿಯನ್ನು ಅಕ್ವಾಯರ್ ಮಾಡಿರುವುದು. ಈ ಬಿಡಿಎ ಇರುವುದು ದೊಡ್ಡ ದೊಡ್ಡ ಬಿಲ್ಡಿಂಗ್‌ಗಳು, ಮನೆಗಳಿರುವುದನ್ನೆಲ್ಲಾ ನೋಟಿಫೈ ಮಾಡುವುದು. ಆಮೇಲೆ ಅದನ್ನು ಫೈನಲ್ ನೋಟಿಫಿಕೇಷನ್‌ನಲ್ಲಿ ಕೈಬಿಡತಕ್ಕಂಥದ್ದು.

ಅಧ್ಯಕ್ಷರು : ಮಾನ್ಯ ರೆಡ್ಡಿಯವರೆ, ಎಲ್ಲವನ್ನೂ ಹೇಳಿದ್ದಾರಲ್ಲಾ. ಹೇಳದೇ ಇರುವುದನ್ನು ಹೇಳಿ. ಇನ್ನೂ ಕೆಲವರು ಮಾತನಾಡಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಹೇಳಿದ್ದು, ಬಿಎಂಐಸಿ ಬಗ್ಗೆ. ಇಲ್ಲಿ ಕೇಳಿ ದಯವಿಟ್ಟು. ಶ್ರೀನಿವಾಸ ಗೌಡ್ರೆ, ನೀವು ಸರಿಯಾಗಿ ಕೇಳಿಸಿಕೊಳ್ಳಿ. ನಾನು ಹೇಳುತ್ತಿರುವುದು ಕೆಐಎಡಿಬಿ ಮತ್ತು ಬಿಡಿಎ.........

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ನಾವು ಸರಿಯಾಗಿ ಅದನ್ನು ಕೇಳಿಸಿ ಕೊಂಡೆ ಹೇಳುತ್ತಿರುವುದು. ಎಲ್ಲೆಲ್ಲಿ ಬಿಲ್ಡಿಂಗ್ಸ್ ಇವೆ, ಏನು ಮಾಡಿದ್ದಾರೆ ಎಂದು ಅವರು ಹೇಳಿದ್ದು, ಮತ್ತೆ ನೀವು ರಿಪೀಟ್ ಮಾಡುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ಕೇಳಿ ದಯವಿಟ್ಟು, ನೀವು ಒಂದು ಕಡೆ ಕಳ್ಳತನ ಮಾಡಿದ್ದರೆ ಒಂದೇ ಕಡೆ ಎಲ್ಲರೂ ಹೇಳುತ್ತಾರೆಂದು ಹೇಳಬಹುದು. ಇದು ಮೂರು ಕಡೆ ಕಳ್ಳತನವಾಗಿರುವುದು. ಅದನ್ನು ಹೇಳುತ್ತಿರುವುದು.

ಅಧ್ಯಕ್ಷರು : ಮಾನ್ಯ ರೆಡ್ಡಿಯವರು, ದಯಮಾಡಿ ಮುಗಿಸಿ. you have taken one hour.

ಶ್ರೀ ಅರಗಜ್ಞಾನೇಂದ್ರ : ನೀವು ಇಷ್ಟು ಮಾಡಿ, ಆಗಸ್ಟ್ 15ನೇ ತಾರೀಖು ಬರುತ್ತಿದೆ. ನಾವು ಏನೂ ಮಾತನಾಡುವುದಿಲ್ಲಾ. ಈ ಆಲಿಬಾಬಾನ ಹೆಸರಿನಲ್ಲೊಂದು ಪ್ರಶಸ್ತಿ, ವೀರಪ್ಪನ್ ಹೆಸರಿನಲ್ಲೊಂದು ಪ್ರಶಸ್ತಿ ಕ್ರಿಯೇಟ್ ಮಾಡಿ, ಸೂಕ್ತ ವೇದಿಕೆ ಮಾಡಿ, ಅದರಲ್ಲಿ ಮಿಕ್ಸ್ ಆದಂಥ ರಾಜಕಾರಣಿಗಳನ್ನು, ಅಧಿಕಾರಿಗಳನ್ನು ಸೂಕ್ತ ವೇದಿಕೆಯಲ್ಲಿ ಸನ್ಮಾನ ಮಾಡಿಬಿಡಿ. ಅದನ್ನಾದರೂ ಸರ್ಕಾರ ಅಜ್ಞೆ ಎಂದು ಕೊಡಿ, ನಾವೇನೂ ಮಾತನಾಡುವುದಿಲ್ಲ. ರಾಜಕಾರಣಿಗಳು ನಮಗೇನಾದರೂ ಮರ್ಯಾದೆ ಇದೆಯೇ? ಹೊರಗಡೆ ಜನರು ಏನೆಂದುಕೊಳ್ಳುತ್ತಾರೆ? ಇಲ್ಲಿ ಚರ್ಚೆಯೇ ಬೇಡ, ಏನೂ ಹೇಳಬೇಡಿ ಎಂದು ಹೇಳುತ್ತೀರಿ.

ಅಧ್ಯಕ್ಷರು : ರಿಪೀಟ್ ಮಾಡುತ್ತಿದ್ದಾರೆಂದು ಅವರು ಹೇಳಿದರು. ಈಗ ಬೇರೆಯವರೂ ಸಹ ಮಾತನಾಡಲಿ. ಮಾನ್ಯ ರೆಡ್ಡಿಯವರೇ ಇನ್ನೈದು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಬಗ್ಗೆ ಅವರು ಹೇಳಿದ್ದು. ನಾನು ಮಾತನಾಡುತ್ತಿರತಕ್ಕಂಥದ್ದು ಕೆಐಎಡಿಬಿ ಮತ್ತು ಬಿಡಿಎ ಬಗ್ಗೆ. ಅವೆರಡೂ ಒಂದಲ್ಲ. ಅದರಲ್ಲೂ, ಇದರಲ್ಲೂ ನೋಟಿಫಿಕೇಷನ್ ಮಾಡುತ್ತಾರೆ. ಅದರಲ್ಲೂ, ಇದರಲ್ಲೂ ಡೀ-ನೋಟಿಫೈ ಮಾಡುತ್ತಾರೆ. ಆದರೆ, ಅದನ್ನು ನಾನು ರಿಪೀಟ್ ಮಾಡುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬೇಡಿ. ಅರ್ಥವಾಯಿತೆ? ಉದಾಹರಣೆಗೆ ಯಾರ ಯಾರ ಹೆಸರುಗಳನ್ನೆಲ್ಲಾ ಬಿಡುತ್ತಾರೆಂಬುದನ್ನು ನಾನು ಹೇಳಿದರೆ ಸರಿಹೋಗುವುದಿಲ್ಲ.

ಅಧ್ಯಕ್ಷರು : ದಯಮಾಡಿ, ಮುಗಿಸಿಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಭಾರೀ ದೊಡ್ಡ ಕುಳಗಳ ಜಮೀನು ಯಾರದ್ದು ಅಲ್ಲಿ ಇದೆಯೋ, ಆ ಜಮೀನುಗಳನ್ನು ಫೈನಲ್ ನೋಟಿಫಿಕೇಷನ್‌ನಲ್ಲಿ ಬಿಟ್ಟು ಬಿಡುತ್ತಾರೆ. ಸಣ್ಣ ಸಣ್ಣ ಬಡವರು, ಬಡಜನರು, ರೈತರು, ಯಾರು ದಿಕ್ಕಿಲ್ಲದವರ ಜಮೀನುಗಳನ್ನು ಫೈನಲ್ ನೋಟಿಫಿಕೇಷನ್‌ನಲ್ಲಿ ಸೇರಿಸುತ್ತಾರೆ. ಈ ರೀತಿ ಮಾಡಿ, ಇವತ್ತು ಇಡೀ ಬೆಂಗಳೂರಿನೊಳಗಡೆ ಇರುವ ಪ್ರದೇಶವನ್ನು ಕೈಗಾರಿಕಾಭಿವೃದ್ಧಿ ಮಾಡುತ್ತೇವೆಂಬ ಹೆಸರಿನಲ್ಲಿ ಸಾವಿರಾರು ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡು, ಆ ಭೂಮಿಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ದಂಧೆ ಇವತ್ತು ನಡೆಯುತ್ತಿರುವುದು.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ದಯಮಾಡಿ ಮುಗಿಸಿ. ನೀವು ಆರಂಭಿಸಿ ಒಂದು ಗಂಟೆಯಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದು ಗಂಟೆಯಾಗಲಿಲ್ಲ.

ಅಧ್ಯಕ್ಷರು : 55 ನಿಮಿಷ ಆಗಿರಬಹುದು. 5 ಗಂಟೆಯಲ್ಲಿ ಆರಂಭಿಸಿದ್ದೀರಿ. ಇನ್ನೂ ಬಹಳ ಜನ ಇದ್ದಾರೆ. ಇಷ್ಟು ಸಾರಿ ನಾವು ರಿಕ್ವೆಸ್ಟ್ ಮಾಡಿದರೂ ತಾವು ಕೇಳುವುದಿಲ್ಲವಲ್ಲಾ. ದಯಮಾಡಿ ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಲ್ಲಿಸಿ ಎಂದರೆ ನಾನು ನಿಲ್ಲಿಸುತ್ತೇನೆ. ಅಲ್ಲ, ಅಧ್ಯಕ್ಷರೆ, ನೀವು.................

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ನೀವು ಥ್ರೆಟನ್ ಮಾಡಬೇಡಿ ಈ ಛೇರ್ ಅನ್ನು. ನಾನು ರಿಪೀಟೆಡ್ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದರೂ, ನಿಲ್ಲಿಸಿ ಎಂದು ಹೇಳಿದರೆ ನಿಲ್ಲಿಸುತ್ತೇನೆಂದು ಹೇಳಿದರೆ, that is not the way of talking Being a senior Member ನೀವು ಈ ರೀತಿ ಬಿಹೇವ್ ಮಾಡಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾವ ರೀತಿ ಬಿಹೇವ್ ಮಾಡಬೇಕು?

ಅಧ್ಯಕ್ಷರು : ಏನು ಮತ್ತೆ, ನಾನು ನಿಲ್ಲಿಸಿ ಎಂದು ಹತ್ತಾರು ಸಾರಿ ಹೇಳುತ್ತಿದ್ದೇನೆ, ನಿಲ್ಲಿಸಿ ಎಂದರೆ ನಿಲ್ಲಿಸಿಬಿಡುತ್ತೇನೆಂದು ಹೇಳಿದರೆ ಏನು ಅರ್ಥವಿದೆ ಅದಕ್ಕೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರೊಳಗೆ ಏನರ್ಥವಿದೆ?

ಅಧ್ಯಕ್ಷರು : ನೋ.ನೋ.

ಶ್ರೀ ಶ್ರೀರಾಮರೆಡ್ಡಿ : ಅಧ್ಯಕ್ಷರೆ, ದಯವಿಟ್ಟು ಕ್ಷಮಿಸಿ.

ಅಧ್ಯಕ್ಷರು : ಆಯಿತು. ನೀವು ಮಾತನಾಡುವುದಕ್ಕೆ ಇನ್ನೇನೂ ಇಲ್ಲದಿದ್ದರೆ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಅಧ್ಯಕ್ಷರು ಬರುತ್ತಿದ್ದಾರೆ.....

ಅಧ್ಯಕ್ಷರು : 5 ಗಂಟೆಗೇ ಬರುತ್ತೇನೆಂದಿದ್ದರು. ಎಲ್ಲಾ ಕುಳಿತಿದ್ದರು.

ಶ್ರೀ ಅಗರಜ್ಞಾನೇಂದ್ರ : ಏನು ಮಾಡುವುದು ಸಾರ್, ತಾವು ಬೇಜಾರು ಮಾಡಿ ಕೊಳ್ಳುತ್ತೀರಿ ಎಂದು ಸುಮ್ಮನಿದ್ದೆವು. ಇಲ್ಲಿ ಒಳ್ಳೆಯ ಡಿಸ್ಕಷನ್ ನಡೆಯುತ್ತಿದೆ. ನಾವು ಹೇಗೆ ಮಾಡುವುದು? ಆದುದರಿಂದ, ನಾಳೆ ಮಾರ್ನಿಂಗ್. ತೆಗೆದುಕೊಳ್ಳಿ.

ಅಧ್ಯಕ್ಷರು : ಮಾನ್ಯ ಹೆಗಡೆಯವರೆ, ಅದು ಸಾಧ್ಯವಾಗುವುದಿಲ್ಲ. ಪಾರ್ಟಿಸಿಪೇಟ್ ಮಾಡುವವರು ಇವತ್ತು ಪಾರ್ಟಿಸಿಪೇಟ್ ಮಾಡಿ. ನಾಳೆ ಬೇಕಾದರೆ ಸರ್ಕಾರ ಉತ್ತರ ಹೇಳಲಿ. ನಾಳೆ ಏಕೆಂದರೆ, ಕೂಲಿಗಾಗಿ ಕಾಳು ವಿಚಾರವಿದೆ, ನುಸಿ ರೋಗದ ಬಗ್ಗೆ ಅರ್ಧ ಗಂಟೆ ಚರ್ಚೆ ಇದೆ. ಬೇಕಾದಷ್ಟು ಬಹಳ ಗಂಭೀರವಾದ ವಿಷಯಗಳಿವೆ. ದಯವಿಟ್ಟು ಸಹಕರಿಸಿ ಮಾನ್ಯ ಎಂ.ಟಿ. ಕೃಷ್ಣಪ್ಪನವರು ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬೆಳಿಗ್ಗೆ ಮಾತನಾಡೋಣ. ದಯವಿಟ್ಟು ಅಧ್ಯಕ್ಷರೆ, ಬೆಳಿಗ್ಗೆಯಿಂದ ಕುಳಿತಿದ್ದೇವೆ. ಗಂಟೆ 6 ಆಯಿತು.

ಅಧ್ಯಕ್ಷರು : ಇನ್ನರ್ಧ ಗಂಟೆಯೊಳಗೆ ಇವರು ಮುಗಿಸಬೇಕು. ನಂತರ, ದೇಶಪಾಂಡೆಯವರು ಮಾತನಾಡಬೇಕಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅರ್ಧ ಗಂಟೆಯಾಗುವುದೇ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಮ್ಮಲ್ಲಿ ಇನ್ನೊಂದಿಬ್ಬರು ಮಾತನಾಡುವವರಿದ್ದರು. ನಮ್ಮ ರಾಷ್ಟ್ರೀಯ ಅಧ್ಯಕ್ಷರು ಬರುತ್ತಿದ್ದಾರೆ...

ಅಧ್ಯಕ್ಷರು : ನೀವು ಜವಾಬ್ದಾರಿಯುತವಾದ ವಿರೋಧ ಪಕ್ಷದವರಾಗಿ ಈ ತರಹ ನಿಮ್ಮ ಲೀಡರ್ ಹೋಗಿದ್ದಾರೆ. ನಿಮ್ಮ ಲೀಡರ್ ನಮ್ಮ ಕೆ.ಆರ್. ಪೇಟೆಗೆ ಹೋಗಿದ್ದಾರೆ. ಚರ್ಚೆ ಮುಗಿಯಬೇಕು. ನಾಳೆ ಮತ್ತು ನಾಡಿದ್ದರಲ್ಲಿ ಮುಗಿಯಬೇಕು. ಆದ್ದರಿಂದ, ಈ ಎಲ್ಲಾ ವಿಚಾರಗಳನ್ನೂ ಮುಗಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾಳೆ ಮಧ್ಯಾಹ್ನ ತೆಗೆದುಕೊಳ್ಳಿ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ, 10 ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ ಆಯಿತು ನಿಯಮ 69ರ ಅಡಿಯಲ್ಲಿ ನಾನು ಅಲ್ಪಾವಧಿ ಚರ್ಚೆಗೆ ಸಮಯ ಕೇಳಿದ್ದೆ. ಅದರ ಬಗ್ಗೆ ಉತ್ತರ ಹೇಳಬೇಕು.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಇಲ್ಲೇನು ನೀವು ವಿವಿಧ ಭೂ ಹಗರಣಗಳ ಬಗ್ಗೆ ಕೊಟ್ಟಿದ್ದಿರಿ ಅವರದ್ದು ಬಿಡಿಎ ಬಗ್ಗೆ ಇದ್ದಿದ್ದರಿಂದ ಇದಕ್ಕೆ ಸೇರಿಸಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಜೆಂಡಾದಲ್ಲಿ ಎರಡೂ ಪ್ರಿಂಟಾಗಿದೆ.

ಅಧ್ಯಕ್ಷರು : ನೋ. ನೋ. ಭೂ ಹಗರಣ, ಬಿಡಿಎ ಬಗ್ಗೆ ಎಲ್ಲಾ ಮಾತನಾಡಿದ್ದೀರಿ. ಅದನ್ನೂ, ಇದನ್ನೂ ಮಾತನಾಡಿದ್ದೀರಿ. ಕೃಷ್ಣಪ್ಪನವರೇ 10 ನಿಮಿಷದಲ್ಲಿ ಮುಗಿಸಬೇಕು.

✝ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ವಿಶ್ವೇಶ್ವರ ಲೇಔಟ್‌ನಲ್ಲಿ ಭೂಮಿಯನ್ನು ಡೀ–ನೋಟಿಫಿಕೇಷನ್ ಮಾಡಿಲ್ಲವೆಂದು ಸರ್ಕಾರದಿಂದ ಉತ್ತರ ಬಂದಿದೆ. ಆದರೆ, ಅದು ಅದು ಸುಮಾರು 359 ಎಕರೆ 5 ಗುಂಟೆ ಡೀ–ನೋಟಿಫೈ ಮಾಡಿದ ಡಾಕ್ಯುಮೆಮಟ್ಸ್ ಇದೆ. ಆದರೆ, ನನಗೆ ವೀಷಾದ ವಿಷ್ಟೆ, ಸಂಬಂಧಪಟ್ಟ ಅಧಿಕಾರಿಗಳು ಸದನಕ್ಕೆ ಮತ್ತು ಸದಸ್ಯರಿಗೆ ಮಾಹಿತಿ ಕೊಡುವಾಗ, ತಪ್ಪು ಮಾಹಿತಿ ಕೊಟ್ಟರೆ ಏನು ಮಾಡಬೇಕೆನ್ನುವುದು ನನಗೆ ನಿಜವಾಗಿಯೂ ಬೇಸರ. ಸುಮಾರು 359 ಎಕರೆ 5 ಗುಂಟೆ ಜಮೀನನ್ನು ಡೀ–ನೋಟಿಫೈ ಮಾಡಿದ್ದೆಲ್ಲವೂ ನಮ್ಮ ಹತ್ತಿರ ಡಾಕ್ಯುಮೆಂಟ್ಸ್ ಇವೆ. ಆದರೆ, ನನಗೆ ಸಂಬಂಧದಪಟ್ಟ ಸಚಿವರು ಯಾವುದೇ ಡೀ–ನೋಟಿಫಿಕೇಷನ್ ಆಗಿಲ್ಲ, ಕೇವಲ 80 ಎಕರೆ ಮಾತ್ರ ಸರ್ಕಾರಿ ಜಮೀನಿನು ಇದೆ ಅದನ್ನು ಮಾತ್ರ ಬಿಟ್ಟಿದ್ದೇವೆಂದು ಹೇಳುತ್ತಾರೆ. ಆ ದಿವಸ 359 ಎಕರೆ ಡೀ–ನೋಟಿಫಿಕೇಷನ್ ಆಗಿದೆ. ಮತ್ತೊಂದು ವಿಚಾರ ವೆಂದರೆ, ವಿಪರ್ಯಾಸ ಎಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸರ್ಕಾರದ ಸ್ವಾಮ್ಯದ ಇಲಾಖೆಯ ಅಥವಾ ಪ್ರೈವೇಟ್ ಕಂಪನಿಯೇ ಎಂದು ನನಗೆ ಜಿಜ್ಞಾಸೆ ಇದೆ. ಕಾರಣವೆಂದರೆ, ಯಾವುದೇ ಜಮೀನನ್ನು ಬಹುತೇಕ ಕೈಗಾರಿಕಾ ಇಲಾಖೆಗೆ ಜಮೀನನ್ನು ಕೇಳಿದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಂದು ಉದಾಹರಣೆ ಕೊಡಲು ನಾನು ಬಯಸುತ್ತೇನೆ, ಕೆ.ಆರ್. ಪುರಂ ಬಳಿ ಸುಮಾರು 146 ಎಕರೆ 35 ಗುಂಟೆ ಜಮೀನು ಇದ್ದು, ಗ್ಲೋಬಲ್ ಟೆಲಿಕಾಂ ಎನ್ನುವ ಕಂಪನಿಗೆ ಪೂರ್ಣ ಡೆವಲಪ್ ಮಾಡಿ ಕೊಟ್ಟಿದ್ದಾರೆ. ಗ್ಲೋಬಲ್ ಟೆಲಿಕಾಂನವರು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೆ ಜಮೀನು ಕೇಳಿದ್ದಾರೆ. ಒಂದು ಟೆಲಿಕಾಂನ್ನು ಮಾಡುತ್ತೇವೆ ಜೊತೆಗೆ ಐಟೆಕ್ ಪಾರ್ಕ್‌ನ್ನು ಮಾಡುತ್ತೇವೆ ಎಂದು ಹೇಳಿ ಜಮೀನನ್ನು ಕೇಳಿದರೆ, ಸಂಬಂಧಪಟ್ಟ ಸಚಿವರು ಆ ಇಲಾಖೆಯವರು ಅದನ್ನು ಇಂಡ್‌ಸ್ಟ್ರಿಯಲ್ ಜಮೀನನ್ನು ಹೊರತುಪಡಿಸಿ, ಇಂಡ್‌ಸ್ಟ್ರಿಗೆ ಭೂಮಿಯನ್ನು ಕೊಡದೆ ಅದನ್ನು ಏಕಾಏಕಿ........ ಅವರು ಕೇಳಿರುವುದು, ಕೆಐಎಡಿಗೆ ಇಂಡ್‌ಸ್ಟ್ರಿ ಮಾಡುತ್ತೇವೆ ಜಮೀನು ಕೊಡಿ ಎಂದು

ಕೇಳಿದ್ದಾರೆ, ಆದರೆ ಸರ್ಕಾರ ಏನು ಮಾಡಿದೆ ಓವರ್‌ನೈಟ್ ಒಂದು ಸಭೆ ಕರೆದು ಮೀಟಿಂಗ್ ಮಾಡಿ ಒಂದು ಡೆವಲೆಪ್ ಆದಂಥ ಸುಮಾರು 146 ಎಕರೆ 35 ಗುಂಟೆ ಭೂಮಿ ಕೆ.ಆರ್.ಪುರಂ ಹತ್ತಿರ, ಪೂರ್ಣವಾಗಿ ಡೆವಲೆಪ್‌ಮೆಂಟ್, ಸುಮಾರು 35 ರಿಂದ 40 ಕೋಟಿ ರೂಪಾಯಿ ಖರ್ಚು ಮಾಡಿ ಬೆಂಗಳೂರು ಪ್ರಾಧಿಕಾರ ನಿರಂತರವಾಗಿ ಡೆವಲೆಪ್‌ಮೆಂಟ್ ಮಾಡಿದಂಥ ಭೂಮಿಯನ್ನು ಕೇವಲ 35 ಕೋಟಿರೂಗೆ ಅವರಿಗೆ ಮಾರಾಟ ಮಾಡುತ್ತದೆ, ಗ್ಲೋಬಲ್ ಟೆಲಿಕಾಂ ಸ್ಥಾಪನೆ ಮಾಡಿದಂಥ ಒಂದು ಕಂಪನಿಗೆ. ಅದು ಇವತ್ತು ಕೇವಲ ಬಿಡಿಎ ಮಾಡಿದಂಥ ನಿವೇಶನವನ್ನು ಅವರು ಸ್ವಂತವಾಗಿ ಖಾಸಗಿಯಾಗಿ ಮಾರಾಟ ಮಾಡುತ್ತಿದ್ದಾರೆ. ಇವತ್ತು ಲಕ್ಷಾಂತರ ರೂಪಾಯಿ ಬೆಲೆವುಳ್ಳದ್ದು ನಮ್ಮ ರಾಜ್ಯದಲ್ಲಿ ಲಕ್ಷಾಂತರ ಜನ ಅರ್ಜಿ ಹಾಕಿ 3, 4, 5 ವರ್ಷ ಅಟೆಮ್ಪ್ಟ್ ಮಾಡಿ ಕಾದು ಕುಳಿತರೂ ಸಹ ಒಂದು ನಿವೇಶನ ಸಿಗದೇ ಇರುವಂಥ ಕಾಲದಲ್ಲಿ ಸರ್ಕಾರ ಇಂಥ ಒಂದು ಕೆಟ್ಟ ತೀರ್ಮಾನ ತೆಗೆದು ಕೊಂಡರೆ ಶ್ರೀ ಸಾಮಾನ್ಯನ ಗತಿ ಏನಾಗಬೇಕು? ಈ ಬಗ್ಗೆ ಚಿಂತನೆ ಮಾಡಬೇಕು. ಏನು 146 ಎಕರೆ 36 ಗುಂಟೆ ಭೂಮಿಯನ್ನು ಈ ಡೆವಲೆಪ್‌ರ್ಸ್‌ಗೆ ಗ್ಲೋಬಲ್ ಟೆಲಿಕಾಂಗೆ ಕೊಟ್ಟಿದ್ದಾರೆ, ದಯಮಾಡಿ ಅದನ್ನು ರದ್ದು ಮಾಡಲಿಕ್ಕೆ ತಾವು ಚಿಂತನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರ, ಈ ರಾಜ್ಯದ ಅತ್ಯುನ್ನತವಾದಂಥ ಮುಖ್ಯ ಕಾರ್ಯದರ್ಶಿ ಹುದ್ದೆ, ಸನ್ಮಾನ್ಯ ಬಿ.ಎಸ್. ಪಾಟೀಲ್‌ರವರು, ಹಿಂದೆ ಇದ್ದಂಥ ಮುಖ್ಯ ಕಾರ್ಯದರ್ಶಿಯವರು, ಅವರೂ ಸಹ 26–6–2001ಕ್ಕೆ ಕಂಪನಿ ರಿಜಿಸ್ಟರ್ ಮಾಡಿದ್ದಾರೆ. ಆ ದಿನ ಆ ಕಂಪನಿಯನ್ನು ರಿಜಿಸ್ಟರ್ ಮಾಡಿ, ಅದು 110 ಎಕರೆ ಜಮೀನು ಕೊಡಿ ಎಂದು ಕೈಗಾರಿಕಾ ಇಲಾಖೆಗೆ ಕೇಳಿದ್ದಾರೆ. ಆದರೆ, ಸರ್ಕಾರದವರು ಏನು ಮಾಡಿದ್ದಾರೆ, ಕೈಗಾರಿಕಾ ಜಮೀನು ಕೊಡಲಿಲ್ಲ, ಅವರಿಗೂ ಸಹ ಜೂನ್ 26ಕ್ಕೆ ಕಂಪನಿ ರಿಜಿಸ್ಟರ್ ಮಾಡಿ, ಜುಲೈ 10ಕ್ಕೆ 110 ಎಕರೆ ಜಮೀನನ್ನು ಕೈಗಾರಿಕಾ ಇಲಾಖೆಗೆ ಕೊಟ್ಟು ಅದನ್ನು ನಿವೇಶನ ಮಾಡಲಿಕ್ಕೆ ಕೊಟ್ಟಿದ್ದಾರೆ. ಫುಲ್ಲಿ ಡೆವಲೆಪ್ಡ್ ಲ್ಯಾಂಡ್ ಅದು. ಅದೇನೂ ಪ್ಲೇನ್ ಲ್ಯಾಂಡ್ ಅಲ್ಲಾ, ಅದು ಫುಲ್ಲಿ ರಸ್ತೆ ಮಾಡಿ, ಸ್ಯಾನಿಟೇಷನ್ ಮಾಡಿ, ವಾಟರ್ ಸಪ್ಲೈ ಮಾಡಿ, ಇವೆಲ್ಲಾ ಮಾರಾಟ ಮಾಡುವುದಾದರೆ, ಬಿಡಿಎ ಕೆಲಸ ಏನು? ಬಿಡಿಎ ಗಿಂತ ಬದಲಾಗಿ ಎಲ್ಲವೂ ಸಹ ನಮ್ಮ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಇಡೀ ಜಮೀನನ್ನು ಕೋ–ಅಪರೇಟಿವ್ ಸೊಸೈಟಿಗೆ ಕೊಟ್ಟುಬಿಟ್ಟರೆ, ಇದಕ್ಕಿಂತಲೂ ಚೆನ್ನಾಗಿ ಮಾಡುತ್ತಾರೆ. ಅವರೂ ದುಡ್ಡು ಮಾಡಿಕೊಳ್ಳುತ್ತಾರೆ ಜನರಿಗೂ ಅನುಕೂಲವಾಗುತ್ತದೆ. ಇವರು ಒಂದು ಲಕ್ಷ ಒಂದೂವರೆ ಲಕ್ಷ ರೂ ರೈತರಿಗೆ ಕೊಟ್ಟು ಅವರ ಭೂಮಿಗಳನ್ನು ಅಕ್ವೈರ್ ಮಾಡಿಕೊಳ್ಳುತ್ತಾರೆ, 35 ಕೋಟಿ 45 ಕೋಟಿ ರೂ ಕೊಟ್ಟು ಡೆವಲೆಪ್ ಮಾಡಿದ ಭೂಮಿಯನ್ನು ಯಾವುದೋ ಒಂದು ಪ್ರೈವೈಟ್ ಕಂಪನಿಗೆ ಅಥವಾ ಪಾರ್ಟಿಗೆ ಕೊಟ್ಟರೆ ಇದರ ಅರ್ಥ ಏನು? ಬೆಂಗಳೂರು ಪ್ರಾಧಿಕಾರ ಇವತ್ತು ಸಂಪೂರ್ಣವಾಗಿ ಒಂದು ಎಸ್ಟೇಟ್ ಏಜೆನ್ಸಿ ಯಾಗಿ ಕೆಲಸ ಮಾಡುತ್ತದೆ ಹೊರತು ಸಾಮಾನ್ಯ ಜನತೆಯ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಎರಡು ಉದಾಹರಣೆಗಳನ್ನು ತಮ್ಮ ಮುಂದೆ ನಾನು ಕೊಡಲಿಕ್ಕೆ ಬಯಸುತ್ತೇನೆ. ಪ್ರತಿ ದಿವಸ ಪತ್ರಿಕೆಗಳಲ್ಲಿ ಬಂದಿದ್ದನ್ನು ನಾವು ನೀವು ಎಲ್ಲರೂ ನೋಡಿದ್ದೇವೆ. ಬೆಂಗಳೂರು ನಗರದಲ್ಲಿ ಅನಧಿಕೃತವಾಗಿರುವ ಕಟ್ಟಡವನ್ನು ಡೆಮಾಲಿಷ್ ಮಾಡಿದ್ದೇವೆ, ಇಂದಿರಾನಗರದಲ್ಲಿರ ಬಹುದು, ಹೆಚ್‌ಎಎಲ್ 2ನೇ ಸ್ಟೇಜ್‌ನಲ್ಲಿ ಇರಬಹುದು, ಸುಮಾರು 250 ಕೋಟಿ ರೂಪಾಯಿಯ ಪ್ರಾಪರ್ಟಿ ಜಮೀನನ್ನು ಡೆಮಾಲಿಷ್ ಮಾಡಿದ್ದೇವೆಂದು ಬಂದಿರುವುದನ್ನು ಬಹಳಷ್ಟು ಪತ್ರಿಕೆಗಳಲ್ಲಿ ನೋಡಿದ್ದೇವೆ. ಬೆಂಗಳೂರು ಪ್ರಾಧೀಕಾರದ ವತಿಯಿಂದ, ವಿತ್ ಆ ಕಮೀಷನರ್‌ರ ಫೋಟೊ, ಸಂಬಂಧಪಟ್ಟವರ

ಸಚಿವರ ದೊಡ್ಡ ಅಡ್ವರ್‌ಟೈಸ್‌ಮೆಂಟ್ ಹಾಕಿ, ಪೊಲೀಸ್ ಫೋರ್ಸ್ ತೆಗೆದುಕೊಂಡು ಹೋಗಿ, ಮಾಡಿದಂಥ ಡೆಮಾಲಿಷ್ ಸುಮಾರು 250 ಕೋಟಿ ರೂಪಾಯಿ ಎಂದು ಹೇಳಿದಿರಿ. ಅದು ಎಷ್ಟು ಎಂದು ನನಗೆ ಸರಿಯಾಗಿ ಲೆಕ್ಕ ಸಿಕ್ಕಿಲ್ಲ. ಈ ಭೂಮಿಯನ್ನು ಯಾರಿಗೆ ಕೊಟ್ಟಿದ್ದಾರೆ? ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ? ನಮ್ಮ ಬಿಡಿಎ ಗೆ ಎಷ್ಟು ಕೋಟಿ ರೂ ಬಂದಿದೆ ಎನ್ನತಕ್ಕಂಥದದ್ದರ ಬಗ್ಗೆ ನಾನು ಹತ್ತಾರು ಸಾರಿ ಕೇಳಿದರೂ ನನಗೆ ಮಾಹಿತಿ ಸಿಕ್ಕಿಲ್ಲ. ಮೊನ್ನೆನೂ ಸಹ ಯಾವುದೋ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ತಾವೇ ಆದೇಶ ಮಾಡಿದಿರಿ, 69ರಲ್ಲಿ ಕನವರ್ಟ್ ಮಾಡಿ ಕೇಳಿದಾಗಲೂ ಸಹ ನಾನು ಅದನ್ನು ಬರೆದು ಕೊಟ್ಟಿದ್ದೇನೆ, ಯಾರಿಗೆ ಅಲಾಟ್ ಮಾಡಿದಿರಿ? ಮೋಡ್ ಆಫ್ ಅಲಾಟಮೆಂಟ್ ಏನು? Whims and fancy ಆಗಿದೆಯೇ? ರಿಯಲ್ಲಾಗಿ ಕೇಳಿದವರಿಗೆ ಕೊಟ್ಟಿದ್ದಿರಾ? ಅಥವಾ ಇನ್‌ಫ್ಲೂಯೆನ್ಸ್‌ಗೆ ಕೊಟ್ಟಿದ್ದಾರಾ? ಅಥವಾ ಕಮೀಷನ್‌ಗೆ ಕೊಟ್ಟಿದ್ದಿರಾ? ಯಾವ ರೀತಿ ಮಾರಾಟ ಮಾಡಿದ್ದಾರೆ? ಇಂದಿರಾನಗರದಲ್ಲಿ 25 ಸಾವಿರ ಚದರ ಅಡಿ ಅದರ ಬೆಲೆ ಇವತ್ತು ಅಪ್ರಾಕ್ಸಿಮೇಟ್ ಆಗಿ ಲೆಕ್ಕ ಹಾಕಿದರೆ ಇವತ್ತು ಸುಮಾರು 5 ರಿಂದ 6 ಕೋಟಿ ರೂಪಾಯಿ ದುಡ್ಡು ಆಗುತ್ತದೆ. ಅದನ್ನು ಡೆಮಾಲಿಷ್ ಮಾಡಿ ಯಾರೋ ಒಬ್ಬ ಅಧಿಕಾರಿಗೆ ಕೊಟ್ಟಿದ್ದಾರೆ. ಒಬ್ಬ ಐಎಎಸ್ ಅಧಿಕಾರಿ ಇರಬಹುದು, ಒಬ್ಬ ಅಧಿಕಾರಿ, I don't want to tell his name. ಈ ರೀತಿ ಅಧಿಕಾರಿಗಳು, ಡೆವಲೆಪ್ ಮಾಡಿದಂಥ ಭೂಮಿಯನ್ನು ಡೆಮಾಲಿಷ್ ಮಾಡಿ ತಾವುತಾವೇ ಇಟ್ಟುಕೊಳ್ಳುವುದಾದೆ, ಸರ್ಕಾರ ಏಕೆ ಬೇಕು? ಎನ್ನುವುದರ ಬಗ್ಗೆ ವಿಚಾರ ಮಾಡಬೇಕು. ಸರ್ಕಾರ ಯಾವ ನಿಟ್ಟಿನಲ್ಲಿ ಹೋಗುತ್ತದೆ ಎಂಬುದನ್ನು ತಾವು ದಯಮಾಡಿ ಚಿಂತನೆ ಮಾಡಿ ಕೊಳ್ಳಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ. ಗಿಡುಗನಕೋಲಿಗನಹಳ್ಳಿಯಲ್ಲಿ ಸರ್ವೆ ನಂಬರ್ 14–3ರಲ್ಲಿ ಸುಮಾಸಸರು 50 ರಿಂದ 60 ಜನ ಬಡವರು ಸಣ್ಣ ಸಣ್ಣ ಮನೆ ಕಟ್ಟಿದ್ದರು ಅದರೆ ಬಿಡಿಎ ನವರು ಏಕಾಏಕಿ ರಾತ್ರೋರಾತ್ರಿ ಒಡೆದುಹಾಕಿದ್ದಾರೆ. ಅವರು, ಒಟ್ಟಾರೆ 60 ಫ್ಯಾಮಿಲಿ, ಅವರಿಗೆ ಎಲ್ಲಿ ಸೈಟು ಕೊಟ್ಟರು ಎಂಬುದರ ಬಗ್ಗೆ ಇವತ್ತಿನವರೆಗೆ ಮಾಹಿತಿ ಇಲ್ಲ. ಎಲ್ಲಿ ಕೇಳುವುದು ಪಾಪ ಮನೆ ಮೆನೆಗೆ ಅಲೆಯುತ್ತಾರೆ. ಸ್ವಾಮಿ ನಮ್ಮದು ಮನೆ ಒಡೆದು ಹಾಕಿದರು ಏನಾದರೂ ಮಾಡಿ ಎಲ್ಲಿಯಾದರೂ ಸೈಟು ಕೊಡಿಸಿ ಏಕೆಂದರೆ ನಮಗೆ ಮನೆಯಲ್ಲ ಅಂಥವರು ಸಾವಿರಾರು ಜನರು, ಲಕ್ಷಾಂತರ ಜನ ಸೈಟಿಗೆ ನಿಂತಿದ್ದಾರೆ. ಸೈಟ್ ಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ದುರಂತ ಬೆಂಗಳೂರು ಪ್ರಾಧಿಕಾರ ಅಕ್ವಿಜಿಷನ್ ಮಾಡಿ, ಡೆವಲೆಪ್ ಮಾಡಿ, ಯಾವುದೋ ಪ್ರವೈಟ್ ಕಂಪನಿಗೆ ಏಜೆನ್ಸಿ ಮಾಡುವುದಾದರೆ, ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಇದು ಯಾವ ರೀತಿ ಆಗುತ್ತದೆ? ಈ ದುರಂತ ಹೇಗೆ ಆಗುತ್ತದೆ? ಇದಕ್ಕೆ ಸಂಬಂಧಪಟ್ಟ ಹೊಣೆಗಾರರು ಯಾರು? ಹಿಂದೆ ಇದ್ದಂಥ ಸಚಿವರು ಯಾರು? ಆಡಳಿತ ಮಾಡಿದ್ದಂಥ ಸಚಿವರು ಯಾರು? ಹೊಣೆಗಾರಿಕೆಯನ್ನು ತಾವು ಫಿಕ್ಸ್ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ಅನೇಕ ವಿಷಯಗಳು ಇವೆ, ಅದರಲ್ಲಿ ಬೆಂಗಳೂರು ಪ್ರಾಧಿಕಾರದ ವೈಶಿಷ್ಟ ಏನೆಂದರೆ, ಕಂಟ್ರಾಕ್ಟ್ ಕೊಡಬೇಕಾದರೆ ಇಂಥಿಂಥವರಿಗೆ ಕೊಡಬೇಕು, ಸುಮಾರು 3 ಕೋಟಿ ರೂಪಾಯಿ ಟ್ರಾನ್‌ಜಾಕ್ಷನ್ ಮಾಡಬೇಕು. ಅಲ್ಲ ಸ್ವಾಮಿ, ಈ ರಾಜ್ಯದಲ್ಲಿ 300 ರಿಂದ 400 ಇಂಜಿನಿಯರಿಂಗ್ ಕಾಲೇಜುಗಳು ಇವೆ. ಲಕ್ಷಾಂತರ ಜನ ಡಿಗ್ರಿ ಮಾಡಿಕೊಂಡು ಹೊರಗಡೆ ಬರುತ್ತಾರೆ, ಅವರಿಗೆ ಕೆಲಸ ಇಲ್ಲದೇ ಬೆಳಿಗ್ಗೆಯಿಂದ ಸಂಜೆಯ ತನಕ ಅಲೆಯುತ್ತಿರುತ್ತಾರೆ, ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೂ ಸಹ ಅವರಿಗೆ ಶಕ್ತಿ ಇಲ್ಲ, ಸರ್ಕಾರಿ ಕೆಲಸ ಸಿಕ್ಕುವವುದಿಲ್ಲ, ಇಂಥ ಸಂದರ್ಭದಲ್ಲಿ ಬೆಂಗಳೂರು ಪ್ರಾಧಿಕಾರ by insisting some condition

3 ಕೋಟಿ ರೂಪಾಯಿ ಕೆಲಸ ಮಾಡಿರಬೇಕು, ಎಲ್ಲಿ ಮಾಡುವುದಕ್ಕೆ ಸಾಧ್ಯ? ಮೂರು ಕೋಟಿ ರೂಪಾಯಿ ಕೆಲಸ ಮಾಡಿದವನಿಗೆ ಕೆಲಸ ಕೊಡಬೇಕು, ಅಂಥವನಿಗೆ ಟೆಂಡರ್ ಹಾಕಬೇಕು ಎಂದು ಸುಮಾರು 3 ವರ್ಷಗಳಿಂದ ನೋಡುತ್ತಿದ್ದೇನೆ, ಮೂರು ವರ್ಷಗಳಿಂದ ಕೇವಲ ಎರಡೇ ಕಂಪನಿಗಳಿಗೆ ಕೋಟ್ಯಾಂತರ ರೂಪಾಯಿ ದುಡ್ಡನ್ನು ಕೊಟ್ಟುಕೊಂಡು ಬಂದಿದ್ದಾರೆ, ಕೇವಲ ಎರಡೇ ಎರಡು ಕಂಪನಿಗಳು ಅದರಲ್ಲಿ (1) ಲಕ್ಷಣ್ ಅಂಡ್ ಹಿಸ್ ಪಾರ್ಟಿ, ಇದರಿಂದ ಅರ್ಥವಾಗುತ್ತದೆ, ಬೆಂಗಳೂರು ಪ್ರಾಧಿಕಾರ ಯಾವ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತದೆ, ಇದರಿಂದ ಕೇವಲ ಸ್ವಜನ ಪಕ್ಷಪಾತ ಅವರು 4–5 ಜನ ಕಂಟ್ರಾಕ್ಟ್‌ರ್‌ಗಳಿಂದ ಬಿಡಿಎ ನಡೆಸುತ್ತಿದ್ದಾರಾ ಅಥವಾ ನ್ಯಾಯ ಸಮ್ಮತವಾಗಿ ಕಾನೂನು ಚೌಕಟ್ಟಿನಲ್ಲಿ ಈ ಕಂಟ್ರಾಕ್ಟ್ ನಡೆಯುತ್ತಿರುವ ಬಗ್ಗೆ ನನಗೆ ಬಹಳ ಜಿಜ್ಞಾಸೆ ಬಂದಿದೆ. ದಯಮಾಡಿ ಈ ಎಲ್ಲವನ್ನೂ ಸಹ, ಈ ಬೆಂಗಳೂರು ಪ್ರಾಧಿಕಾರದ ಬಗ್ಗೆ ಸುದೀರ್ಘವಾಗಿ ಕೆಐಎಡಿಬಿ ಇರಬಹುದು, ಬೆಂಗಳೂರು ಡೆವಲೆಪ್‌ಮೆಂಟ್ ಅಥಾರಿಟಿ ಇರಬಹುದು, ಇವೆಲ್ಲವನ್ನೂ ಸಹ ಸಂಪೂರ್ಣವಾಗಿ ಒಂದು ಪರಿಹಾರ ಕಂಡು ಹಿಡಿಯಬೇಕು, ಯಾವ್ಯಾವ ಅಧಿಕಾರಿಗಳು ಎಲ್ಲೆಲ್ಲಿ ಈ ಒಂದು ಕಾಳಸಂತೆ ಮಾಡಿದ್ದಾರೆ, ಸರ್ಕಾರಕ್ಕೆ ಮೋಸ ಮಾಡಿದ್ದಾರೆ, ಶ್ರೀ ಸಾಮಾನ್ಯ ನಿಗೆ ಅನ್ಯಾಯ ಮಾಡಿದ್ದಾರೆ ಎನ್ನುವುದರ ಬಗ್ಗೆ ನಾನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇತಿಹಾಸವನ್ನು ನಾವು ಚಿಂತನೆ ಮಾಡಬೇಕಾದರೆ, ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೇ ಒಂದು ಸಿಓಡಿ ತನಿಖೆಗೆ ದಯಮಾಡಿ ಆದೇಶ ಮಾಡಬೇಕು. ನಮ್ಮ ಎಲ್ಲಾ ಬಹಳ ಜನ ಶಾಸಕರು, ಸೈಟ್‌ಗೋಸ್ಕರ, 2–3 ಬಾರಿ ಗೆದ್ದಂಥ ನನ್ನ ಮಿತ್ರ ಶಾಸಕರಿಗೆ ಇವತ್ತು ನಿವೇಶನ ಇಲ್ಲ. ಶಾಸಕರಿಗೆ ಇಲ್ಲವೆಂದರೆ ಶ್ರೀಸಾಮಾನ್ಯನ ಗೋಳು ಬಿಡಿ ಅದನ್ನು ನಾವು ಕೇಳುವುದಕ್ಕೆ ಆಗುವುದಿಲ್ಲ. ಏತಕ್ಕೆ ಎಂದರೆ, ಬೆಂಗಳೂರು ಪ್ರಾಧಿಕಾರದವರು ಲೇಔಟ್ ಮಾಡುವುದು, ಪ್ರವೈಟ್‌ನವರಿಗೆ ಮಾಡುವುದು, ಅವರು ಅರ್ಜಿ ಹಾಕಿಕೊಂಡು ಸೈಟು ಇವತ್ತು ಸಿಗುತ್ತದೆ, ನಾಳೆ ಸಿಗುತ್ತದೆ ಎಂದು ಕಾದು ಕುಳಿತಿರುತ್ತಾರೆ. ಮುಖ್ಯಮಂತ್ರಿಗಳ ಹತ್ತಿರ ಹೋಗಿ ಕ್ಯೂನಲ್ಲಿ ನಿಂತುಕೊಂಡು ಅರ್ಜಿ ಕೊಡುವುದು, ಸ್ವಾಮಿ ನನಗೊಂದು ಸೈಟ್ ಕೊಡಿಸಿ ಎಂದು ಕೇಳುವುದು, ಸಂಬಂಧಪಟ್ಟ ಸಚಿವರಿಗೂ ಒಂದು ಅರ್ಜಿ ಕೊಟ್ಟು ಸ್ವಾಮಿ ಒಂದು ಸೈಟ್ ಕೊಡಿ ಎಂದು ಕೇಳುವುದು, ಅವರ್‍ಯಾರಿಗೂ ಸಿಗುವುದಿಲ್ಲ, ಜೂನ್ 26 ಕಂಪನಿ ರಿಜಿಸ್ಟರ್ ಮಾಡುತ್ತಾರೆ, ಜುಲೈ 15ಕ್ಕೆ ಫುಲ್ 110ಎಕರೆಯ ಒಂದು ಲೇಔಟ್ ಕೈಗೆ ತೆಗೆದುಕೊಳ್ಳುತ್ತಾರೆ. ಅಂಥ ಒಂದು ಪರಿಸ್ಥಿತಿಯಲ್ಲಿ ತಾವು ದಯಮಾಡಿ ಸಂಪೂರ್ಣವಾಗಿ ನೀವು ವಿಮರ್ಶೆ ಮಾಡಬೇಕಾದರೆ, ಒಂದು ಸಿಓಡಿ ತನಿಖೆಯನ್ನು ನಡೆಸಲಿಕ್ಕೆ ತಾವು ಸರ್ಕಾರಕ್ಕೆ ಆದೇಶ ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಂಡು ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು : ಡಾ: ಕೆ. ಅನ್ನದಾನಿಯವರೆ, ತಮ್ಮ ಮಾತನ್ನು ಈಗ ಪ್ರಾರಂಭ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಮಯವಾಗಿದೆ. ಮತ್ತೆ ಸದನದಲ್ಲಿ ಸದಸ್ಯರ ಸಂಖ್ಯೆ ಕೂಡ ಕಡಿಮೆಯಾಗಿದೆ. ಆದ್ದರಿಂದ ನಾಳೆ ಬೆಳಿಗ್ಗೆ 1 ಗಂಟೆ ಮುಂಚಿತವಾಗಿಯೆ ಪ್ರಾರಂಭ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು : ಈ ವಿಷಯದ ಮೇಲಿನ ಚರ್ಚೆಯನ್ನು ಇವತ್ತೆ ಮುಗಿಸೋಣ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸದನವನ್ನು ಬೇಗ ಮುಗಿಸಿ ಎಂದು ನಾವು ಯಾವತ್ತೂ ಕೂಡ ಕೇಳಿಲ್ಲ. ಆದರೆ, ಇವತ್ತಿನದಿವಸ ಬೆಂಗಳೂರಿಗೆ ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಬರುತ್ತಾರೆ. ಇದು ತಮಗೂ ಕೂಡ ಗೊತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರ ಕಡೆ ಲೀಡರ್ ಇಲ್ಲಿಗೆ ಬಂದಂಥ ಸಂದರ್ಭದಲ್ಲಿ ಸುಮಾರು 5.00 ಗಂಟೆ ಮುಂಚಿತವಾಗಿಯೇ ಸದನವನ್ನು ಮುಕ್ತಾಯ ಮಾಡಲಾಗಿದೆ. ಆದ್ದರಿಂದ, ಈಗ ಅಡ್ಜನ್ ಮಾಡಿ ನಾಳೆ ಬೆಳಿಗ್ಗೆ ಒಂದು ಗಂಟೆ ಮೊದಲು ಪ್ರಾರಂಭ ಮಾಡಿ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ತಾವು ಈಗಾಗಲೇ ಈ ವಿಷಯದ ಬಗ್ಗೆ ಮಾತನಾಡಿದ್ದೀರಿ. ಬೇರೆಯವರೂ ಕೂಡ ಇದೇ ರೀತಿಯಾಗಿ ಮಾತ ನಾಡಬೇಕಲ್ಲವೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಾಳೆ ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭ ಮಾಡಿ.

ಅಧ್ಯಕ್ಷರು : ನಾಳೆ ಕೂಡ ಇದೇ ರೀತಿಯಾದ ಗಂಭೀರವಾದ ಸಮಸ್ಯೆಗಳು ಬಗ್ಗೆ ಚರ್ಚೆ ಮಾಡಬೇಕಾಗಿದೆ. ಮತ್ತೆ ಇದರ ಬಗ್ಗೆಯೂ ಕೂಡ ಚರ್ಚೆಯಾಗಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ 11.00 ಗಂಟೆಗೆ ಪ್ರಾರಂಭ ಮಾಡುವ ಬದಲು 2 ಗಂಟೆ ಮೊದಲು ಅಂದರೆ ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭ ಮಾಡಿದರೆ ನಾವೆಲ್ಲರೂ ಕೂಡ ಬರುತ್ತೇವೆ. ಈಗ ವಿರೋಧಪಕ್ಷದವರೆಲ್ಲರೂ ಖಾಲಿ ಆದಾಗ ಸದನವನ್ನು ನಡೆಸುವುದಾದರೂ ಹೇಗೆ?

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭ ಮಾಡಿ.

ಅಧ್ಯಕ್ಷರು : ನಾಳೆ ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭ ಮಾಡಬಹುದೆ?

ಶ್ರೀ ಅರಗ ಜ್ಞಾನೇಂದ್ರ : ನಾಳೆ ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭ ಮಾಡಿ. ನಾವೆಲ್ಲರೂ ಕೂಡ ಆ ಸಮಯಕ್ಕೆ ಬರುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ 9.00 ಗಂಟೆಗೆ ತಾವು ಸದನವನ್ನು ಪ್ರಾರಂಭ ಮಾಡಿದರೂ ಕೂಡ ನಾವೆಲ್ಲ ಬರುತ್ತೇವೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ 9.00 ಗಂಟೆಗೆ ಸದನವನ್ನು ಪ್ರಾರಂಭ ಮಾಡುವುದು to early ಆದ್ದರಿಂದ, 10.00 ಗಂಟೆಗೆ ಪ್ರಾರಂಭ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ, ನಾಳೆ ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭ ಮಾಡಿ.

ಅಧ್ಯಕ್ಷರು : ಈಗಾಗಲೇ ಬಹಳ ಸಮಯವಾಯಿತು ಮತ್ತು ಬಿ.ಜೆ.ಪಿ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಬರುವುದರಿಂದ ಈಗ ಸದನವನ್ನು ಮುಗಿಸಿ ಎಂದು ಕೇಳುತ್ತಿದ್ದಾರೆ. ಆದ್ದರಿಂದ ನಾಳೆ ಬೆಳಿಗ್ಗೆ 10.00 ಗಂಟೆಗೆ ಆರಂಭ ಮಾಡುವುದರ ಬಗ್ಗೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಏನು ಹೇಳುತ್ತೀರಿ? ಏಕೆಂದರೆ ಚರ್ಚೆಯಾಗತಕ್ಕಂಥ ಬಹಳ ವಿಷಯಗಳು ಇವೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, 5ನೇ ತಾರೀಖಿನವರೆಗೆ ಸದನವನ್ನು ನಡೆಸಬೇಕೆಂದು ಈಗಾಗಲೇ ನಿರ್ಣಯವಾಗಿದೆ. ಆದ್ದರಿಂದ, ಈಗ ಸದಸ್ಯರ್‍ಯಾರೂ ಇಲ್ಲದಿದ್ದರೆ ನಾವು ಯಾರಿಗಾಗಿ ಮಾತನಾಡುವುದಕ್ಕೆ ಆಗುತ್ತದೆ? ಈ ಒಂದು ಕಾರಣಕ್ಕಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭ ಮಾಡಿ.

ಶ್ರೀ ಅರಗ ಜ್ಞಾನೇಂದ್ರ : ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಇಲ್ಲಿಗೆ ಬಂದಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ನಮ್ಮ ಕಡೆಯ ಸದಸ್ಯರು ಬಹಳ ಕಡಿಮೆ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, 10 ಗಂಟೆಗೆ ಎಂದು ಹೇಳಿ ತಾವು ಬಿಲ್ ಹಾಕಿದರೂ ಕೂಡ ಆ ಸಮಯಕ್ಕೆ ಯಾರೂ ಬಂದಿರುವುದಿಲ್ಲ. ಮೊನ್ನೆ ದಿವಸ 10 ಗಂಟೆಗೆ ಪ್ರಾರಂಭ ಎಂದು ಬಿಲ್ ಹಾಕಿದರೂ ಕೂಡ 10.30 ಗಂಟೆಯವರೆಗೆ ಯಾರೂ ಬಂದಿರಲಿಲ್ಲ ಸದನವೆಲ್ಲವೂ ಕೂಡ ಖಾಲಿ ಇತ್ತು. ನೀವು 10.00 ಗಂಟೆಗೆ ಕರೆದರೂ ನಾವು ಮಾತ್ರ ತಪ್ಪದೆ ಅದೇ ಸಮಯಕ್ಕೆ ಇಲ್ಲಿ ಹಾಜರಾಗಿರುತ್ತೇವೆ. ಸದನ ಪ್ರಾರಂಭವಾದ ನಂತರವೂ ಕೂಡ ಖಾಲಿ ಇದ್ದರೆ ನಾವು ಯಾರ ಜೊತೆ ಮಾತನಾಡಬೇಕು? ಸದನದಲ್ಲಿ ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಇಲ್ಲದಿದ್ದರೆ ತಪ್ಪಾಗುತ್ತದೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಇವತ್ತು ಜೆ.ಡಿ.ಎಸ್. ಪಕ್ಷದ ಸಭೆಯೂ ಕೂಡ ಇದೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ 10–00 ಗಂಟೆಗೆ ಪ್ರಾರಂಭ ಮಾಡುವುದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಹೇಳಿರುವಂತೆ ನಾಳೆ ಬೆಳಿಗ್ಗೆ 10.00 ಗಂಟೆಗೆ ಸದನವನ್ನು ಪ್ರಾರಂಭ ಮಾಡಬಹುದು.

ಅಧ್ಯಕ್ಷರು : ಈಗ ಸಭೆಯನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ:4ನೇ ಆಗಸ್ಟ್ ಮಾಹೆ 2004ರ ಬುಧವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮುತು. ಕಾಸೂ. 110, 350 ಪುಸ್ತಕಗಳು, ದಿನಾಂಕ: 17–9–2005

(✝ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)